# ಕರ್ನಾಟಕ ಲೋಚನ

ಸಂಪುಟ ೮ ಡಿಸೆಂಬರ್ ೧೯೯೫ ಸಂಚಿಕೆ ೨

8-2

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬೆಂಗಳೂರು-೫೬೦ ೦೧೯

# "ಕರ್ನಾಟಕ ಲೋಚನ"



**ಲೇಖನಗಳು—ಟಿಪ್ಪಣಿಗಳು**

ಸಂಶೋಧನಾತ್ಮಕ, ಪಾಂಡಿತ್ಯ, ವಿದ್ವತ್‌ಪೂರ್ಣ ಲೇಖನಗಳು ಹಾಗೂ ಹೊಸದಾಗಿ ಪ್ರಕಟವಾಗುವ ಉತ್ತಮ ಮಟ್ಟದ ಸಂಪಾದಿತ ಗ್ರಂಥಗಳು ಮತ್ತು ಶಾಸ್ತ್ರ ಸಾಹಿತ್ಯದ ಗ್ರಂಥಗಳು - ಇವುಗಳ ಮೇಲಣ ವಿಮರ್ಶೆಗಳು ವಿದ್ವದ್ವಿಚಾರ ಮತ್ತು ವಿದ್ವತ್ ಪ್ರಪಂಚದ ವಿದ್ಯಮಾನ, ಇವುಗಳಿಗೆ ಸಂಬಂಧಿಸಿದ ಟೀಕೆ-ಟಿಪ್ಪಣಿಗಳು-ಇವುಗಳಿಗೆ 'ಲೋಚನ' ಮೀಸಲಾಗಿದೆ.

ಯಾವುದೇ ಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಜವಾಬುದಾರರು ; ಅವು ಅವಶ್ಯವಾಗಿ ಪ್ರತಿಷ್ಠಾನದ ಪರವಾಗಿ ವ್ಯಕ್ತಪಡಿಸಿದ ಅಭಿಪ್ರಾಯಗಳು ಎಂದು ತಿಳಿಯತಕ್ಕದ್ದಲ್ಲ.

**ಲೇಖನಗಳಿಗೆ ಆಹ್ವಾನ**

ಮೇಲ್ಕಂಡ ವಾಕ್ಯವೃಂದದಲ್ಲಿ ವ್ಯಕ್ತಪಟ್ಟಿರುವ ಆಶಯಕ್ಕೆ ಅನುಗುಣವಾಗಿ ಲೇಖನಗಳನ್ನು ವಿದ್ವಾಂಸರೂ ಭಾಷೆ ಸಾಹಿತ್ಯಗಳ ಪ್ರೌಢ ವಿದ್ಯಾರ್ಥಿಗಳೂ ಕಳಿಸಿಕೊಡಬೇಕೆಂದು ವಿನಂತಿ. 'ಲೋಚನ'ದ ಗಾತ್ರ ಪರಿಮಿತವಾದದ್ದರಿಂದ ಲೇಖನಗಳು ಅಚ್ಚಿನ 6-8 ಪುಟಗಳ ಪರಿಮಿತಿಯಲ್ಲಿ ಇದ್ದರೆ ಅನುಕೂಲ. ಲೇಖನಗಳು ಹಾಳೆಯ ಒಂದೇ ಪಕ್ಕದಲ್ಲಿ ಸ್ಫುಟವಾದ ಅಕ್ಷರಗಳಲ್ಲಿ ಬರೆದಿರಬೇಕು. ಅಡಿಟಿಪ್ಪಣಿಗಳನ್ನು ಪುಟದ ಅಡಿಯಲ್ಲಿಯೇ ಕಾಣಿಸುವುದು ಒಳಿತು. ಗ್ರಂಥ-ಲೇಖನಾಧಾರ ವಿವರಗಳನ್ನು (Bibliography) ಲೇಖನದ ಕಡೆಯಲ್ಲಿ ಕೊಡಬಹುದು. ಲೇಖನವನ್ನು ಹಿಂದಿರುಗಿಸಲಾಗದ್ದರಿಂದ ಲೇಖಕರು ತಮ್ಮ ಲೇಖನದ ಒಂದು ಪ್ರತಿಯನ್ನು ಉಳಿಸಿಕೊಂಡಿರಬೇಕಾಗಿ ಕೋರಿಕೆ.

# ಕರ್ನಾಟಕ ಲೋಚನ

## ಷಾಣ್ಮಾಸಿಕ ವಿದ್ವತ್ ಪತ್ರಿಕೆ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ ಎಂ. ವಿ. ಸೀತಾರಾಮಯ್ಯ ರಸ್ತೆ,
ಮಾಸ್ತಿನಗರ, (ಗವೀಪುರ ವಿಸ್ತರಣ), ಬೆಂಗಳೂರು–560 019

ಸಂಪಾದಕರು : ವಿದ್ವಾನ್ ಟಿ. ಕೇಶವ ಭಟ್ಟ

ಸಹಾಯಕ ಸಂಪಾದಕರು : ಎನ್. ಎಸ್. ರಾಮಸ್ವಾಮಿ ಅಯ್ಯರ್

ಸಂಪುಟ ೮ ಡಿಸೆಂಬರ್ ೧೯೯೫ ಸಂಚಿಕೆ ೨


## ಪ ರಿ ವಿ ಡಿ

# Karnataka Lochana

Half-Yearly Journal, Published by B. M. Sri Smaraka Prathisthana M. V. Seetha Ramaiah Road, Masthi Nagar, (Gavipuram Extension) Bangalore-560 019



Vol. VIII December 1995 No.2

CONTENTS

# ಸಮಸ್ಯಾ ಪೂರಣ

[ ವಿದ್ವತ್ಪತ್ರಿಕೆಯಾಗಿರುವ ಈ 'ಕರ್ನಾಟಕ ಲೋಚನ' ಸಂಪುಟ ೬, ಸಂಚಿಕೆ ೧ (ಜೂನ್ ೧೯೬೩) ಮೊದಲ್ಗೊಂಡು "ಸಮಸ್ಯಾ ಪೂರಣ" ಎಂಬ ಅಂಕಣವನ್ನು ಪ್ರಾರಂಭಿಸಲಾಗಿದೆ. ಇದು ಕನ್ನಡಕ್ಕೆ ಅತಿಶಯವೆನಿಸುವ ಛಂದೋಬದ್ಧ ಪದ್ಯ ರಚನೆಗೆ ಪ್ರೋತ್ಸಾಹ ನೀಡುವ ಉದ್ದೇಶವುಳ್ಳದ್ದಾಗಿದೆ. ಪ್ರತಿ ಸಂಚಿಕೆಯಲ್ಲಿಯೂ ಮುಂದಿನ ಸಂಚಿಕೆಗಾಗಿ ಪದ್ಯ ಸಮಸ್ಯೆಯನ್ನು ಕೊಡಲಾಗುತ್ತದೆ. ಆದರೆ ಛಂದೋರೂಪವನ್ನು ಅರಿತು, ಒಬ್ಬೊಬ್ಬರಿಂದ ರಚಿತವಾದ ಒಂದು ಪದ್ಯವನ್ನು ಮಾತ್ರ ಸ್ವೀಕರಿಸಲಾಗುತ್ತಿದೆ. ಈ ಸಂಚಿಕೆಗಾಗಿ ಶರ ಷಟ್ಪದಿಯ, ದ್ವಿಪದಿಯ ಅಥವಾ ಚೌಪದಿಯ ಒಂದು ಪಾದವನ್ನು ಕೊಡಲಾಗಿತ್ತು. ಸಮಸ್ಯಾ ವಾಕ್ಯವಿದು:– " ಸತಿಯೊಲಿಯೆ ಸದ್ವಿದ್ಯೆಗಳ ಕಲಿಯೊ ಮಗುವೇ"]

ಬಂದಿರುವ ಸಮಸ್ಯಾಪೂರ್ತಿ ಪದ್ಯಗಳಿವು–

1 ಶ್ರುತಿಗಳಲಿ ಸಚ್ಛಾಸ್ತ್ರಗಳಲಿ ನೀ ಬೆರೆತು ಸರ
ಸತಿಯೊಲಿಯೆ ಸದ್ವಿದ್ಯೆಗಳ ಕಲಿಯೊ ಮಗುವೇ
ಮಿತಭಾಷಿ ಮೃದು ಹೃದಯಿಯಾಗಿ ಬಳೆಯುತ್ತ ಸರ
ಹಿತಕಾರಿಯಾಗಿ ನೀ ನಲಿಯೊ ಮಗುವೇ ||

—ಎಸ್. ಆರ್. ಮಳಗಿ.

2 ಮತಿವಂತನಾಗು ಸ
ಭ್ಯತೆಯೊಳಿರು ಗುರುವಿಧೇ
ಯತೆಯಿರಲಿ ದಿನದಿನದೆ ಪಾಠ ಕಲಿಯುತಿರು
ಹಿತವಚನ ಕೇಳು ದುರು
ಳತೆಗೆ ಮನಗೊಡದಿರಜ
ಸತಿಯೊಲಿಯೆ ಸದ್ವಿದ್ಯೆಗಳ ಕಲಿಯೊ ಮಗುವೇ

—ಟಿ. ಕೇಶವ ಭಟ್ಟ.

3 ಈ ಕಲಿ ಕಾಲದಲಿ, ಮಗುವೇ
ನೂಕೋಟಿ ವಿದ್ಯೆ ಕಲಿತರೇನು ಫಲ ?
ನಿನ್ನಯ ಬಾಳು ಹಸನಾಗಿಸಿ ಕೊಳಲು ಸರ
ಸತಿಯೊಲಿಯೆ ಸದ್ವಿದ್ಯೆಗಳ ಕಲಿಯೊ

—ಎಸ್. ಸೂರ್ಯನಾರಾಯಣ ರಾವ್.

4 ಚ್ಯುತಿಯಿರದ ಸಂಪದವು ವಿದ್ಯೆ ಎಂಬರಲ
ಕ್ಷಿತಿಯೊಳಿದಕೆಳ್ಳನಿತು ಸಂದೇಹವಿಲ್ಲ ||
ಸತತ ಪೂಜಿಸೆ ವಾಣಿಯೊಲಿಗು ; ಆ ಬ್ರಹ್ಮ-
ಸತಿಯೊಲಿಯೆ ಸದ್ವಿದ್ಯೆಗಳ ಕಲಿಯೊ ಮಗುವೇ ||

— ಡಾ|| ಕೆ. ಸುಬ್ರಹ್ಮಣ್ಯ ಭಟ್ಟ

5 ಪ್ರತಿ ತಿಂಗಳೂ ಸಂಬಳವನು ಸುರಿದರೆ ಸಾಕೆ
ಪ್ರತಿಯಾಡದಂತಡುಗೆ ಮಾಡಿದರೆ ಸಾಕೆ
ಹಿತವಾಗಿ ಬಟ್ಟೆಗಳನೆಲ್ಲ ಒಗೆದರೆ ಸಾಕೆ
ಸತಿಯೊಲಿಯೆ ಸದ್ವಿದ್ಯೆಗಳ ಕಲಿಯೊ ಮಗುವೆ |

— ಪ್ರೊ|| ಅ. ರಾ .ಮಿತ್ರ.

6 ಅತಿಪ್ರೀತಿ ತೋರಿದರೆ ಬಂತೆ
ಪ್ರತಿದಿನವು ತಪ್ಪಿಲ್ಲ ಚಿಂತೆ
ಪತಿನಾನೆ ಎಂದೇಕೆ ಮೆರೆವೆ
ಸತಿಯೊಲಿಯೆ ಸದ್ವಿದ್ಯೆಗಳ ಕಲಿಯೊ ಮಗುವೆ.

— ನಾ. ಗೀತಾಚಾರ್ಯ

**ಲೋಚನದ ಮುಂದಿನ ಸಂಚಿಕೆಗಾಗಿ ಸಮಸ್ಯೆ :**

" ಮುತ್ತಿದುವಲ್ತೆ ತುಂಬಿಗಳ ಗುಂಪುಗಳೊಮ್ಮೆಲೆ ಚಂದ್ರಬಿಂಬಮಂ "

ಸೂಚಿಸಿದವರು : **ಶ್ರೀಅಷ್ಟಾವಧಾನಿ ಆರ್.ಗಣೇಶ್**

—o—

# ಅಪರೂಪದ ಹಸ್ತಪ್ರತಿಗಳು

—ಬಿ. ಎಸ್. ಸಣ್ಣಯ್ಯ

ಶ್ರವಣಬೆಳಗೊಳದ ಶ್ರೀ ಜೈನಮಠಾಧೀಶ್ವರರಾದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ಅವರು ಅತೀವ ಆಸಕ್ತಿಯಿಂದ ಇತ್ತೀಚೆಗೆ ಸಂಗ್ರಹಿಸಿರುವ ನೂರಾರು ಹಸ್ತಪ್ರತಿಗಳಲ್ಲಿ ಕನ್ನಡದ ಕೆಲವು ಅಪರೂಪದ ಹಸ್ತಪ್ರತಿಗಳು ದೊರೆತಿವೆ. ಅವುಗಳಲ್ಲಿ ಕನ್ನಡ ಸಾಹಿತ್ಯಕ್ಕೆ ಇದುವರೆಗೂ ಅಪರಿಚಿತವಾಗುಳಿದಿದ್ದ ಹೊಚ್ಚ ಹೊಸ ಕೃತಿಗಳನ್ನು ಇಲ್ಲಿ ಸ್ಥೂಲವಾಗಿ ಪರಿಚಯಿಸುತ್ತೇನೆ. ಈ ಕೃತಿಗಳೆಂದರೆ ೧. ದೇವರಸನ ಮದನಚಕ್ರೇಶ್ವರ ಚರಿತೆ ೨. ಗುರುವಣ್ಣನ ಲೊಕ್ಕಿಯಮ್ಮನ ಚರಿತೆ ೩. ತೇಜಣ್ಣನ ಸೋಮಶೇಖರ ಚಿತ್ರಶೇಖರ ಚರಿತೆ ೪. ಗುಮ್ಮಟನಾಥನ ನಾಗಕುಮಾರಷಟ್ಪದಿ ೫. ಬಲ್ಲಾಳರಾಯನ ಚಾವುಂಡರಾಯ ಪುರಾಣ ೬. ಸಿಂಗಕವಿಯ ಸುಕುಮಾರ ಚರಿತೆ.

೧. ಬಹುರೋಚಕ ಕಥೆಯಾದ ಪ್ರದ್ಯುಮ್ನನ ಚರಿತೆಯನ್ನೊಳಗೊಂಡ ಮದನ ಚಕ್ರೇಶ್ವರ ಚರಿತೆಯ ಒಂದೇ ಒಂದು ಓಲೆಪ್ರತಿ ದೊರೆತಿದ್ದರೂ ಗ್ರಂಥ ಪೂರ್ಣವಾಗಿದ್ದು ಕವಿಯ ಕಾಲ ದೇಶಾದಿಗಳ ಬಗೆಗೆ ಅಲ್ಪಸ್ವಲ್ಪ ವಿವರಗಳನ್ನು ತಿಳಿಯಲು ಸಾಧ್ಯವಾಗಿದೆ. ಇದರ ಕರ್ತೃ ದೇವರಸ. ಪೂರ್ಣಗ್ರಂಥ ಸಾಂಗತ್ಯದಲ್ಲಿದ್ದರೂ ಐದು ವೃತ್ತಗಳನ್ನೂ ಒಂದು ದೀರ್ಘವಚನವನ್ನೂ ರಚಿಸಿ ಪ್ರತಿ ವಿಭಾಗವನ್ನೂ ಆಶ್ವಾಸವೆಂದು ಕರೆದಿದ್ದಾನೆ. ಹಾಗೂ ಶಕಟರೇಫ ಬಳಸಿದ್ದಾನೆ. ತನ್ನದೂ ಚಂಪೂಕೃತಿಗಳ ಸಾಲಿಗೆ ಸೇರಲೆಂಬ ಬಯಕೆಯಿಂದ ಈ ರೀತಿ ಮಾಡಿರಬಹುದು. ಇದರಲ್ಲಿ ೧೨ ಆಶ್ವಾಸಗಳೂ ೧೯೨೧ ಪದ್ಯಗಳೂ ಇವೆ. ೧೧ ಆಶ್ವಾಸಗಳಲ್ಲಿ ಕಥಾವಸ್ತು ನಿರೂಪಣೆ ಮಾಡಿದರೆ ೧೨ನೆಯದನ್ನು ತನ್ನ ವಿಷಯವನ್ನು ಹೇಳಿಕೊಳ್ಳಲು ಮೀಸಲಿರಿಸಿದ್ದಾನೆ.

ಇದರಿಂದ ತಿಳಿದುಬರುವಂತೆ ಕವಿಯು ಕನಕಗಿರಿಯ ಮೂಡಣದಿಕ್ಕಿನಲ್ಲಿರುವ ಮಲಯಗ್ರಾಮದವನೆಂದೂ, ದೇವರಸಾರ್ಯನ ಮಗ ಬ್ರಹ್ಮನ ಪುತ್ರ ಅಥವಾ ದೇವರ ಸಾರ್ಯನ ಮೊಮ್ಮಗ 'ಜಿನಪದಾಂಬುಜಭಕ್ತ'ನಾದ ದೇವರಸನೆಂದೂ ವ್ಯಕ್ತವಾಗುತ್ತದೆ. ಈ ಹೇಳಿಕೆಯಲ್ಲಿ ಬರುವ 'ಕನಕಗಿರಿ ಮಲಯಗ್ರಾಮ'ಗಳನ್ನು ಗಮನಿಸಿದರೆ ಈತನು ಮೈಸೂರುಜಿಲ್ಲೆಯಲ್ಲಿರುವ ಚಾಮರಾಜನಗರ ತಾಲೂಕಿನ ಪ್ರಸಿದ್ಧ ಜೈನಕ್ಷೇತ್ರವಾದ ಮಲೆಯೂರಿನವನೆಂದು ಹೇಳಬಹುದಾಗಿದೆ. ಆದರೆ ಕಾಲದ ಬಗೆಗೆ ಯಾವ ಸೂಚನೆಯೂ ಇಲ್ಲದಿರುವುದರಿಂದ ಈ ಬಗೆಗಿನ ಅಸ್ಪಷ್ಟತೆ ಹಾಗೆಯೇ ಉಳಿಯುತ್ತದೆ.

ದೇವಚಂದ್ರನ 'ರಾಜಾವಳಿ ಕಥಾಸಾರ'ದ "ಮಹಿಸೂರೊಳು ನಿಂದೆಮ್ಮ ಪಿತಾಮಹಂ ದೇವರಸಂ ಕನಕಗಿರಿಯ ಪದ್ಮಾವತಿಮಹಾದೇವಿ" [1] ಎಂಬ ಹೇಳಿಕೆಯಲ್ಲಿ ಬರುವ ದೇವರಸನೇ ಪ್ರಕೃತ ಕೃತಿಯ ಕರ್ತೃವಾಗಿರಬಹುದು. ಹಾಗಾದಲ್ಲಿ ೧೭೭೦–೧೮೪೧ರ ವರೆಗೆ ಜೀವಿಸಿದ್ದ ದೇವಚಂದ್ರನ ಪಿತಾಮಹ ದೇವರಸನಾಗುತ್ತಾನೆ. ಎಂದರೆ ದೇವಚಂದ್ರನಿಗಿಂತ ಎರಡು ತಲೆಮಾರಿನಷ್ಟು ಹಿಂದಿನವನಾದ ದೇವರಸನ ಕಾಲವನ್ನು ಸು. ೧೬೫೦ ಎಂದಿಟ್ಟುಕೊಳ್ಳಬೇಕಾಗುತ್ತದೆ. ಅಲ್ಲದೆ ಈತನು ಸ್ತುತಿಸಿರುವ ಕನ್ನಡ ಕವಿಗಳಲ್ಲಿ ರತ್ನಾಕರನು ಕೊನೆಯವನಾಗಿದ್ದು ೧೫೫೭ರಲ್ಲಿದ್ದ ರತ್ನಾಕರನಿಗಿಂತ ಈಚಿನವನೆಂಬುದೂ ಈ ಕಾಲನಿರ್ಣಯಕ್ಕೆ ಪೋಷಕವಾಗಿ ನಿಲ್ಲುತ್ತದೆ. ಮತ್ತೂ ಒಂದು ಅಂಶವೆಂದರೆ

ಪಲಗೆ ಬಳಹ ವಿಡಿಯದ ಪದವಿಟ್ಟದ
ನಳಿದು ಬರೆಯದಗ್ಗಳಿಕೆ
ಬಳಸಿಹ ಲೇಖಕರ್ಗಳ ಕಂಠಪತ್ರದೊ
ಳುಲುಹುಗುಂದದಗ್ಗಳಿಕೆ ೯–೫೬

ಎಂದು ಹೇಳಿರುವಲ್ಲಿ ಕುಮಾರವ್ಯಾಸನ ಅನುಕರಣೆಯ ಸ್ಪಷ್ಟಸೂಚನೆಯಿದೆ. ಮತ್ತೆ ಹಸ್ತಪ್ರತಿಯಲ್ಲಿನ ಲಿಪಿವಿನ್ಯಾಸವೂ ಸಾಕಷ್ಟು ಪ್ರಾಚೀನವಾಗಿ ಕಂಡುಬರುತ್ತದೆ. ಈ ಎಲ್ಲ ದೃಷ್ಟಿಯಿಂದ ದೇವರಸನ ಕಾಲವನ್ನು ಸು. ೧೬೫೦ ಎಂದು ನಿರ್ಧರಿಸಬಹುದಾಗಿದೆ.

ಆದಿಯ ೨೪ ಪದ್ಯಗಳಲ್ಲಿ ೨೪ ತೀರ್ಥಂಕರರನ್ನು ಸ್ತುತಿಸಿದ ಕವಿಯು ವಿಜಯನಾಥ ಪಾರಿಶ್ವೇಶ ಬೆಳುಗುಳದ ಭುಜಬಲಿಗಳನ್ನೂ ಪಂಚಾಚಾರ್ಯರು ಮತ್ತು ಸರಸ್ವತಿಯನ್ನೂ ಸ್ತುತಿಸುತ್ತಾನೆ. ಅನಂತರ ಪೂಜ್ಯಪಾದ ಪಂಪ ಪೊನ್ನ ಜನ್ನ ನೇಮಿಚಂದ್ರ ಸುಜನೋತ್ತಂಸ ಅಸಗ ಮಧುರ ಅಗ್ಗಳ ರತ್ನಾಕರನನ್ನು ನೆನೆಯುತ್ತಾನೆ.

ಇದು ನೇಮಿಜಿನರಾಜಕ್ರಮ ಬಿಸರುಹ
ಮಧುಪಾಯಮಾನ ವಿಲಾಸ
ಮದನಚಕ್ರೇಶನ ಪುಣ್ಯಚರಿತ್ರದೊಳ್...

ಎಂದು ಹೇಳುವುದರಿಂದ ೨೨ನೆಯ ತೀರ್ಥಂಕರನಾದ ನೇಮಿನಾಥ ಚರಿತೆಯಲ್ಲಿ ಕಂಡುಬರುವ ಪ್ರದ್ಯುಮ್ನನ ಕಥೆಯೇ ಕೃತಿರಚನೆಗೆ ಆಧಾರವಾಗಿದೆ.

ಅಬುಜಾಸ್ತ್ರನ ಕಥೆವೇಳ್ವೆನು ಭವ್ಯಾಘ
ಸಭೆಗೆ ಕಾಲಕ್ಷೇಪವಾಗಿ
ಶುಭ ಪರಿಣಾಮದೊದವು ದೊರಕಲಿಯೆಂ
ದಭವನ ಕಥೆವೇಳಿದೆನು ೧೨–೨೭

1. ರಾಜಾವಳಿ ಕಥಾಸಾರ : ದೇವಚಂದ್ರ ಸಂ. ಬಿ. ಎಸ್. ಸಣ್ಣಯ್ಯ ೧೯೮೮ ಪು. ೨೨೪.

ಎಂದು ತನ್ನ ಕೃತಿಯ ಉದ್ದೇಶ ಮತ್ತು ಸಾರ್ಥಕತೆಯನ್ನು ವಿವರಿಸಿದ್ದಾನೆ. ಕಾವ್ಯವು ಮಧ್ಯಮ ವರ್ಗದ್ದಾಗಿದ್ದು ಸರಳ ಸುಂದರ ಶೈಲಿಯಿಂದ ಉತ್ತಮ ವರ್ಣನೆಗಳಿಂದ ಓದುಗರನ್ನು ಆಕರ್ಷಿಸುತ್ತದೆ.

೨. ಎರಡನೆಯದಾದ ಲೊಕ್ಕಿಯಮ್ಮನ ಚರಿತೆ (ಪದ್ಮಾವತಿ ಚರಿತೆ)ಯನ್ನು ಗುರುವಣ್ಣನೆಂಬ ಕವಿ ರಚಿಸಿದ್ದಾನೆ. ಇದು ಸಾಂಗತ್ಯದಲ್ಲಿದ್ದು ೧೨ ಸಂಧಿಗಳನ್ನೂ ೧೦೦೮ ಪದ್ಯಗಳನ್ನೂ ಒಳಗೊಂಡಿದೆ. ಆದಿಯಲ್ಲಿ ಪಂಚಾಚಾರ್ಯರು ಮತ್ತು ಬೆಳುಗೊಳದ ಗೊಮ್ಮಟನಾಥರನ್ನೂ ಕನ್ನಡ ಕವಿಗಳಾದ ಪಂಪ ನಾಗಚಂದ್ರ ಶಾಂತಿವರ್ಮ ರತ್ನಾಕರರನ್ನೂ ನೆನೆಯುತ್ತಾನೆ.

ಸುರಭಿಪುರದ ಚಂದ್ರನಾಥನ ಪೂಜಿಪ
ಗರುವ ಗುಮ್ಮಟಯ್ಯನಾತ್ಮಜನು
ಗುರುವಣ ಪೇಳಿದ ಜಿನದತ್ತರಾಯನ
ಚರಿತೆಯ ಜನರು ಲಾಲಿಪುದು ೧-೨೭

ಎಂಬುದರಿಂದ ಈತನು ಸುರಭಿಪುರದ ಚಂದ್ರನಾಥನನ್ನು ಪೂಜಿಸುವ ಗುಮ್ಮಯ್ಯನೆಂಬವನ ಮಗ ಗುರುವಣ್ಣನೆಂದೂ, ಹೊಂಬುಜದ ಪದ್ಮಾವತಿ ಅಥವಾ ಜಿನದತ್ತರಾಯನ ಕಥೆಯನ್ನು ಹೇಳುವನೆಂದೂ ತಿಳಿದು ಬರುತ್ತದೆ. ಕವಿಯು

ರಸದಾಳಿಯಂತೆ ರಮಣಿಯ ಚೆಂದುಟಿಯಂತೆ
ಪೊಸವೆಣ್ಗಳ ಕೂಟದಂತೆ
ಹೊಸ ಮೃದು ನುಡಿಯ ಕನ್ನಡದೊಳು ರಚಿಸುವೆ
ರಸಿಕ ಜನರು ಲಾಲಿಪುದು ೧-೨೬

ಎಂದು ತನ್ನ ಕೃತಿಯ ಹಿರಿಮೆಯಲ್ಲಿ ಆತ್ಮವಿಶ್ವಾಸ ಹೊಂದಿದ್ದಾನೆ. ಇದನ್ನು

ಪಟ್ಟದ ಭದ್ರಹಸ್ತಿಯನೇರಿ ರಾಯನು
ಪಟ್ಟಣದೊಳು ಪೋಗಲಾಗ
ಕಟ್ಟಲು ಸಕಲ ವಾದ್ಯದ ರವವೆದ್ದೆಸೆ
ಗಿಟ್ಟಣಿಸಿದವೇನೆಂಬೆ ೧೨-೫೨

ಪುರದ ನಾರಿಯರೆಲ್ಲ ಮುಗಿಲೇರಿ ಮನೆಯೇರಿ
ತ್ವರಿತದಿ ಜಿನದತ್ತನೃಪನ
ಭರದಿ ಕಾಣುತ ಕಂಗಳ ಜಲದೊಳು ತಮ್ಮ
ಉರಕೆ ಮಜ್ಜನವ ಮಾಡಿದರು ೧೨-೫೩

ಎಂಬಿವೇ ಮೊದಲಾದ ವರ್ಣನೆಗಳಲ್ಲಿ ಕಾಣಬಹುದು.

ಕವಿಯ ಕಾಲ ದೇಶಾದಿಗಳ ಬಗೆಗೆ ವಿವರವಾವುವೂ ದೊರೆಯದಿದ್ದರೂ 'ಸುರಭಿಪುರ' ಎಂಬುದರಿಂದ ಈತನು ಈ ಪ್ರದೇಶದವನೆಂದು ಹೇಳಬಹುದು. ಆದರೆ ಈ ಹೆಸರಿನ ಯಾವ ಸ್ಥಳದ ಮಾಹಿತಿಯೂ ದೊರೆಯುವುದಿಲ್ಲ, 'ಸುರಧೇನುಪುರ' ಎಂಬುದರ ಬಗೆಗೆ

ಎಪಿಗ್ರಾಫಿಯಾ ಕರ್ಣಾಟಿಕಾ'ದ ಒಂಬತ್ತನೆಯ ಸಂಪುಟದ ಪೀಠಿಕೆಯಲ್ಲಿ ಹೇಳಿರುವಂತೆ ಇದು ಬೆಂಗಳೂರು ಜಿಲ್ಲೆ ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿ ಯಲ್ಲಿದೆ. 'ಸುರಧೇನುಪುರ'ವನ್ನೇ ಕವಿ 'ಸುರಭಿಪುರ' ಎಂದು ಹೇಳಿದ್ದಾನೆಂಬುದನ್ನು ಖಚಿತವಾಗಿ ಹೇಳಲಾಗುವುದಿಲ್ಲ. ಒಂದು ಐತಿಹ್ಯದಿಂದ ತಿಳಿದು ಬರುವಂತೆ 'ಸುರಲೋಕ ದಿಂದ ಸುರಭಿಗಳು ಬಂದು ಶ್ರೀರಂಗನಾಥ ದೇವಾಲಯದಲ್ಲಿ ಹಾಲು ಸುರಿಸುತ್ತಿದ್ದುವು. ಆದುದರಿಂದ 'ಸೊರಬ'ವಾಯಿತೆಂಬುದು ಶಿವಮೊಗ್ಗ ಜಿಲ್ಲೆಯ ಸೊರಬಕ್ಕೆ ಇದೆ.

ಕಾಲದ ಬಗೆಗೆ ಪ್ರತಿಯ ಕಾಲವನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ಪ್ರತಿಯ ಕೊನೆಯಲ್ಲಿ "ಶಾಲಿವಾಹನ ಶಕವರ್ಷ ೧೬೮೮ರಯ ವರ್ತಮಾನಕ್ಕೆ ಸಲ್ಲುವ ವ್ಯಯ ಸಂವತ್ಸರದ ಮಾರ್ಗಶಿರ ಶು ಮಂಗಳವಾರ ತಾಸು ೫ಕ್ಕೆ ಶ್ರೀಮದಭಿನವ ದೇವೇಂದ್ರಕೀರ್ತಿಸ್ವಾಮಿಯವರ ಪಾದೋಪಾಂತದಲ್ಲಿ ಕಳಶದ ಮರಿಯಂಣೋಪಾಧ್ಯಾಯನು ತನಗೆ ಕೇವಲಜ್ಞಾನ ನಿಮಿತ್ತ ವಾಗಿ ಬರದಂಥ ಲೊಕಿಯಂಂಮನ ಚರಿತೆ ಸಮಾಪ್ತಾ" ಎಂದಿದೆ. ಇದರಿಂದ ಈ ಪ್ರತಿಯ ಕಾಲ ಕ್ರಿ.ಶ. ೧೭೬೬ ಆಗುತ್ತದೆ. ಎಂದರೆ ಕವಿಯು ಇದಕ್ಕೆ ಪೂರ್ವದಲ್ಲಿ ಸು. ೧೬೫೦ ರಲ್ಲಿದ್ದಿರಬಹುದೆಂದು ಹೇಳಬಹುದಾಗಿದೆ.

೩. ಮತ್ತೊಂದು ಹೊಸಕೃತಿಯೆಂದರೆ 'ಸೋಮಶೇಖರ ಚಿತ್ರಶೇಖರ ಚರಿತೆ'. ಇದನ್ನು ತೇಜಣ್ಣಕವಿ ಸಾಂಗತ್ಯದಲ್ಲಿ ರಚಿಸಿದ್ದಾನೆ. ಇದರಲ್ಲಿ ೯ ಸಂಧಿಗಳೂ ೧೧೯೫ ಪದ್ಯಗಳೂ ಇವೆ. ಇದು ಓಲೆ ಪ್ರತಿಯಾಗಿದ್ದು ದೊರೆತ ಏಕೈಕ ಹಸ್ತಪ್ರತಿಯಾಗಿದೆ. ಪ್ರತಿಯ ಆದಿಯಲ್ಲಿ "ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾಬ್ದಾಃ ೧೬೫೪ ನೆಯ ನಂದನನಾಮ ಸಂವತ್ಸರದ ಆಶ್ವಿಜ ಶು ೧೦ ಗುರುವಾರದಲ್ಲು ಮದ್ದಗಿರಿ ಪೂರ್ವಾ ಚಾರ‍್ಯರು ಗುರುಪಾದಯ್ಯನವರ ಕುಮಾರ ಕರಿಬಸವಪ್ಪಗೆ ಓದಿಕೊಳ್ಳುವುದಕ್ಕೆ ಪ್ರಾರಂಭಿಸಿ ಬರೆದುಕೊಟ್ಟ ಚೋರಕಥೆ ರತ್ನಾಪುರಿ ವಜ್ರಮಕುಟರಾಯನ ಕುಮಾರರು ಸೋಮಶೇಖರ ಚಿತ್ರಶೇಖರರ ಚರಿತ್ರೆ ಬರವುದಕ್ಕೆ ಶುಭಮಸ್ತು" ಎಂದಿದೆ. ಎಂದರೆ ಈ ಪ್ರತಿಯ ಕಾಲ ಕ್ರಿ.ಶ. ೧೮೩೪ ಆಗುತ್ತದೆ. ಉಳಿದಂತೆ ಕೃತಿಯಲ್ಲಿ ಕವಿಯ ಕಾಲದ ಬಗೆಗೆ ದೊರೆಯುವ ಒಂದು ಸೂಚನೆಯೆಂದರೆ—

ಹಿಂದಕ್ಕೆ ಕವಿಯಾದ ಕಸ್ತುರಿಸಿದ್ಧನು
ಹೊಂದಿಸಿರುವ ಚೋರಕಥೆಯ
ಅಂದವರಿತು ಸಾನೆಕ್ಷಗಾನವ ಬಿಟ್ಟು
ಹೊಂದಿಸಿ ಚರಿತೆ ಮಾಡಿದೆನು (೯–೯೮)

ಎಂದು ತನ್ನ ಕೃತಿಗೆ ಕಸ್ತೂರಿಸಿದ್ಧನ ಕಥೆಯೇ ಆಧಾರವೆಂಬುದನ್ನು ಸೂಚಿಸಿದ್ದಾನೆ. ಕಸ್ತೂರಿಸಿದ್ಧನ ಕಾಲ ಸು. ೧೮೦೦ ಎಂದು ಕವಿಚರಿತೆಕಾರರು ನಿರ್ಣಯಿಸಿದ್ದಾರೆ. ಆದುದರಿಂದ ತೇಜಣ್ಣನೂ ಇದೇ ಕಾಲಕ್ಕೆ ಅಥವಾ ಸ್ವಲ್ಪ ಈಚೆಗೆ ಇದ್ದಿರಬಹುದು ; ಇಲ್ಲವೆ ಕಸ್ತೂರಿಸಿದ್ಧನ ಕಾಲವನ್ನೇ ಹಿಂದಕ್ಕೆ ಸರಿಸಬಹುದಾದರೆ ಈತನದೂ ಇನ್ನೂ

ಪೂರ್ವಕ್ಕೆ ಹೋಗಬಹುದು. ಸದ್ಯಕ್ಕೆ ಈತನ ಕಾಲವನ್ನು ಸು. ೧೮೦೦ ಎಂದು ಹೇಳಬಹುದು.

ಧರೆಯೊಳಧಿಕವಾಗಿ ಮೆರೆಯುತಿ x x ಮೂಕೂರೊ
ಳಿರುತಿಹ ಜಿನಕುಲೋತ್ತಮನು
ಪುರುಷಯ್ಯನ ಸತಿ ಗಿರಿಯಮ್ಮನ ಸುತ
ಹಿರಿಯ ಮಗ ತೇಜಣ್ಣ ೯-೯೯

ಎಂಬಲ್ಲಿ ಸ್ವಲ್ಪಭಾಗ ತ್ರುಟಿತವಾಗಿರುವುದರಿಂದ ಯಾವ ಊರೆಂಬುದು ತಿಳಿದು ಬರುವುದಿಲ್ಲ. ಆದರೆ ಪುರುಷಯ್ಯ ಮತ್ತು ಗಿರಿಯಮ್ಮನ ಹಿರಿಯ ಮಗ ತೇಜಣ್ಣನೆಂಬುದು ಖಚಿತವಾಗುತ್ತದೆ.

೪. ದೊರೆತ ಅಪರೂಪ ಹಸ್ತಪ್ರತಿಗಳಲ್ಲಿ ನಾಲ್ಕನೆಯದಾದ ನಾಗಕುಮಾರ ಷಟ್ಪದಿ ಎಂಬ ಗ್ರಂಥವನ್ನು ಗುಮ್ಮಟನಾಥನೆಂಬವನು ರಚಿಸಿದ್ದಾನೆ. ಇದು ೩೫ ಸಂಧಿಗಳನ್ನೂ ೧೯೧೨ ಭಾಮಿನಿ ಷಟ್ಪದೀ ಪದ್ಯಗಳನ್ನೂ ಹೊಂದಿರುವ ಬೃಹದ್ಗ್ರಂಥ. ಇದು ಕಾಗದದ ಹಸ್ತಪ್ರತಿಯಾಗಿದೆ. ಪ್ರತಿಯ ಆದಿಯಲ್ಲಿ "ಶ್ರೀ ವೀತರಾಗಾಯ ನಮಃ" ಸಿರಗುಪ್ಪೆ ಪಾರಿಶ್ವಜಿನಯೇ ನಮಃ" ಎಂದೂ, ಕೊನೆಯಲ್ಲಿ "ಶಕೆ ೧೭೪೭ ಯೊವನಾಮ ಸಂವತ್ಸರದ ಭಾದ್ರಪದ ಸುದ ೭ ಸೋಮವಾರ ಅನುರಾದ ನಕ್ಷತ್ರದಲ್ಲಿ ಯಿಂತ್ರೀ ಸುಭದಿವಸದೊಳು ಸಿರಗುಪ್ಪೆ ಯಿದ್ದಪ್ಪನವರ ಮಗ ಗೆನಪ್ಪಗೆ ಬೆಳುಗುಳದ ಗುಮಠನಾಥನು ಬರದು ಕೊಟ್ಟ ನಾಗಕುಮಾರನ ಸಮ್ಮದಿ ಪುರಾಣ ಸಮಾಪ್ತ" ಎಂದೂ ಇರುವುದರಿಂದ ಸಿರಗುಪ್ಪೆಯ ಪಾರ್ಶ್ವನಾಥನ ಜಿನಾಲಯದಲ್ಲಿ ಕ್ರಿ. ಶ. ೧೮೭೫ರಲ್ಲಿ ಮಾಡಿದ ಪ್ರತಿಯಾಗಿದೆ. ಕವಿಯು ಇದಕ್ಕಿಂತ ಎಷ್ಟು ಹಿಂದೆ ಇದ್ದವನು ? ಯಾವ ಪ್ರದೇಶದವನು ? ಮೊದಲಾದ ವಿಷಯಗಳನ್ನು ಇತರ ಆಧಾರಗಳಿಂದ ಪರಿಶೀಲಿಸಿ ನಿರ್ಣಯ ಮಾಡಬೇಕಾಗಿದೆ.

೫. ದೊರೆತಿರುವ ಐದನೆಯ ಕೃತಿಯೆಂದರೆ ಬಲ್ಲಾಳರಾಯನೆಂಬ ಕವಿಯಿಂದ ರಚಿತವಾದ 'ಚಾವುಂಡರಾಯ ಪುರಾಣ'. ಇದು ೨ ಸಂಧಿಗಳನ್ನೂ ೩೧೦ ಪದ್ಯಗಳನ್ನೂ ಒಳಗೊಂಡಿರುವ ಚಿಕ್ಕ ಕೃತಿ. ಸಾಂಗತ್ಯದಲ್ಲಿ ರಚಿತವಾಗಿರುವ ಇದು ಕಾಗದದ ಹಸ್ತಪ್ರತಿಯಾಗಿದ್ದು ಸಮಗ್ರವಾಗಿದೆ. ಪ್ರತಿಯ ಮೊದಲಲ್ಲಿ "ಶ್ರೀ ಖಾನಾಪುರದ ಶಾಂತಿನಾಥಾಯ ನಮಃ" ಎಂದೂ, ಕೊನೆಯಲ್ಲಿ "ಸ್ವಸ್ತಿಶ್ರೀ ನೃಪಶಾಲಿವಾಹನ ಸಕೆ ೧೩೫೩ ತ್ರಿಸಂನನೆ ಖರನಾಮ ಸಂವತ್ಸರೆ ಜೇಷ್ಟ ಶುದ ೧೦ ರವಿವಾರ ಪೇಟೆ ಖಾನಾಪುರದ ಶ್ರೀ ಶಾಂತಿಕೀರ್ತೀಶನ ಚೈತ್ಯಾಲಯದಲ್ಲಿ ಮುಗಿತು" ಎಂದೂ ಇರುವುದರಿಂದ ಕವಿಯೂ ಆ ಪ್ರದೇಶಕ್ಕೆ ಸೇರಿದವನೊ ಏನೊ ಎಂದು ಅನುಮಾನಿಸಲು ಆಸ್ಪದವಿದೆ. ಇಲ್ಲಿ ಕೊಟ್ಟಿರುವ ಶಕವರ್ಷದೊಡನೆ ಸಂವತ್ಸರಾದಿ ವಿವರಗಳು ಸರಿಹೊಂದುವುದಿಲ್ಲ ; ೧೭೫೩ಕ್ಕೆ ಸರಿಹೋಗುತ್ತವೆ. ಎರಡನೆಯ ಸಂಖ್ಯೆಯಾದ ೩-೭ ಸ್ವಲ್ಪ ಹೆಚ್ಚು ಕಡಮೆ ಆಗಿರ

ಬಹುದು. ಇದು ಸಾಂಗತ್ಯಕೃತಿಯಾಗಿರುವುದರಿಂದ ಮತ್ತು ಕಾಗದದ ಪ್ರತಿಯಾಗಿರುವುದರಿಂದ ೧೭೫೩ ಸರಿಯಾದ ಪ್ರತಿಯ ಕಾಲ ಎಂದು ಒಪ್ಪಬಹುದು. ಕೊಟ್ಟಿರುವ ಸಂವತ್ಸರಾದಿ ವಿವರಗಳು ಜೂನ್ ೧೯, ೧೮೩೧ಕ್ಕೆ ಸರಿಹೋಗುವುದರಿಂದ ಕವಿಯ ಕಾಲವನ್ನು ಕ್ರಿ.ಶ.ಸು. ೧೮೦೦ ಎಂದು ಹೇಳಬಹುದಾಗಿದೆ.

ಶ್ರೀ ಮುನಿವೃಂದಾರಕ ವಂದಿತ (?)
ಕೋಮಲಪದಪದ್ಮಯುಗಲ
ಸೋಮಾರ್ಕಕೋಟಿ ತೇಜ ಗುಂಮಟಜಿನ
ಕಾಮಿತಾರ್ಥವ ನೀವುದೆಮಗೆ ||೧||

ಎಂದು ಆದಿಯಲ್ಲಿ ಬಾಹುಬಲಿಯನ್ನು ಸ್ತುತಿಸಿದ್ದಾನೆ. ಕೊನೆಯಲ್ಲಿ—

ಚಾವುಂಡರಾಯನನ್ವಯದಂತರದೊಳು
ಭೂವಿಖ್ಯಾತ ಬಲ್ಲಾಳರಾಯ
ಆ ವಿಸ್ತಾರವನು ವಿವರಿಸುವಲ್ಲಿಗೆ
ತೀರಿತು ಎರಡನೆ ಸಂಧಿ (?) ||೧೬೧||

ಎಂದು ಕಾವ್ಯವನ್ನು ಮುಗಿಸಿದ್ದಾನೆ. ಈತನು ಯಾವ ಬಲ್ಲಾಳರಾಯ ಎಂಬುದು ಸದ್ಯಕ್ಕೆ ತಿಳಿದು ಬರುವುದಿಲ್ಲ.

೬. ದೊರೆತ ಮತ್ತೊಂದು ಕೃತಿಯೆಂದರೆ ಸಿಂಗಕವಿಯಿಂದ ರಚಿತವಾದ 'ಸುಕುಮಾರ ಚರಿತೆ'. ಇದು ಓಲೆಯಲ್ಲಿದ್ದು ಅಸಮಗ್ರವಾಗಿದೆ ; ೮೬ ಕಂದಪದ್ಯಗಳು ಮಾತ್ರ ದೊರೆತಿವೆ. ಆದಿಯಲ್ಲಿ ಜಿನೇಂದ್ರರ ಸ್ತುತಿಯಿದೆ.

ಚರಿತಂಗಳೊಳಗೆ ಪೊಗಳಲು
ಚರಿತಂ ಸುಕುಮಾರದೇವನೆಂಬನ ಚರಿತಂ
ಚರಿತಮಿದನರ್ತಿಯಿಂದಂ
ಕರಮೊಪ್ಪಿರೆ ಪೇಳ್ದನಲ್ತೆ ಸಿಂಗಂ ಧರೆಯೊಳ್ ||೩||

ಎಂದು ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ. ಶಕಟರೇಫ ಬಳಕೆಯಾಗಿದೆ.

ಕರ್ಣಾಟಕ ಕವಿ ಚರಿತೆಯ ಮೊದಲನೆಯ ಸಂಪುಟದಲ್ಲಿ "ಸಿಂಗದೇವ ಸು. ೧೧೯೮ ಸೊರಬದ ೧೪೦ನೆಯ ಶಾಸನದಲ್ಲಿ (ಶಕ ೧೧೧೯) ಈತನನ್ನು ಸರಸೋದಾರ ಕವಿತ್ವ ಚತುರಾಸ್ಯಂ ಎಂದು ಹೊಗಳಿದೆ. ಈತನು ಜಿಡ್ಡುಳಿಗೆಯ ಎಕ್ಕಲದೇವನ ಮತ್ತು ಚಟ್ಟಳ ದೇವಿಯ ಮಗನೆಂದು ಹೇಳಿದೆ. ಇವನು ಆವ ಗ್ರಂಥಗಳನ್ನು ಬರೆದಿದ್ದಾನೆಯೊ ತಿಳಿಯದು" ಎಂದು ಹೇಳಲಾಗಿದೆ. ಈ ಸಿಂಗದೇವನೇ ಪ್ರಕೃತ ಕೃತಿಯ ಕರ್ತೃವೇ ಅಲ್ಲವೇ ಎಂದು ನಿರ್ಧರಿಸಲು ಮತ್ತೂ ಹೆಚ್ಚು ಅಭ್ಯಾಸ ಅಗತ್ಯವಾಗಿದೆ. ಆದುದರಿಂದ ಸದ್ಯಕ್ಕೆ ಈತನ ಕಾಲ ದೇಶಾದಿಗಳ ಬಗೆಗೆ ಯಾವ ಸೂಚನೆಗಳೂ ಕಂಡುಬರುವುದಿಲ್ಲ.

ಈ ಎಲ್ಲ ಕೃತಿಗಳ ಬಗೆಗೆ ವಿವರವಾದ ಅಧ್ಯಯನ ಆದನಂತರ ಪ್ರತಿಯೊಂದು ಕೃತಿಯನ್ನೂ ಬೇರೆಬೇರೆಯಾಗಿ ವಿಮರ್ಶಿಸಲಾಗುವುದು. ಆಗ್ಗೆ ಕವಿ ಕೃತಿಗಳ ಬಗೆಗೆ

ಇನ್ನೂ ಹೆಚ್ಚಿನ ಮಾಹಿತಿಗಳು ಲಭ್ಯವಾಗುವುವೆಂದು ಆಶಿಸಿದ್ದೇನೆ. ಇವು ಆದಷ್ಟು ಬೇಗ ಅಚ್ಚಾಗಿ ಪ್ರಕಟವಾದಲ್ಲಿ ಪೂಜ್ಯಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ಶ್ರಮ ಸಾರ್ಥಕವಾಗುತ್ತದೆ; ಕನ್ನಡ ಸಾಹಿತ್ಯಕ್ಕೆ ಹೊಸ ಕೃತಿಗಳ ಸೇರ್ಪಡೆಯಾಗುತ್ತದೆ.

ಈ ಮೇಲ್ಕಂಡ ಹಸ್ತಪ್ರತಿಗಳಲ್ಲದೆ ಕವಿಚರಿತೆಯಲ್ಲಿ ಉಕ್ತವಾಗಿರುವ ಸದ್ಯಕ್ಕೆ ಅಲಭ್ಯವಾಗುಳಿದಿದ್ದ ಮತ್ತೂ ಕೆಲವು ಹಸ್ತಪ್ರತಿಗಳನ್ನು ಗುರುತಿಸಲಾಗಿದೆ. ಇವುಗಳ ಬಗೆಗೆ ಮತ್ತೊಂದು ಲೇಖನದಲ್ಲಿ ವಿವರಗಳನ್ನು ಒದಗಿಸುವ ಪ್ರಯತ್ನ ಮಾಡುತ್ತೇನೆ.

——

# ಕಾವ್ಯಾಲಂಕಾರಗಳ ಮಿಶ್ರಣ—ಒಂದು ಟಿಪ್ಪಣಿ

—ಎಸ್. ಜಗನ್ನಾಥ್

ಪ್ರಾಚೀನ ಸಾಹಿತ್ಯ ಕೃತಿಗಳನ್ನು ಓದುವಾಗ ತಲೆತಿನ್ನುವ ಸಮಸ್ಯೆಯೊಂದನ್ನು ವಾಚಕರು ಆಗಾಗ್ಗೆ ಎದುರಿಸುವುದುಂಟು. 'ಈ ಭಾಗದಲ್ಲಿ ಬಂದಿರುವ ಅಲಂಕಾರ ಯಾವುದು ? ಎಂಬುದೇ ಆ ಸಮಸ್ಯೆ. ವ್ಯಾಖ್ಯಾನಕಾರರುಗಳು ಸಹ ಮೂಲಸಾಹಿತ್ಯ ಕೃತಿಯ ಅಲಂಕಾರಗಳನ್ನು ಖಚಿತವಾಗಿ ಗುರುತಿಸುವಲ್ಲಿ ಎಡವಿರುವ ಸಾಕಷ್ಟು ನಿದರ್ಶನಗಳಿವೆ. ನಿರ್ಣಯಸಾಗರ ಪ್ರೆಸ್‌ನಲ್ಲಿ ಪ್ರಕಟವಾಗಿರುವ ನೈಷಧ ಮಹಾ ಕಾವ್ಯದ ಸಂಸ್ಕರಣದಲ್ಲಿ ಅಡಿಟಿಪ್ಪಣಿಯಲ್ಲಿ ಉದ್ಧರಿಸಲ್ಪಟ್ಟ ವಿದ್ಯಾಧರನ ವ್ಯಾಖ್ಯಾನದ ಉದ್ದಕ್ಕೂ ಇಂತಹ ಪ್ರಮಾದಗಳನ್ನು ಗುರುತಿಸಬಹುದಾಗಿದೆ.

ಕವಿಯ ವಿವಕ್ಷೆ ಮೂಲತಃ ಯಾವ ಅಲಂಕಾರದ ಕಡೆಗೆ ಇದೆ ಎಂಬುದು ಒಮ್ಮೊಮ್ಮೆ ಸ್ವಯಂ ಆಲಂಕಾರಿಕರಿಗೂ ಹೊಳೆಯದಿರುವ ಸಂದರ್ಭಗಳಿವೆ. 'ಇಲ್ಲಿರುವ ಅಲಂಕಾರ ಯಾವುದೆಂದು ನಮಗೆ ಗೊತ್ತಾಗಿಲ್ಲ'—ಎಂದು ಹೇಳುವ ಬದಲಿಗೆ ಅಂತಹ ಪ್ರಸಂಗಕ್ಕೆ "ಸಂದೇಹ-ಸಂಕರ"-ಎಂಬ ಪಾರಿಭಾಷಿಕ ಶಬ್ದ ಕೊಟ್ಟು ನುಣುಚಿಕೊಳ್ಳುವ ಜಾಣತನವನ್ನು ಆಲಂಕಾರಿಕರು ತೋರಿಸಿದ್ದಾರೆ !

ಭಾವನೆಗಳ ಪ್ರಚಂಡ ವಾಹಿನಿಯಲ್ಲಿ ಕವಿ ಕಾವ್ಯದ ರಚನೆ ಮಾಡುತ್ತಾ ಕೊಚ್ಚಿ ಕೊಂಡು ಹೋಗುವಾಗ ಅವನ ಗಮನ ಇಂಥ ಅಲಂಕಾರವನ್ನೇ ಕೊನೆಯವರೆಗೆ ನಿರ್ವಾಹ ಮಾಡಬೇಕೆಂದಿರುವುದಿಲ್ಲ. ರಸೋತ್ತೇಜಕತೆಯ ಕಡೆ ಅವನ ವ್ಯಾಪಾರ ಕೇಂದ್ರೀಕೃತವಾಗಿರುತ್ತದೆ. ವಾಕ್ಯದ ವಿವಿಧ ವಿನ್ಯಾಸಗಳು ಭೋರ್ಗರೆಯುತ್ತ ಆವನ ಕಾವ್ಯದಲ್ಲಿ ನುಗ್ಗುತ್ತಿರುತ್ತವೆ. ಹೀಗಾಗಿ ಒಂದು ಪದ್ಯದ ಆದಿಬಿಂದು, ಮಧ್ಯ ಬಿಂದು(ಗಳು) ಮತ್ತು ಅಂತಿಮಬಿಂದು ಇವುಗಳೆಲ್ಲೆಲ್ಲ ಒಂದೇ ಅಲಂಕಾರ ಇರಬೇಕಾದದ್ದು ಬೇಕಾಗಿಯೂ ಇಲ್ಲ, ಸಾಕಾಗುವುದೂ ಇಲ್ಲ. ಆದ್ದರಿಂದ ಅಲಂಕಾರಗಳ ಮಿಶ್ರಣವು ಸಾಹಿತ್ಯದ ಅತಿ ಸಾಧಾರಣವಾದ ಧರ್ಮ.

ಇಂಥ ಅಲಂಕಾರ ಮಿಶ್ರಣವು ಪದ್ಯಗಳಲ್ಲಿ ಎರಡು ರೀತಿಯಲ್ಲಿ ಬರುವುದುಂಟು. ಒಂದು, ಬಿಡಿಬಿಡಿಯಾಗಿ. ಅರ್ಥಾತ್, ಇದರಲ್ಲಿ ಒಂದು ಅಲಂಕಾರಕ್ಕೂ ಮತ್ತೊಂದು ಅಲಂಕಾರಕ್ಕೂ ಸಂಬಂಧವಿರುವುದಿಲ್ಲ. ಇಂಥ ಪ್ರತ್ಯೇಕವಾದ ಅಸ್ತಿತ್ವವನ್ನು ಅಲಂಕಾರ ಗಳು ಕಾಪಾಡಿಕೊಂಡಿರುವ ಸಂದರ್ಭಕ್ಕೆ 'ಅಲಂಕಾರ ಸಂಸೃಷ್ಟಿ' ಎಂಬ ಹೆಸರು ಕೊಡಲಾಗಿದೆ.

ಉದಾ : ಲಿಂಪತೀವ ತಮೋಽಂಗಾನಿ ವರ್ಷತೀವಾಂಜನಂ ನಭಃ ।
ಅಸತ್ ಪುರುಷ ಸೇವೆವ ದೃಷ್ಟಿ ರ್ವಿಫಲತಾಂ ಗತಾ ॥

(ಕಾವ್ಯಪ್ರಕಾಶ. ಪುಟ 543)

[ಕತ್ತಲೆಯು ದೇಹದ ಅಂಗಗಳನ್ನು ಬಳಿಯುತ್ತಿರುವಂತಿದೆ. ಆಕಾಶವು ಕಾಡಿಗೆಯನ್ನು ಸುರಿಸುತ್ತಿರುವಂತಿದೆ. ದುಷ್ಟಪುರುಷರ ಸೇವೆಯಂತೆ ಕಣ್ಣಿನ ಶಕ್ತಿಯು ನಿಷ್ಫಲವಾಗಿದೆ.]

ಈ ಪದ್ಯದ ಪೂರ್ವಾರ್ಧದಲ್ಲಿ ಎರಡು ಉತ್ಪ್ರೇಕ್ಷೆಗಳಿವೆ. ಉತ್ತರಾರ್ಧದಲ್ಲಿರುವುದು, ಉಪಮಾ. ಇವೆರಡಕ್ಕೂ ಸಂಬಂಧವಿಲ್ಲ.

—ಇದು, ಅರ್ಥಾಲಂಕಾರ ಸಂಸೃಷ್ಟಿಯ ಉದಾಹರಣೆ.

ಶಬ್ದಾಲಂಕಾರ ಸಂಸೃಷ್ಟಿಯ ಉದಾಹರಣೆ ಹೀಗಿದೆ :

ವದನ ಸೌರಭಲೋಲಪರಿಭ್ರಮದ್-
ಭ್ರಮರ ಸಂಭ್ರಮ ಸಂಭೃತ ಶೋಭಯಾ ।
ಚಲಿತಯಾ ವಿದಧೇ ಕಲಮೇಖಲಾ
ಕಲಕಲೋಲಕಲೋಲ ದೃಶಾಽನಯಾ ॥

(ಅಲ್ಲೇ. ಪುಟ 543)

[ಇದು ಶಬ್ದಾಲಂಕಾರವಾದ್ದರಿಂದ ಭಾಷಾಂತರಿಸಿಲ್ಲ.]

ಈ ಉದಾಹರಣೆಯಲ್ಲಿ ಕೊನೆಯ ಪಾದದಲ್ಲಿನ **'ಲಕಲೋ' 'ಲಕಲೋ'** ಎಂಬ ಭಾಗದಲ್ಲಿ ಯಮಕ. ಉಳಿದೆಡೆ ಅನುಪ್ರಾಸ.

ಅರ್ಥಾಲಂಕಾರ ಹಾಗೂ ಶಬ್ದಾಲಂಕಾರ ಇವೆರಡರ ಮಿಶ್ರಣಕ್ಕೆ ಉದಾಹರಣೆ :

ದೇವಃ ಪಾಯಾದಪಾಯಾನ್ನಃ ಸ್ಮೇರೇಂದೀವರಲೋಚನಃ ।
ಸಂಸಾರಧ್ವಾಂತ ವಿಧ್ವಂಸಹಂಸಃ ಕಂಸನಿಷೂದನಃ ॥

(ಸಾಹಿತ್ಯದರ್ಪಣ. ಪುಟ. 622)

[ಸುಂದರವಾದ ತಾವರೆಯಂತೆ ಕಣ್ಣುಳ್ಳ, ಸಂಸಾರವೆಂಬ ಅಜ್ಞಾನದ ಕತ್ತಲೆಯನ್ನು ನಾಶಪಡಿಸುವುದರಲ್ಲಿ ಸೂರ್ಯನಾಗಿರುವ, ಕಂಸ-ಘಾತಕ (ಶ್ರೀ ಕೃಷ್ಣ) ದೇವನು ನಮ್ಮನ್ನು ಅಪಾಯದಿಂದ ಕಾಪಾಡಲಿ.]

ಇಲ್ಲಿ 'ಪಾಯಾದ ಪಾಯಾದ್'—ಎನ್ನುವ ಭಾಗ ಯಮಕದಿಂದ ಕೂಡಿದೆ. ಧ್ವಂಸ–ಹಂಸ'–ಇದು ಅನುಪ್ರಾಸಕ್ಕೆ ಉದಾಹರಣೆ.

ದ್ವಿತೀಯ ಪಾದದಲ್ಲಿನ 'ಸ್ಮೇರೇಂದೀವರಲೋಚನಃ' ಎಂಬುದು ಉಪಮಾಕ್ಕೂ 'ಸಂಸಾರಧ್ವಾಂತ ವಿಧ್ವಂಸ ಹಂಸಃ'—ಇದು ರೂಪಕಕ್ಕೂ ಉದಾಹರಣೆ.

ಒಟ್ಟೊಟ್ಟಿಗೆ ಅಲಂಕಾರಗಳನ್ನು ಕವಿಯು ಉಂಡುಂಡೆಯಾಗಿ ಪ್ರಯೋಗಿಸುವಾಗ, 1. ಒಂದು ಅಲಂಕಾರವು ಮತ್ತೊಂದಕ್ಕೆ ಉಪಕಾರವಾಗಿ ಅಥವಾ ಪೋಷಕರವಾಗಿ ಬರುವುದುಂಟು. 2. ಕೆಲವು ಸಂದರ್ಭಗಳಲ್ಲಿ ಹಲವು ಅಲಂಕಾರಗಳಲ್ಲಿ ಹೆಚ್ಚಿನ ಒತ್ತು

ಸಿಕ್ಕಿರುವುದು ಯಾವುದಕ್ಕೆಂದು ಗೊತ್ತಾಗದೇ ಹೋಗುವುದುಂಟು. 3. ಸಮವಾದ ಪ್ರಾಧಾನ್ಯ ಎರಡು ಅಲಂಕಾರಗಳಿಗೆ ಸಿಕ್ಕುವುದೂ ಉಂಟು. 4. ಬರೀ ಅಷ್ಟೇ ಅಲ್ಲ, ಒಂದೇ ಸಾಮಾಸಿಕ ಪದದಲ್ಲಿ ಎರಡೆರಡು ಅಲಂಕಾರಗಳು ಒಟ್ಟೊಟ್ಟಿಗೆ ಬರುವುದುಂಟು.

— ಈ ಪ್ರಸಂಗಗಳಿಗೆ 'ಸಂಕರ' ಎಂದು ಹೆಸರು. ಕ್ರಮವಾಗಿ ಇವುಗಳನ್ನು 1. ಅಂಗಾಂಗಿ ಭಾವಸಂಕರ 2. ಸಂದೇಹ ಸಂಕರ 3. ಸಮಪ್ರಾಧಾನ್ಯ ಸಂಕರ, 4. ಏಕವಾಚಕಾನುಪ್ರವೇಶಸಂಕರ–ಎಂದು ಕರೆಯುತ್ತಾರೆ.

**1. ಅಂಗಾಂಗಿ ಭಾವ ಸಂಕರಕ್ಕೆ :**

ಅನುರಾಗವತೀ ಸಂಧ್ಯಾ, ದಿವಸಸ್ತತ್ ಪುರಃಸರಃ ।
ಅಹೋ ದೈವಗತಿಶ್ಚಿತ್ರಾ ನ ತಥಾಽಪಿ ಸಮಾಗಮಃ ॥

(ಅಲ್ಲೇ ಪುಟ. 630)

(ಸಂಧ್ಯೆಯು ಅನುರಾಗವುಳ್ಳವಳು. (ಅನುರಾಗ ಇದ್ದೇ ಇದೆ.) ಯಾವಾಗಲೂ ದಿವಸವು ಆದರ ಮುಂದೆಯೇ. ಅಯ್ಯೋ ದೈವಗತಿಯೇ ! ಹಾಗಿದ್ದರೂ ಸಮಾಗಮವಿಲ್ಲವಲ್ಲ !]

'ಸಂಧ್ಯಾ' ಸ್ತ್ರೀಲಿಂಗ. 'ದಿವಸ' ಪುಲ್ಲಿಂಗ. ಈ ಪದ್ಯವನ್ನು ಓದಿದ ಕೂಡಲೇ ನಾಯಕನಾಯಿಕಾಭಾವವು ಸ್ಫುರಿಸುವುದರಿಂದ ಸಮಾಸೋಕ್ತಿ. ಉತ್ತರಾರ್ಧದಲ್ಲಿ ಸಮಾಗಮವಾಗಿಲ್ಲ ಎಂಬ ಮಾತಿಗೆ ಒತ್ತು ಸಿಕ್ಕಿರುವುದರಿಂದ "ಕಾರಣವಿದ್ದಾಗ್ಯೂ ಕಾರ್ಯವಾಗಿಲ್ಲ"ವೆಂಬ ಲಕ್ಷಣವುಳ್ಳ ವಿಶೇಷೋಕ್ತಿಗೆ ಇದು ಪ್ರಾಧಾನ್ಯವನ್ನು ಕೊಟ್ಟಿದೆ. ಅರ್ಥಾತ್ ವಿಶೇಷೋಕ್ತಿಯೇ ಅಂಗಿ (ಮುಖ್ಯ.) ಸಮಾಸೋಕ್ತಿಯು ಅಂಗ.

ಇದೇ ಪ್ರಭೇದದ ಮತ್ತೊಂದು ಉದಾಹರಣೆ :

ಸಮಸ್ತಜೀವಿಸ್ಪೃಹಣೀಯ ಧರ್ಮವಾನ್
ಜಲಪ್ರದಾತಾ ಜಲದಃ ಕದಾಚನ ।
ಯಮಸ್ಯ ಮಿತ್ರೀಯತಿ ಘೋರಧಾರಯಾ
ಭಯಾನಕಾ ಶಕ್ತಿಮದತ್ಯುದಾರತಾ ॥

(ಲೇಖಕನ ಸ್ವಂತ ಪದ್ಯ)

[ಎಲ್ಲ ಜೀವಿಗಳೂ ಆಸೆ ಪಡುವಂತಹ ಗುಣವುಳ್ಳ ಹಾಗೂ ನೀರನ್ನು ಕೊಡುವ ಮೋಡವು ಕೆಲವೊಮ್ಮೆ ಅತಿ ಉಗ್ರವಾದ ಧಾರೆಯಿಂದಾಗಿ ಯಮನ ಸ್ನೇಹಿತನಂತೆ ಆಗಿಬಿಡುತ್ತದೆ. ಶಕ್ತಿಯುಳ್ಳವರ ಅತಿ ಉದಾರತೆಯೂ ಒಮ್ಮೊಮ್ಮೆ ಭಯಂಕರ.]

ವಿಶಿಷ್ಟವಾದ ಮೇಘದ ಉದಾಹರಣೆಯನ್ನು ಸಾಮಾನ್ಯೀಕರಿಸಿದ ಹೇಳಿಕೆಯ ಮೂಲಕ ಸಮರ್ಥನೆ ಮಾಡಿರುವುದರಿಂದ ಇದು ಅರ್ಥಾಂತರನ್ಯಾಸ. ಆದರೆ 'ಯಮಸ್ಯ ಮಿತ್ರೀಯತಿ' ಎಂಬ ಭಾಗದಲ್ಲಿ ಉಪಮಾಲಂಕಾರವಿದೆ. ಇದರಲ್ಲಿ ಅರ್ಥಾಂತರನ್ಯಾಸವು ಅಂಗಿ. ಉಪಮಾ, ಅಂಗ.

**2. ಸಂದೇಹ ಸಂಕರಕ್ಕೆ ಉದಾಹರಣೆ :**

ಸ್ಫುರನ್ನಖಾಂಶು ಕಿಂಜಲ್ಕಂ ಜಯತಿ ತ್ವತ್ಪದಾಂಬುಜಮ್ ।

(ರಾಜಚೂಡಾಮಣಿ ದೀಕ್ಷಿತನ 'ಕಾವ್ಯದರ್ಪಣ'ದಲ್ಲಿನ ಪದ್ಯ. ಇದು O.R.I.ನ ಕಾವ್ಯಪ್ರಕಾಶದ ಸಂಸ್ಕರಣದಲ್ಲಿ ಮುದ್ರಿತವಾಗಿದೆ.)
[ (ಉಪಮೆಗೆ ಅನುಕೂಲವಾದ ಮೊದಲನೇ ಅರ್ಥ : )
ಉಗುರುಗಳಲ್ಲಿ ಹೊಳೆಯುತ್ತಿರುವ ಕಾಂತಿಗಳನ್ನೇ ಕೇಸರದಂತೆ ತೋರಿಸುತ್ತಿರುವ ನಿನ್ನ ಕಮಲಸದೃಶ ಪಾದವು ವಿರಾಜಮಾನವಾಗಿದೆ. (ರೂಪಕಕ್ಕೆ ಅನುಗುಣವಾದ ಎರಡನೇ ಅರ್ಥ :) ಉಗುರುಗಳಲ್ಲಿ ಹೊಳೆಯುತ್ತಿರುವ ಕಾಂತಿಗಳನ್ನೇ ಕೇಸರಗಳನ್ನಾಗಿ ಮಾಡಿಕೊಂಡಿರುವ ನಿನ್ನ ಪಾದಾಕಾರದ ಕಮಲವು ವಿರಾಜಮಾನವಾಗಿದೆ. [1] ]

— ಇಲ್ಲಿ ಪ್ರಾಧಾನ್ಯ ಸಿಕ್ಕಿರುವುದು ಉಪಮೆಗೋ ರೂಪಕಕ್ಕೋ ಸ್ಪಷ್ಟವಾಗುವುದಿಲ್ಲವಾಗಿ ಇದು ಸಂದೇಹ–ಸಂಕರಕ್ಕೆ ಉದಾಹರಣೆಯಾಗುತ್ತದೆ.

**3. ಸಮಪ್ರಾಧಾನ್ಯಸಂಕರಕ್ಕೆ ಉದಾಹರಣೆ :**

ಉಚ್ಚೈಸ್ತರ ಕುಲಕ್ಷ್ಮಾಭೃತ್ ಪಾಂಡರೀಕರಣ [2] ಕ್ಲಮಾಮ್ ।
ಕೀರ್ತಿಂ ತವ ದಿಶಾಂ ರಾಮ ! ಮನ್ಯೇ ಶ್ರೀಖಂಡಚರ್ಚಿತಾಮ್ ॥

(ಇದೂ ಸಹ ರಾಜಚೂಡಾಮಣಿ ದೀಕ್ಷಿತನ ಪದ್ಯ. ಮೇಲಿನ ಟಿಪ್ಪಣಿ ಇದಕ್ಕೂ ಅನ್ವಯಿಸುತ್ತದೆ.)

[ಹೇ ರಾಮ ! ಅತ್ಯಂತ ಉನ್ನತವಾಗಿರುವ ಕುಲಪರ್ವತವನ್ನೂ ಬೆಳ್ಳಗೆ ಮಾಡುವುದರಲ್ಲಿ ಚತುರವಾದ ನಿನ್ನ ಕೀರ್ತಿಯನ್ನು ದಿಕ್ಕುಗಳಿಗೆ ಶ್ವೇತಚಂದನದ ಲೇಪವೆಂದು ನಾನು ಭಾವಿಸುತ್ತೇನೆ.]

ಇಲ್ಲಿ ಪೂರ್ವಾರ್ಧದ ತದ್ಗುಣಾಲಂಕಾರ ಹಾಗೂ ಉತ್ತರಾರ್ಧದಲ್ಲಿನ ಉತ್ಪ್ರೇಕ್ಷೆ ಎರಡೂ ಪರಸ್ಪರ ಅವಲಂಬ್ಯ–ಅವಲಂಬಕಗಳು. ಹೀಗಾಗಿ ಇದು ಸಂಕರ. ಎರಡು ಅಲಂಕಾರಗಳಿಗೂ ಪ್ರಾಧಾನ್ಯವೂ ಇದೆ. ಆದ್ದರಿಂದ ಸಮಪ್ರಾಧಾನ್ಯಸಂಕರ.

**4. ಏಕವಾಚಕಾನುಪ್ರವಿಷ್ಟ ಸಂಕರಕ್ಕೆ ಉದಾಹರಣೆ :**

ತವ ಪರಾಕ್ರಮ ಚಂಡಿಮಸಿದ್ಧಯೇ
ವಿಹಿತತೀವ್ರ ತಪಾಃ ಪೃಥಿವೀಪತೇ ।

---

1. ಶ್ರೀ ರಾಮನ ಸ್ತುತಿಯಿದು.
2. 'ಕ್ರಮಾಮ್' ಎಂದು ಅಚ್ಚಾಗಿರುವ ಸಂಸ್ಕರಣದಲ್ಲಿದೆ. ಇದು ಕೇವಲ ಮುದ್ರಣ ದೋಷ.

ಗಗನಗಹ್ವರ ಭಾಸ್ಕರ ಮಸ್ಕರೀ
ಪ್ರಖರ ಪೃಶ್ನಿಫಲೈರ್ವಿಕಟೋಽಟತಿ ॥
(ಲೇಖಕನ ಸ್ವಂತ ಪದ್ಯ)

[ಹೇ ರಾಜ ! ನಿನ್ನ ಪರಾಕ್ರಮದ ಉಗ್ರತೆಯನ್ನು ತಾನೂ ಪಡೆಯಬೇಕೆಂಬ ಉದ್ದೇಶದಿಂದ, ಗಗನವೆಂಬ ಗುಹೆಯಲ್ಲಿ ಭಾಸ್ಕರನೆಂಬ ತಪಸ್ವಿಯು ಘೋರವಾದ ತಪಸ್ಸನ್ನು ಮಾಡಿ (ಈಗ) ಪ್ರಚಂಡವಾದ ಕಿರಣಗಳ ಸಿದ್ಧಿಗಳನ್ನು ಹೊಂದಿ ಭಯಂಕರನಾಗಿಬಿಟ್ಟು, ಚಲಿಸುತ್ತಿದ್ದಾನೆ.]

'ಗಗನ ಗಹ್ವರ' ಹಾಗೂ 'ಭಾಸ್ಕರ ಮಸ್ಕರೀ' ಈ ಭಾಗದಲ್ಲಿ ಅನುಪ್ರಾಸವೆಂಬ ಶಬ್ದಾಲಂಕಾರ ಮಾತ್ರವಲ್ಲದೆ, ರೂಪಕವೆಂಬ ಅರ್ಥಾಲಂಕಾರವೂ ಬಂದಿದೆ.

**ಸಂದೇಹಸಂಕರಕ್ಕೆ ಮಮ್ಮಟ ಕೊಟ್ಟಿರುವ ಉದಾಹರಣೆ :**

ನಯನಾನಂದ ದಾಯೀಂದೋರ್ಬಿಂಬಮೇತತ್ ಪ್ರಸೀದತಿ ।
ಅಧುನಾಪಿ ನಿರುದ್ಧಾಶಂ ಅವಶೀರ್ಣಮಿದಂ ತಮಃ ॥
**(ಕಾವ್ಯಪ್ರಕಾಶಃ ಪುಟ. 555)**

[ಕಣ್ಣುಗಳಿಗೆ ಆನಂದ ನೀಡುವ ಈ ಚಂದ್ರಬಿಂಬವು ಪ್ರಸನ್ನವಾಗಿದೆ. ಈಗಲೂ ದಿಕ್ಕುಗಳನ್ನು ತಡೆಗಟ್ಟಿದೆ (?) ಆಸೆಗಳನ್ನು ಹತ್ತಿಕ್ಕಿದೆ. (??) ಕತ್ತಲು ಚೂರುಚೂರಾಗಿ ಹೋಗಿದೆ.]

— ಈ ಪದ್ಯದ ಮೇಲೆ ಮಮ್ಮಟನ ಆಲಂಕಾರಿಕ ವಿಮರ್ಶೆ ಹೀಗಿದೆ :

'ಕಾಮೋದ್ದೀಪಕವಾದ ಕಾಲವಿದು'-ಎಂಬ ಮಾತನ್ನೇ ಮತ್ತೊಂದು ರೀತಿ ಹೇಳಿದ್ದರಿಂದ ಇದು ಪರ್ಯಾಯೋಕ್ತವೋ ? ಉಪಮೇಯವಾದ ಮುಖವನ್ನು ಉಪಮಾನವಾದ ಚಂದ್ರಬಿಂಬವೇ ನುಂಗಿರುವುದರಿಂದ ರೂಪಕಾತಿಶಯೋಕ್ತಿಯೋ ? 'ಈ' ಎಂಬ ಪದದಿಂದ ಚಂದ್ರತ್ವದ ಆರೋಪವನ್ನು ಕಾಂತಾಮುಖದಲ್ಲಿ ಆರೋಪಿಸಿರುವುದರಿಂದ ರೂಪಕವೋ ? 'ಈ' ಎಂಬುದರಿಂದ ಪ್ರಕೃತವಾಗಿ ತೋರುವ ಕಾಂತಾ ಮುಖವು ಪ್ರಕೃತವಾಗಿ, ಚಂದ್ರಬಿಂಬವು ಅಪ್ರಕೃತವಾಗಿ ಎರಡಕ್ಕೂ 'ಪ್ರಸನ್ನವಾಗಿರುವಿಕೆ' ಎಂಬ ಏಕಧರ್ಮಾನ್ವಯವಿರುವುದರಿಂದ ದೀಪಕವೋ ? ಎರಡೂ ಪ್ರಕೃತವೇ ಆಗಿದೆಯೆಂದಿಟ್ಟು ಕೊಂಡರೆ ಬರುವ ತುಲ್ಯಯೋಗಿತೆಯೋ ? ಸಂಧ್ಯಾ ಸಮಯದಲ್ಲಿ 'ನಯನಾನಂದದಾಯಿ' ಎಂಬ ವಿಶೇಷಣ ಮುಖಚಂದ್ರಗಳೆರಡಕ್ಕೂ ಸಮಾನವಾಗಿರುವುದರಿಂದ ಚಂದ್ರಬಿಂಬದ ಉಲ್ಲೇಖದಿಂದಾಗಿ ನಾಯಿಕಾಮುಖ ಪ್ರತೀತವಾಗುವುದರಿಂದ ಸಮಾಸೋಕ್ತಿಯೋ ? ಅಥವಾ ಮುಖನೈರ್ಮಲ್ಯವನ್ನು ಪ್ರಸ್ತಾಪಿಸಿರುವುದರಿಂದ ಅಪ್ರಸ್ತುತ ಪ್ರಶಂಸೆಯೋ ? (!!) ಕವಿಯ ಹೃದಯವು ಈ ಪದ್ಯದಲ್ಲಿ ಯಾವ ಅಲಂಕಾರಕ್ಕೆ ಪ್ರಾಧಾನ್ಯ ಕೊಟ್ಟಿದೆಯೆಂದು ಗೊತ್ತಾಗುವುದಿಲ್ಲವಾದ್ದರಿಂದ ಸಂದೇಹ ಸಂಕರಕ್ಕೆ ಇದು ಉದಾಹರಣೆಯಾಗುತ್ತದೆ.

ಮೇಲಿನ ಪದ್ಯದಲ್ಲಿ ಒಂದಾದರೂ ಅಲಂಕಾರವಿದೆಯೇ ಎಂಬುದೇ ನಮ್ಮಂಥ ಬಡಪಾಯಿಗಳಿಗೆ 'ಸಂದೇಹ'ವಾಗುವಾಗ, ಇಷ್ಟೊಂದು ಅಲಂಕಾರಗಳ ಅಸ್ತಿತ್ವದ ಸಂದೇಹ'ವನ್ನು ಎಬ್ಬಿಸಿರುವ ಮಮ್ಮಟನಿಗೆ ಕೈ ಮುಗಿಯಲೇ ಬೇಕು.

ಮಮ್ಮಟನ ಹೆಸರೆತ್ತದೆ ಕೆಲವು ವಿಷಯಗಳಲ್ಲಿ ಅವನ ಅಭಿಪ್ರಾಯಗಳನ್ನು ಕಾಪಿ ಹೊಡೆದಿರುವ ವಿಶ್ವನಾಥನು ತನ್ನ ಸಾಹಿತ್ಯದರ್ಪಣದಲ್ಲಿ ಸಂದೇಹ ಸಂಕರಕ್ಕೆ ಮಮ್ಮಟ ನನ್ನೇ ಭಟ್ಟಿ ಇಳಿಸಿದ್ದಾನೆ. ಆದರೆ 'ಅಳಿಯ ಅಲ್ಲ, ಮಗಳ ಗಂಡ' ಎಂಬ ಗಾದೆಗೆ ಗೌರವ ಸಿಕ್ಕುವಷ್ಟಾದರೂ ಉನ್ನತಸ್ತರವನ್ನು ತಾನು ಕೊಡುವ ಉದಾಹರಣ ಪದ್ಯದಲ್ಲಿ ಕಾಪಾಡಿಕೊಳ್ಳಬೇಕೆಂಬ ಉದ್ದೇಶದಿಂದ ಕಾವ್ಯಪ್ರಕಾಶದ ಶ್ಲೋಕವನ್ನು ಸ್ವಲ್ಪ ಬದಲಾಯಿಸಿ,

ಇದಮಾಭಾತಿ ಗಗನೇ ಭಿಂದಾನಂ ಸತತಂ ತಮಃ ।
ಅಮಂದ ನಯನಾನಂದಕರಂ ಮಂಡಲಮೈಂದವಮ್ ।

(ಸಾಹಿತ್ಯ ದರ್ಪಣ. ಪುಟ 630)

—ಹೀಗೆ ಮಾಡಿಕೊಂಡಿದ್ದಾನೆ.

'ತಿಲತಂಡುಲ ನ್ಯಾಯ'ವನ್ನು (ಅಕ್ಕಿ, ಎಳ್ಳು) ಸಂಸೃಷ್ಟಿಗೂ, 'ನೀರ ಕ್ಷೀರ ನ್ಯಾಯ' ವನ್ನು (ನೀರು, ಹಾಲು) ಸಂಕರಕ್ಕೂ ಹೋಲಿಸುತ್ತಾರೆ. ಮೊದಲನೆಯದು ಬಿಂಗಡ ವಾಗಿ ಕಾಣಿಸುತ್ತದೆ. ಎರಡನೆಯದು ಬೆರಕೆಯಾಗಿ ಹೋಗಿರುತ್ತದೆ.

## ಗ್ರಂಥ ಋಣ


ಕಾವ್ಯಪ್ರಕಾಶ – ಮಮ್ಮಟ ವಿರಚಿತ. ಸಂ. ವೆಂಕಟನಾಥಾಚಾರ್ಯ. ಸಂಪುಟ 2. 1977. (ಪ್ರಾ.ವಿ.ಸಂ. ಸಂಸ್ಕರಣ.)

ಸಾಹಿತ್ಯ ದರ್ಪಣ – ವಿಶ್ವನಾಥ ವಿರಚಿತ. ಸಂ. ದುರ್ಗಾಪ್ರಸಾದ ದ್ವಿವೇದಿ. 1922. (ನಿರ್ಣಯ ಸಾಗರ ಸಂಸ್ಕರಣ.)

# ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಜೀವಿತಕಾಲ ವಿಚಾರ

—ಪ್ರೊ|| ಸಿ. ಮಹಾದೇವಪ್ಪ

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಎಡೆಯೂರಲ್ಲಿ ಯೋಗಸಮಾಧಿಸ್ಥರಾಗಿರುವ ಕಗ್ಗರೆಯ ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಜೀವಿತಕಾಲದ ಶತಮಾನ ಹದಿನೈದನೆಯ ಶತಮಾನವೇ ಹೊರತು ಹದಿನಾರನೆಯದಲ್ಲ ಎಂಬುದಕ್ಕೆ ಇರುವ ಕೆಲವು ಗ್ರಂಥಸ್ಥ ಆಧಾರಗಳಲ್ಲಿ ಮುಖ್ಯವಾದ ಅಂಶಗಳನ್ನಿಲ್ಲಿ ನಿರೂಪಿಸಬಹುದಾಗಿದೆ :–

ಪ್ರಥಮತಃ ಶಾಂತೇಶನು ತನ್ನ ತೋಂಟದ ಸಿದ್ಧೇಶ್ವರ ಪುರಾಣದ ಮೊದಲನೆ ಸಂಧಿಯಲ್ಲಿ ತನ್ನ ವಂಶಪರಂಪರೆಯನ್ನು ಹೇಳುತ್ತ ಅಮರಗುಂಡದ ಮಲ್ಲಿಕಾರ್ಜುನನ ನಿಷ್ಠಾಭಕ್ತನಾದ ಗುರುಭಕ್ತನನ್ನು ಪೂಜ್ಯಭಾವದಿಂದ ಸ್ಮರಿಸಿದ್ದಾನೆ. ಆ ಗುರುಭಕ್ತನ ವಂಶಸ್ಥನೂ ವಾತುಲಾಗಮ ಟೀಕಾಕಾರನೂ ಯೋಗಷಟ್ಸ್ಥಲ, ವೀರಮಾಹೇಶ್ವರಾಚಾರ ಸ್ಥಾಪನ ನಿರೂಪಣ, ಗಣಭಾಷ್ಯರತ್ನಮಾಲಾ ಪರಿಮಿತವ ವೀರಶೈವಮಹಿಮಾತಿಶಯನೂ ಆದ ಗುಬ್ಬಿ ಮಲ್ಲಣಾರ್ಯನ ಪ್ರಪೌತ್ರ ತಾನೆಂದು ತಿಳಿಸಿದ್ದಾನೆ. ಆ ಗುಬ್ಬಿಯ ಗುರು ಮಲ್ಲಣಾರ್ಯನ ಪೌತ್ರನಾದ ಕವಿ ಮಲ್ಲಣಾರ್ಯನು ಬಸವಪುರಾಣದ ಮಲ್ಲಣಾರ್ಯನೆಂದು ಪ್ರಖ್ಯಾತನಾಗಿದ್ದನೆಂದು ತಿಳಿಸಿ ಆತನ "ಪರಮ ಪುತ್ರಾಂ ಶಾಂತ ದೇಶಿಕ"[1] ಎಂಬುದಾಗಿ ತನ್ನ ಹೆಸರನ್ನು ಹೇಳಿಕೊಂಡಿದ್ದಾನೆ.

ಕವಿ ಮಲ್ಲಣಾರ್ಯನು ತನ್ನ ಭಾವಚಿಂತಾರತ್ನದಲ್ಲಿ ಅದರ ರಚನಾಕಾಲ ಕ್ರಿ.ಶ. 1513 – ಬಾಣ – ಗುಣ – ವಾರ್ಧಿ – ವಿಧು (೧೪೩೫) ಸಂದ ಶಕವರ್ಷ – ಶ್ರೀಮುಖ ಸಂವತ್ಸರ ಎಂಮು ನಿರ್ದೇಶಿಸಿದ್ದಾನೆ. ಆ ಕೃತಿರಚನೆಯ ವೇಳೆಗೆ ಮಲ್ಲಣಾರ್ಯನಿಗೆ ಸುಮಾರು ಇಪ್ಪತ್ತು–ಇಪ್ಪತ್ತೈದು ವರ್ಷ ವಯಸ್ಸಾದರೂ ಆಗಿರಬೇಕೆಂದು ಗ್ರಹಿಸಬಹುದಾಗಿದೆ. ಅಸಾಧಾರಣ ಸನ್ನಿವೇಶವಲ್ಲದಲ್ಲಿ ಸಾಮಾನ್ಯವಾಗಿ ಕಾವ್ಯವನ್ನು ರಚಿಸಬಲ್ಲ ಆ ಪ್ರಾಪ್ತ ವಯಸ್ಸಿಗೆ ಬರುವ ಸಮಯಕ್ಕೆ ಆತನ ತಂದೆಯಾದ ಗುರುಭಕ್ತನಿಗೆ ಕನಿಷ್ಠ ನಲಪತ್ತು ನಲವತ್ತಮೂರು ವರ್ಷಗಳಾದರೂ ಆಗಿರಲು ಸಾಧ್ಯ. ಎಂದ ಬಳಿಕ ಗುರುಭಕ್ತನ ಕಾಲ ಕ್ರಿ. ಶ. 1475ರ ಹಿಂದಕ್ಕೆ ಸರಿಯುವುದಷ್ಟೆ. ಆ ಗುರುಭಕ್ತನ ತಂದೆಯಾದ ಗುಬ್ಬಿಮಲ್ಲಣ್ಣ ಅಥವಾ ಹಿರಿಯ ಮಲ್ಲಣಾರ್ಯನ ಜೀವಿತಕಾಲ 15ನೆಯ ಶತಮಾನವೆಂಬುದು ಸ್ವತಃ ಸಿದ್ಧ.

---

1. ಶಾಂ.ಸಿ. ಪು. ೧-೧೭

ಗೋಸಲ ಚೆನ್ನಬಸವೇಶ್ವರರು ಗುಬ್ಬಿಯಲ್ಲಿ "ಗುರುಮಲ್ಲಿನಾಥ"ನಿಂದ ಸೇವೆಯನೊಂದುತಿಲ್ಲಿ ನೆಲೆಗೊಂಡನಿದೇಂ ಘನಪುಣ್ಯ ಕೋಶನೋ ! [2] ಎಂಬೀ ವರ್ಣನೆಯಲ್ಲಿ ಗುಬ್ಬಿ ಮಲ್ಲಣ್ಣನನ್ನು 'ಗುರು ಮಲ್ಲಿನಾಥ'ನೆಂದು ಕರೆದಿರುವುದನ್ನು ಗಮನಿಸಬಹುದು. ಆತನ ಅಸಾಧಾರಣ ಪಾಂಡಿತ್ಯವನ್ನು ಸ್ತುತಿಸಿರುವವರಲ್ಲಿ ತೋಂಟದ ಸಿದ್ಧಲಿಂಗೇಶ್ವರರಿಂದ ಷಟ್‌ಸ್ಥಲಾಚಾರ್ಯ ಪಟ್ಟವನ್ನು ಪಡೆದ ಶ್ರೀ ಬೋಳಬಸವೇಶ ಹಾಗೂ ತೋಂಟದ ಸಿದ್ಧಲಿಂಗೇಶ್ವರರ ಶಿಷ್ಯ–ಶೀಲವಂತಯ್ಯ–ನ ಶಿಷ್ಯ ಹಲಗೆಯಾಚಾರ್ಯರನ್ನು ಕವಿ ಮಲ್ಲಣಾರ್ಯನು ತನ್ನ ಭಾವಚಿಂತಾರತ್ನ (ಕ್ರಿ. ಶ. 1513) ಹಾಗೂ ವೀರಶೈವಾಮೃತ ಮಹಾಪುರಾಣ (ಕ್ರಿ.ಶ.1530) ಗಳಲ್ಲಿ ಸ್ಮರಿಸಿ ಹೆಸರಿಸಿರುವುದನ್ನು ಮರೆಯುವಂತಿಲ್ಲ.

ಶಾಂತೇಶನು ತನ್ನ ತೋಂಟದಸಿದ್ಧೇಶ್ವರ ಪುರಾಣದ ಪ್ರತಿ ಸಂಧಿಯ ಸಮಾಪ್ತಿ ಪದ್ಯದಲ್ಲಿ ತನ್ನ ಹಾಗೂ ತನ್ನ ಕೃತಿಯ ಬಗೆಗೆ ಆಡಿರುವ ಮಾತುಗಳಲ್ಲಿ ತನ್ನ ಮುತ್ತಾತನಾದ ಮಲ್ಲಣಾರ್ಯನ ವಂಶಾಬ್ಧಿಚಂದ್ರ ತಾನೆಂದು ವರ್ಣಿಸಿಕೊಂಡಿರುವುದನ್ನು ಕಾಣಬಹುದು.

> ಇಸು ವಿಮುಲ ಗುರು ತೋಂಟದಾರ್ಯನ
> ಪದಕಮಲ ಷಟ್ಟರಣನೆನಿಸುವ
> ಸಪಮುಲದ ಸನ್ಮಲ್ಲಣಾರ್ಯನ ಕುಲಶರಧಿಚಂದ್ರಾ ।
> ಪದುಳದಿಂ ಶಾಂತೇಶನೊರೆದೀ
> ವಿದಿತ ಸಿದ್ಧೇಶ್ವರ ಪುರಾಣವ
> ನೊದವಿ ಕೇಳಿದ ಭಕ್ತತತಿಗಿಷ್ಟಾರ್ಥಮೊಂದುವುದು ॥

ಈ ಪದ್ಯದಲ್ಲಿ ಶಾಂತೇಶನು ತನ್ನನ್ನು 'ಸದಮಲದ ಸನ್ಮಲ್ಲಣಾರ್ಯನ ಕುಲಶರಧಿಚಂದ್ರ'ನೆಂದು ಕರೆದುಕೊಂಡಿದ್ದಾನಲ್ಲದೆ' .... ಸನ್ಮಲ್ಲಿಣಾರ್ಯನ ಗರ್ಭಾಬ್ಧಿಚಂದ್ರ' ಎಂದು ಕರೆದು ಕೊಂಡಿಲ್ಲವೆಂಬುದನ್ನು ಗಮನಿಸುವುದಗತ್ಯ. ಶಾಂತೇಶಕವಿ ಇಲ್ಲಿ ತನ್ನ ಮುತ್ತಾತನನ್ನು ಸನ್ಮಲ್ಲಣಾರ್ಯನೆಂದಿದ್ದಾನೆ. ಆದರೆ ತನ್ನ ಕೃತಿರಚನೆಯ ಕಾಲಕ್ಕೆ ಸರಸ ಶಾಸ್ತ್ರಗಳು ಮುಖೋದ್ಗತವಾಗಿ ರಾಜಿಸುತ್ತಿದ್ದ ತನ್ನ ತಂದೆ ಕವಿ ಮಲ್ಲಣಾರ್ಯನನ್ನು ಶಾಂತೇಶನು "ಘನ ಮಲ್ಲಣಾರ್ಯ"ನೆಂದು ಕರೆದಿದ್ದಾನೆ. ಈ ಉಭಯ ಪದಪ್ರಯೋಗಗಳಲ್ಲಿಯೇ ಕವಿ ಅರ್ಥವ್ಯತ್ಯಾಸವನ್ನು ಮನಗಾಣಿಸಿದೆಯಿಲ್ಲ. ಪೂರ್ವ ಕವಿಪ್ರಯೋಗಗಳ ಶಬ್ದಾರ್ಥಜ್ಞಾನ ಭಾವಾನುಭವಗಳ ಕಲ್ಪನೆ, ನಡೆ–ನುಡಿ, ಅರಿವು–ಆಚರಣೆ, ಧರ್ಮಾಧರ್ಮ ವಿವೇಕ. ಸಂಸ್ಕೃತಿಗಳ ಸಂಬಂಧಜ್ಞಾನದ ಪ್ರಜ್ಞೆಯನ್ನು ಜಾಗ್ರತಗೊಳಿಸಿಕೊಂಡು ಶ್ರದ್ಧೆಯಿಂದ ಕೃತಿಗಳನ್ನು ಓದಿದ ಹೊರತು ಕಾವ್ಯಾರ್ಥವಿರಲಿ, ಶಬ್ದಾರ್ಥದ ತಾರತಮ್ಯವನ್ನಾಗಲಿ, ವ್ಯತ್ಯಾಸವನ್ನಾಗಲಿ ಗ್ರಹಿಸಲಾಗದು. ಸನ್ಮಲ್ಲಣಾರ್ಯ

---

2. ನೋ : ತುಮಕೂರು ಜಿಲ್ಲೆ ಎಪಿಗ್ರಾಫಿಕ ಕರ್ನಾಟಕ XII ಅನುಬಂಧ.

( ಸತ್ + ಮಲ್ಲಣಾರ್ಯ ) ಎಂಬ ವಿಶೇಷಣಯುಕ್ತ ಅಂಕಿತನಾಮದ "ಸತ್" (ಸಂ)/–ಸತ್ತು(ಕ) ಎಂಬ ಪದ ಸತ್ತಾಸ್ವರೂಪವನ್ನು ಹೊಂದಿದ್ದಾತನು ಮಲ್ಲಣಾರ್ಯ ಎಂಬುದನ್ನು ಸೂಚಿಸುತ್ತದೆ. ಬಸವಪುರಾಣದಲ್ಲಿ ಒಂದೆಡೆ [3] "ಸತ್ತುಸರಿಯಹ" ಎಂಬ ಪ್ರಯೋಗವುಂಟು. 'ಸತ್ತು ಕಲ್ಲಿನೊಳಗಹ' ಎಂಬ ಅರ್ಥವನ್ನು ಅಲ್ಲಿನ ಪದ ನಿರ್ದೇಶಿಸುತ್ತದೆ. "ಜ್ಞಾನಲೀಲಾವಿಲಾಸದಾನಂದದ ಮಹಾಲಿಂಗ ತತ್ವಸ್ವರೂಪನಹ" –ಎಂಬ ಅರ್ಥದ್ಯೋತಕ ಪ್ರಯೋಗವದೆಂಬುದು ಸುಸ್ಪಷ್ಟ. ತನ್ನ ಮುತ್ತಾತನು ತೋಂಟದಾರ್ಯರ ಪದಕಮಲ ಷಟ್ಚರಣನೆಂದು ತನ್ನ ಪುರಾಣದಲ್ಲಿ ಶಾಂತೇಶನು ಸುವಿದಿತವಾಗುವಂತೆ ನಿರೂಪಿಸಿರುವುದನ್ನು ಹಿಂದೆಯೇ ನೋಡಿದ್ದೇವೆ. ಆ ತೋಂಟದಾರ್ಯರೋ ಹರದನಹಳ್ಳಿಯ ಗೋಸಲ ಚೆನ್ನಬಸವೇಶ್ವರನ ಹಸ್ತದೊಳುದಿಸಿ ಗಂಗಾಧರನ ಘನಶೈಲವಾದ ಶಿವಗಂಗೆಗೆ ಬಂದುದನ್ನೂ ಶಾಂತೇಶನು ತನ್ನ ಗ್ರಂಥದ ಎರಡನೇ ಸಂಧಿಯ ಪಲ್ಲವದಲ್ಲಿ ತಿಳಿಸಿದ್ದಾನೆ. ಶಾಂತೇಶನ 'ಸನ್ಮಲ್ಲಣಾರ್ಯ' ಮತ್ತು 'ಘನಮಲ್ಲಣಾರ್ಯ'–ಈ ಪದಪ್ರಯೋಗಗಳ ಅರ್ಥಭೇದವನ್ನು ಸರಿಯಾಗಿಯೇ ಅರಿತವರಾಗಿದ್ದ ಆರ್.ನರಸಿಂಹಾಚಾರ್ ಅವರು "ಶಾಂತೇಶನ (ಕ.ಶ. 1561) ಸಿದ್ಧೇಶ್ವರ ಪುರಾಣದಿಂದ ಈತನು (ಗುಬ್ಬಿಮಲ್ಲಣ್ಣ) ತೋಂಟದ ಸಿದ್ಧಲಿಂಗ ಯತಿಯ(ಸು.1470) ಶಿಷ್ಯನಾಗಿದ್ದಂತೆ ತಿಳಿಯುತ್ತದೆ." -ಎಂದು ಸತ್ಯಸಂಗತಿಯನ್ನು ಸಂಕ್ಷಿಪ್ತವಾಗಿ ಪ್ರಕಟಿಸಿದ್ದಾರೆ. ಈ ಸಂದರ್ಭದಲ್ಲಿ ಶಾಂತೇಶನ ಸಿದ್ಧೇಶ್ವರ ಪುರಾಣದ ಮುಂದಿನ ಪದ್ಯಭಾಗ ಹಾಗೂ ಪದ್ಯಗಳನ್ನು ಗಮನಿಸಬಹುದಾಗಿದೆ:–

ತರುಣ ಶಶಿಧರ ಶರ್ವ ಶಂಕರ
ಸ್ಥಿರ ಯಶೋವಿಸ್ತಾರ ತೋಂಟದ ಸಿದ್ಧಲಿಂಗ ಜಯ ಜಯತು ||೧–೯||

ಧರಣಿ ಜಲವನಲಂ ಪವನವಂ
ಬರ ನಿಶಾಪತಿ ಸೂರ್ಯನಾತ್ಮಂ
ಪರಮ ಗಾತ್ರವೆಯಾದ ಶಂಕರನಂಗವೆನಿಸಿರ್ಪಾ ।
ಶರಣ ತೋಂಟದ ಸಿದ್ಧಲಿಂಗನ
ಚರಣವಾರಿಜ ವೆನ್ನ ಹೃದಯಾಂ
ಬುರುಹದೊಳಗಿರೆ ಕಾವ್ಯಮಂ ನಾಂ ಪೇಳ್ವೆ ಮುದದಿಂದಾ || 4

(೧–೧೦)

---

3. ನೋ: ಬಸವಪುರಾಣ-ಕರ್ನಾಟಕಾಂಧ್ರಕವಿ ಎಂದು ವಿಖ್ಯಾತನಾದ ಭೀಮಕವಿ ವಿರಚಿತ (ಕ್ರಿ.ಶ. 1369) ಸಂಧಿ ೧೫ ಕೋಳೂರ ಕೊಡಗೂಸಿನ ಕಥೆ :
ಪದ್ಯ ೨೦ ಶೂಲಿ" ಚಿತ್ತೈಸಯ್ಯ ಹಿಂದಕೆ ।
ಕಾಲನಿಕ್ಕುವಳಲ್ಲ ಇಲ್ಲಿಯೆ ಸತ್ತು ಸರಿಯುಹೆನು ।

4. ನೋ: ಸಂ[illegible] ತೋಂಟದ ಯತಿ[illegible]
ಶಂ ದಿವಿಜ[illegible] ಭಕ್ತನ ಹೃದಯ ಮಂದಿರದೊಳಗೆ

ಅಷ್ಟಪ್ರಕೃತಿರೂಪದಲ್ಲಿ 'ಶಂಕರನಂಗ'ವೇ–ಪೃಥಿವ್ಯಾದಿ ಆತ್ಮಾಂತ ಅಷ್ಟತನುಗಳೇ ಆಗಿ ನೆಲಸಿದ ತೋಂಟದ ಗುರು ಸಿದ್ಧಲಿಂಗೇಶ್ವರರು ತೋಂಟದ ಲಿಂಗವೇ ಆಗಿಹೋಗಿದ್ದರೆಂಬುದನ್ನು ಮೇಲಣ ಉದ್ಧೃತ ಗ್ರಂಥ ಭಾಗಗಳಲ್ಲಿ ಶಾಂತೇಶನು ಸೂಚಿಸಿದ್ದಾನೆ. ಆ ಕಾರಣ ಅವರ ನೆನಪನ್ನು ಮಾಡಿಕೊಂಡೇ ಕಾವ್ಯ ರಚನೆಗೆ ತೊಡಗಿದುದಾಗಿ ಹೇಳಿದ್ದಾನೆ–

ಸುರಚಿರದ ಪರಮೇಶನಂಗಂ
ಸರಸ ಕೀರ್ತಿ ವಧೂಭುಜಂಗಂ
ಧರೆಯೊಳಿರ್ಪಂ ಚಾರು ತೋಂಟದ ಸಿದ್ಧ ಗುರುಲಿಂಗಂ । (೧–೧೧)

ತೋಂಟದ ಸಿದ್ಧ 'ಗುರುಲಿಂಗ' ಮೂರ್ತಿಯಾಗಿ ಧರೆಯಲ್ಲಿದ್ದಾರೆ. 'ಸರಸ ಕೀರ್ತಿವಧೂಭುಜಂಗ'ರಾಗಿದ್ದಾರೆ ಎಂಬಲ್ಲಿ 'ಭುಜಂಗ' ಪದಪ್ರಯೋಗವು ತೋಂಟದ ಸಿದ್ಧರು ಈ ಲೋಕದಿಂದ ಅಗಲಿ ಹೋಗಿದ್ದಾರೆ ಎನ್ನದೆ, 'ಕೀರ್ತಿವಧೂಭುಜಂಗ'ರಾಗಿ ಧರೆಯಲ್ಲಿ ಜನರ ನಾಲಗೆಯ ಮೇಲೆ ಹೃನ್ಮನದುಂಬಿ ನೆಲಸಿದ್ದಾರೆಂಬ ಆಲಂಕಾರಿಕ ಭಾಷಾ ಪ್ರಯೋಗದಿಂದ ವಿಶಿಷ್ಟಾರ್ಥವನ್ನುಳದ್ದು. ಕೇವಲ 'ಕೀರ್ತಿಶೇಷ'ರಾಗಿದ್ದಾರೆ ಎನ್ನುವುದಕ್ಕೂ 'ಕೀರ್ತಿವಧೂಭುಜಂಗ'ರಾಗಿದ್ದಾರೆಂಬುದಕ್ಕೂ ಇರುವ ಸೂಕ್ಷ್ಮವಾದ ಅರ್ಥಭೇದವು ಗಮ್ಯವಷ್ಟೇ ಅಲ್ಲ. ಗಹನವೂ ಆದುದು. ಗುರುವಿನಿಂದ ಅವಿಭಾಜ್ಯವಾದ ಭಕ್ತಿಭಾವವು ಜನಮನದಲ್ಲಿ ಬೇರೂರುವಂತೆ ಮಾಡುವ ರತಿರಂಜನೆಯ ಅಲಂಕಾರಿಕ ಪದಪ್ರಯೋಗವಿದು. ತೋಂಟದ ಸಿದ್ಧ ಗುರು ಇಲ್ಲವೆ ಗುರುಯತಿ 'ಲಿಂಗ' ರೂಪದಿಂದ ಧರೆಯಲ್ಲಿ ನೆಲಸಿದ್ದಾರೆ ಎಂಬುದೇ ಈ ವರ್ಣನೆಯ ಆಶಯ. ಬಸವ ಪುರಾಣದ 'ಸತ್ತು ಸರಿ (ಸಚಿ'm ಶಿಲೆ) ಯಹ ಎಂಬ ಪೂರ್ವ ಕವಿ ಪ್ರಯೋಗವು 'ಲಿಂಗ'ದೊಳಗಾಗುವುದೇ ಎಂದರೆ ಜ್ಯೋತಿಃ ಸ್ವರೂಪವಾಗುವುದೇ ಜೀವನದ ಪರಮೋದ್ದೇಶವೆಂಬುದನ್ನು ಸೂಚಿಸುವುದಾಗಿದೆ.

"....ಪೌರಾಣ ಸಮ್ಮತ/ಸನ್ನುತ (ಪಾಠಾಂ)
ಗುರುವೇ ತೋಂಟದ ಸಿದ್ಧಲಿಂಗನೆ ಪಂಡಿತನೆ ಪರನೇ ।" (೧–೩)

ಎಂಬ ಶಾಂತೇಶನ ಗುಣಿತದ ಪದ್ಯ ಭಾಗವಾದ ಈ ಸಂಬೋಧನೆಯನ್ನು ಗಮನಿಸಿದಾಗ ಆತನ ಕಾಲಕ್ಕಾಗಲೇ ಬಹು ಹಿಂದೆಯೇ ತೋಂಟದ ಸಿದ್ಧೇಶ್ವರರು ಪುರಾಣೋಕ್ತ ಪುರುಷರಾಗಿ ಸ್ತುತ್ಯರಾಗಿದ್ದರೆಂಬುದು ಸ್ವಯಂವೇದ್ಯವಾದದ್ದೆ. ಬಹುಮಟ್ಟಿಗೆ ವಿರಕ್ತ ತೋಂಟದಾರ್ಯ ರಚಿತ ಸಿದ್ಧೇಶ್ವರ ಪುರಾಣವನ್ನು ಮನಸ್ಸಿನಲ್ಲಿಟ್ಟುಕೊಂಡೇ ಶಾಂತೇಶನು ತನ್ನ ಕೃತಿಯಲ್ಲಿ ಹೀಗೆ ಪೌರಾಣ ಸಮ್ಮತ ಇಲ್ಲವೆ ಸನ್ನುತ ಗುರುವೆ ಎಂದು ಸ್ತುತಿ

---

ಮೂರ್ತಿಗೊಂಡು ಸಂತಸದೊಳಿಸೆದಂ ಜಗವ ರಕ್ಷಿಸುತ್ತೆ ॥
ವಿ.ತೋಂ.ಸಿ.ಪು. ಸಂ. ೨೫ ಪ ೨೦
".... ತೋಂಟದ ಸಿದ್ಧಲಿಂಗನ .... ಏಕಚಿತ್ತದೊಳಾಂ
ಪೊಗಳ್ದು ಕೃತ ಕೃತ್ಯನಹೆನು ।।" (ಅದೇ ೧–೨೬)

ಸಿದ್ದಾನೆಂದು ವಿದಿತವಾಗುತ್ತದೆ. ನೂರು ವರ್ಷಕ್ಕೂ ಮೀರಿದ ಮಹಿಮಾಮಯ ಚಾರಿತ್ರ
ದಿಂದ ಪವಾಡವನ್ನು ಮೆರೆದವರೆಂದು ಶ್ರೀ ತೋಂಟದ ಸಿದ್ಧಲಿಂಗೇಶ್ವರರ ಬಗೆಗೆ ದೃಢತೆ
ನಂಬುಗೆಯನ್ನು ಈಗ್ಗೆ ನೂರು ವರ್ಷಗಳ ಹಿಂದಿನವರು ವ್ಯಕ್ತಪಡಿಸಿರುವುದನ್ನು [5] ದಾಖ
ಲಾತಿಗಳಿಂದ ತಿಳಿಯಬಹುದು.

ಕ್ರಿ. ಶ. ಸು 1395 ರಿಂದ ಸು 1500ರ ವರೆಗಿನ ಸುದೀರ್ಘವಾದ ಆಯುಃ
ಪ್ರಮಾಣ ಹೊಂದಿದ ತೋಂಟದ ಸಿದ್ಧರ ಆ ಅವಧಿಯಲ್ಲಿ ಆಗಿ ಹೋದ ಘಟನಾವಳಿಗಳ
ಹಲವಾರು ಪವಾಡಗಳ ಮಹತ್ವವನ್ನು ವರ್ಣಿಸಿ ಜನಮನದಲ್ಲಿ ಭಕ್ತಿಭಾವವನ್ನು ಬೇರೂ
ರಿಸುವಂತೆ ಮಾಡುವುದೇ ಗುರಿಯಾಗುಳ್ಳ ಪುರಾಣ. ವಿರಕ್ತ ತೋಂಟದಾರ್ಯರಚಿತ
**ಸಿದ್ದೇಶ್ವರಪುರಾಣ** ಷಟ್ಸ್ಥಲದ ಅಂಗ ಲಿಂಗಸ್ಥಲ ಸ್ವರೂಪ ಹಾಗೂ ಏಕೋತ್ತರ ಶತ
ಸ್ಥಲದ ಶಿವನ ನಿಲವನ್ನು ಸ್ವಾನುಭಾವ ಸಂಪನ್ನ ವಾಣಿಯಿಂದ ತಮ್ಮ ಶಿಷ್ಯಾಗ್ರಣಿಯಾದ
ಬೋಳಬಸವರಾಜರಿಗೆ ಬೋಧಿಸಿ ಷಟ್ಸ್ಥಲಾಚಾರ್ಯ ಪಟ್ಟವನ್ನು ಕಟ್ಟಿದುದನ್ನು
ವಿರಕ್ತ ತೋಂಟದಾರ್ಯರು ತಮ್ಮ ಪುರಾಣ ಕೃತಿಯಲ್ಲಿ ಚಿತ್ರಿಸಿದರೆ, ಶಾಂತೇಶನು ತನ್ನ
ತೋಂಟದ ಸಿದ್ಧೇಶ್ವರ ಪುರಾಣದಲ್ಲಿ ಆ ಶ್ರೀ ಗುರು ಚಂದ್ರಶೇಖರಮೂರ್ತಿಯೆಂಬ
ಮತ್ತೊಬ್ಬ ಶಿಷ್ಯನಿಗೆ ವಿಸ್ತರಿಸಿ ಬೋಧಿಸಿದ ಭುವನಕೋಶ, ಚಿದಂಬರ ರಹಸ್ಯ, ಪರಶಿವನ
ಇಪ್ಪತ್ತೈದು ಲೀಲೆ, ಅಷ್ಟಾವರಣ, ಷಟ್ಸ್ಥಲ ಹಾಗೂ ಪುರಾತನ ವಚನಾಗಮ ಪ್ರತಿ
ಪಾದಿತ ತತ್ತ್ವಬೋಧೆಯನ್ನು ಸಾಧಾರವಾಗಿ ನಿರೂಪಿಸಿರುವನು. ಒಬ್ಬನ ಕೃತಿ
ವಾರ್ಧಕ ಷಟ್ಪದಿಯಲ್ಲಿದ್ದರೆ, ಮತ್ತೊಬ್ಬನದು ಭಾಮಿನೀ ಷಟ್ಪದಿಯಲ್ಲಿದೆ. ವಿರಕ್ತ
ತೋಂಟದಾರ್ಯರು ರಚಿಸಿದ ಸಿದ್ಧೇಶ್ವರ ಪುರಾಣದ ಕಥಾ ವಸ್ತುವಿನ ವರ್ಣನೆಗೆ
ಪೂರಕವಾದ, ಆದರೆ ಅವರ ಯಾವ ಪವಾಡದ ಪ್ರಸಂಗಗಳನ್ನೂ ತರದೆ [6] ಕೇವಲ
ತೋಂಟದ ಸಿದ್ಧಲಿಂಗೇಶ್ವರರು ಚಂದ್ರಶೇಖರ ದೇವರಿಗೆ ಬೋಧಿಸಿದ ಭುವನಸೃಷ್ಟಿಯ
ಪೌರಾಣಿಕ ದೃಷ್ಟಿ, ಧಾರ್ಮಿಕ, ಸಾಮಾಜಿಕ ಹಾಗೂ ದಾರ್ಶನಿಕ ತತ್ತ್ವ ಪ್ರತಿಪಾದನೆ
ಯನ್ನು ಮಾತ್ರ ತನ್ನ ಕೃತಿಯಲ್ಲಿ ತಂದಿದ್ದಾನೆಂಬುದನ್ನು ಗಮನಿಸಬಹುದು.

ಕವಿ ಮಲ್ಲಣಾರ್ಯರ ಭಾವಚಿಂತಾರತ್ನ ರಚನೆಯ (ಕ್ರಿ.ಶ. 1514) ಕಾಲದಿಂದೀ
ಚೆಗೆ ಶಾಂತೇಶ ವಿರಚಿತ ತೋಂಟದ ಸಿದ್ಧೇಶ್ವರ ಪುರಾಣ ರಚನೆಗೆ (ಕ್ರಿ. ಶ. 1561)

---

5. ನೋ: ವಿರಕ್ತ ತೋಂಟದಾರ್ಯ ರಚಿತ ಶ್ರೀ ಸಿದ್ಧೇಶ್ವರ ಪುರಾಣಂ
(ಸಂ) ಪಿ. ಆರ್. ಕರಿಬಸವಶಾಸ್ತ್ರಿ, ಮೈಸೂರು. ಪ್ರಕಟ ೧-೨-೧೮೯೫ ಪೀಠಿಕೆ
ಪುಟ. ೧

6. ಶ್ರೀಮನ್ ನಿ.ಜ. ತೋಂಟದಾರ್ಯ ಗ್ರಂಥಮಾಲೆಯ (1951) ವಿ. ತೋಂ.
ವಿರಚಿತ ಶ್ರೀ ಸಿದ್ಧೇಶ್ವರ ಮಹಾಪುರಾಣದ ಪ್ರಸ್ತಾವನೆ ಪುಟ ೮ರಲ್ಲಿರುವ "ವಿರಕ್ತ
ತೋಂಟದಾರ್ಯನಂತೆ ಶಾಂತೇಶ ಕವಿಯು ಪವಾಡಗಳನ್ನು ಅನೇಕ ರೀತಿಯಾಗಿ
ವಿವರಿಸಿರುವನು" ಎಂಬ ಅಭಿಪ್ರಾಯವನ್ನು ಅದರ ಪ್ರಕಾಶಕರು ಮುಂದಿನ
ಮುದ್ರಣದಲ್ಲಿ ಕೈ ಬಿಡಬೇಕಾಗಿದೆ.

ಮುನ್ನ–ಈ ಎರಡು ಕೃತಿ ರಚನೆಗಳ ನಡುಗಾಲದಲ್ಲಿ ಸು. ಕ್ರಿ.ಶ. 1530ರ ಹಿಂದು ಮುಂದಿನ ವರ್ಷಗಳಲ್ಲಿ ತೋಂಟದಾರ್ಯರಿಂದ ಸಿದ್ಧೇಶ್ವರ ಪುರಾಣ ರಚಿತವಾಗಿರಬಹುದೆಂದು ಊಹಿಸಲು ಎಡೆಯುಂಟು. ಭಾವಚಿಂತಾರತ್ನಗ್ರಂಥದ [7] ಮೊದಲನೆಯ ಷಟ್ಪದಿಯ ಕಡೆ ಕಡೆಯ ಪಂಕ್ತಿಗಳೊಡನೆ ವಿರಕ್ತ ತೋಂಟದಾರ್ಯ ರಚಿತ ಪುರಾಣ ಗ್ರಂಥದ ಏಳನೆಯ ಸಂಧಿಯ ಸೂಚನಾ ಪದ್ಯದ ಮೊದಲೆರಡು ಪಾದಗಳನ್ನು ಹೋಲಿಸಿದಾಗ ಕಂಡುಬರುವ ಪದಪ್ರಯೋಗದ ಸಾಮ್ಯ ಈ ಅಂಶವನ್ನು ದೃಢಪಡಿಸುತ್ತದೆ—

ಭೋಗಮಲ್ಲೇಶ ಬಿಡದೀಗಲೆನ್ನಯ ಕೃತಿಯ
ಭೂ ಗಗನದಿಗ್ಭರಿತಮಾಗಿ ಪಸರಿಸುವಿನಂ ಸಾಗಿಸುವುದಳ್ಕರಿಂದೆ ॥

ಎಂಬ ಈ ಪ್ರಾರ್ಥನಾ ಭಾಗದಲ್ಲಿ ಕವಿ ಮಲ್ಲಣಾರ್ಯನು ಬಳಸಿರುವ 'ಭೂಗಗನ ದಿಗ್ಭರಿತ' ವೆಂಬೀ ಪದಪುಂಜವು ವಿರಕ್ತ ತೋಂಟದಾರ್ಯರ ಕೃತಿಯಲ್ಲಿ

"ಭೂವಿಯತ್ತಳ ದಿಗ್ಭರಿತ ಯಶೋನ್ವಿತನಖಿಲ
ದೇವತಾವಲ್ಲಭನೆನಿಪ ಸಿದ್ಧದೇಶಿಕಂ"

ಎಂಬ ವರ್ಣನಾ ಸ್ತುತಿಯಲ್ಲಿ 'ಭೂವಿಯತ್ತಳ ದಿಗ್ಭರಿತ'ವೆಂದಾಗಿರುವುದು. ಉಭಯ ಪದಪುಂಜಗಳ ಸಾಮ್ಯ ಇಲ್ಲಿ ಕಾಣಬಂದ ಅಂಶವೇ ಆಗಿದೆ.

ಎಡೆಯೂರ ತೋಂಟದ ಸಿದ್ಧೇಶ್ವರ ಪ್ರಶಿಷ್ಯರಾದ ವಿರಕ್ತ ತೋಂಟದಾರ್ಯರೂ ತಮ್ಮನ್ನು "ತೋಂಟದ ಸಿದ್ಧಲಿಂಗ ಶಿವಯೋಗೀಂದ್ರ" ನೆಂದೂ 'ತೋಂಟದ ಸಿದ್ದಲಿಂಗ ದೇಶಿಕ'ನೆಂದೂ ಕರೆದುಕೊಂಡಿರುವುದು ತಿಳಿದುಬಂದ [8] ಸಂಗತಿಯೇ ಆಗಿದೆ. 'ತೋಂಟದ ಸಿದ್ಧಲಿಂಗ'. 'ತೋಂಟದ ಸಿದ್ಧಲಿಂಗ ದೇಶಿಕ'ನೆಂಬ ಅಪರನಾಮಧೇಯವುಳ್ಳ ವಿರಕ್ತ ತೋಂಟದಾರ್ಯರನ್ನೇ ಪೂರ್ವಜರಾದ ಎಡೆಯೂರ ತೋಂಟದ ಸಿದ್ಧಲಿಂಗೇಶ್ವರರೆಂದು ಕೆಲವರು ತಪ್ಪಾಗಿ ತಿಳಿಯಲು ಅವಕಾಶವಾಯಿತು. ಮೂಲ ತೋಂಟದ ಸಿದ್ಧಲಿಂಗೇಶ್ವರರಿಗೂ ವಿರಕ್ತ ತೋಂಟದಾರ್ಯರಿಗೂ ಮೂರು ತಲೆಮಾರುಗಳ ಅಂತರವಿದ್ದುದನ್ನು ಮರೆಯಲಾಗದು. ಎಡೆಯೂರ ತೋಂಟದ ಸಿದ್ಧಲಿಂಗ ಯತಿಗಳ ಶಿಷ್ಯ ಬೋಳಬಸವೇಶ. ಆತನಿಗೆ ಶಿವಪೂಜೆಯಾರ್ಯನೆಂಬ ಮತ್ತೊಂದು ಹೆಸರೂ ಇದ್ದಿತು ಆತನ ಶಿಷ್ಯನೇ ಶೂನ್ಯ ಸಂಪಾದನಕಾರನಾದ ಗೂಳೂರು ಸಿದ್ಧವೀರಣಾರ್ಯ. ಆತನ ಶಿಷ್ಯನೆ ಬಿಜ್ಜವರ ಪುರಾಧಿಪ ತೋಂಟದ ಸಿದ್ಧಲಿಂಗ ಭೂಪಾಲಕನಿಂದ ಪರಿಪೂಜಿತನಾದ 'ತೋಂಟದ ಸಿದ್ಧಲಿಂಗದೇಶಿಕ' ಅಪರನಾಮಧೇಯನಾದ ವಿರಕ್ತ ತೋಂಟದಾರ್ಯ ಎಂದ ಬಳಿಕ ಹದಿನಾರನೆಯ ಶತಮಾನದ ಪೂರ್ವಾರ್ಧದಲ್ಲಿದ್ದ 'ತೋಂಟದ ಸಿದ್ಧಲಿಂಗದೇಶಿಕರು'

---

7. ನೋ: ಭಾವಚಿಂತಾರತ್ನ 1954, 1971ರ ಮುದ್ರಣ. ಸಂ: ಸಿ. ಮಹಾದೇವಪ್ಪ ಎಂ.ಎ.

8. ವಿ.ತೋಂ. ವಿರಚಿತ ಶ್ರೀ ಸಿದ್ಧೇಶ್ವರಪುರಾಣದ ಪ್ರತಿ ಸಂಧ್ಯಂತದ ಪದ್ಯ ಹಾಗೂ ಮನೋವಿಜಯದ ಟೀಕೆಯ ಪ್ರತಿಪ್ರಕರಣಾಂತ್ಯದ ಗದ್ಯ ನೋಡಿ.

ಎಡೆಯೂರ ತೋಂಟದ ಸಿದ್ಧಲಿಂಗ ಯತೀಶ್ವರರಲ್ಲ ಎಂಬುದನ್ನು ಅವರ ಶಿಷ್ಯ ಪರಂಪರೆಯ ಅನುಕ್ರಮದ ಕಾಲದ ಅಂತರವೇ ನಿರ್ದೇಶಿಸುತ್ತದೆ ಎಂಬುದು ಸುಸ್ಪಷ್ಟ.

ಎಡೆಯೂರ ತೋಂಟದ ಸಿದ್ಧಲಿಂಗೇಶ್ವರರ ಕಾಲ ವಿಚಾರದ ಬಗೆಗೆ ಇರುವ ಗ್ರಂಥಾಂತರದ ಲೇಖಾಧಾರಗಳನ್ನು ಇನ್ನು ನೋಡೋಣ. ಗುಬ್ಬಿಯ ಗುರು ಮಲ್ಲಿಕಾರ್ಜುನ ಇಲ್ಲವೆ ಮಲ್ಲಣಾರ್ಯವಿರಚಿತ ವಾತುಲಾಗಮ ಟೀಕಾಗ್ರಂಥಪ್ರತಿಯ ಓಲೆಯೊಂದರಲ್ಲಿ ಸಂಪ್ರತಿಕಾರನ ಪ್ರಶಸ್ತಿವಾಕ್ಯವಿಂತಿದೆ—

"ಸ್ವಸ್ತಿಶ್ರೀ ಜಯಾಭ್ಯುದಯ ಶಕ ವರುಷನೆಯ ಪರಾಭವ ಸಂವತ್ಸರದ ಫಾಲ್ಗುಣ ಬಹುಳ ೧೩ಯ ಗುರುವಾರದಲ್ಲೂ ವ್ಯಾಖ್ಯಾನ ಪಟಲ ಮಂಗಳ ಮಹಾಶ್ರೀ ಶ್ರೀ ಶ್ರೀ ಶ್ರೀ" ವ್ಯಾಖ್ಯಾನ ಬರೆದಾತ ಶ್ರೀ ಗುರು ತೋಂಟದಾರ್ಯರ ವರದ ಹಸ್ತದ ಪುತ್ರ ಮಹಂತೈಯ್ಯ ತಪ್ಪಂ ಬರೆವನೆಂದು ಬಯ್ಯಲಾಗದು. ಬಲ್ಲ ಕವಿಗಳು ತಿದ್ದಿಕೊಂಡು ಹೋಹುದು. ಉಜ್ಜಣಿ ಮಠದ ಚರಮೂರ್ತಿ ಬಸವ ಲಿಂಗಸ್ವಾಮಿಯವರಿಗೆ ಬರೆದು ಕೊಟ್ಟ"ದ್ದೆಂದು ಒಕ್ಕಣಿಸಿದ್ದಾನೆ.

ವಾತುಲಾಗಮದ ಟೀಕಾಗ್ರಂಥದ ಪ್ರತಿಕಾರನ ಹೆಸರು ಮಹಂತಯ್ಯನೆಂದೂ, ಆತನು ಲಿಪೀಕರಿಸಿದ ಪ್ರತಿ ತುಮಕೂರು ಜಿಲ್ಲೆ ಕುಣಿಗಲು ತಾಲ್ಲೂಕು ಉಜ್ಜಣಿ ಮಠದ ಸ್ವಾಮಿಗಳಾಗಿದ್ದ ಚರಮೂರ್ತಿ ಬಸವಲಿಂಗಸ್ವಾಮಿಗಳಿಗಾಗಿ ಎಂಬುದು ಈ ಗ್ರಂಥಾಂತ್ಯದ ಉಲ್ಲೇಖದಿಂದ ತಿಳಿದು ಬರುತ್ತದೆ. ವ್ಯಾಖ್ಯಾನ ಪಟಲದ ಪ್ರತಿಲೇಖನದ ಕಾಲ 8.3.1487ನೆಯ ಗುರುವಾರವೆಂದಿರುವುದರಿಂದ ಆ ವೇಳೆಗೆ ಅದಕ್ಕೂ ಹಿಂದಕ್ಕೆ ತೋಂಟದ ಸಿದ್ಧಲಿಂಗೇಶ್ವರರ ಜೀವಿತಕಾಲ ಸೇರಿದುದೆಂಬುದು ಸ್ವತಃ ಪ್ರಮಾಣವಾಗಿದೆ.

ಈ ನಿರ್ಣಯವನ್ನು ಪುಷ್ಟೀಕರಿಸುವ ಮತ್ತೊಂದು ಲೇಖನಾಧಾರವೆಂದರೆ–ಕ್ರಿ.ಶ. 1444ನೆಯ ನವೆಂಬರ್ 20 ಶುಕ್ರವಾರದಂದು ಪೂರ್ವಪ್ರತಿ ನೋಡಿ ಕಾಗದದ ಮೇಲೆ ಬರೆದ ಆಂಧ್ರಪ್ರದೇಶದ ಸಂಗಾರೆಡ್ಡಿ ಜಿಲ್ಲೆಯ ಕೇತಕೀಸಂಗಮೇಶ್ವರ ದೇವರನ್ನು ಕುರಿತ ಕೇತಕೀಸಂಗಮೇಶ್ವರ ಪುರಾಣ ಕಾಂಡ 5, ಸಂಧಿ 25, ಪದ್ಯ 6 ಹಾಗೂ ಸಂಧಿ 12, ಪದ್ಯ 33-34ರಲ್ಲಿ ಕ್ರಮವಾಗಿ 'ಸಿದ್ಧಲಿಂಗ' ಮತ್ತು "ಹಿರಿಯ (ವ್ಯಾಸ) । ಮಲ್ಲಣಾರ್ಯರನ್ನು ಆ ಪುರಾಣಕರ್ತೃವಾದ ಗಂಗಾಧರನ । ತರಳನಾದ ಮಡಿವಾಳಯ್ಯನು ಸ್ಮರಿಸಿರುವುದನ್ನು ಕಾಣಬಹುದು.

ಅದಲ್ಲದೆ ಇಮ್ಮಡಿ ದೇವರಾಯನ (ಕ್ರಿ. ಶ. 1419–1446) ಮಹಾಪ್ರಧಾನಿಯೂ ದಂಡಾಧಿಪತಿಯೂ ಆದ ಲಕ್ಕಣ್ಣ ದಂಡೇಶನು ತನ್ನ ಶಿವತತ್ತ್ವಚಿಂತಾಮಣಿಯಲ್ಲಿ ನೂತನ ಪುರಾತನರನ್ನು ಸ್ಮರಿಸುವಾಗ (ಸಂಧಿ ೩೮ ಪದ್ಯ ೬೧) "ಗುಬ್ಬಿಯಾ ಮಲ್ಲಣ್ಣ" ನನ್ನು ಹೆಸರಿಸಿರುವುದರಿಂದ ಆತನ ಕೃತಿರಚನೆಯ (ಕ್ರಿ.ಶ. 1450) ಕಾಲಕ್ಕೆ ಮಲ್ಲಣ್ಣನು "ಪೂರಾಯಶ್ಚ ಪುರಾತನಃ" ಎಂಬುದಾಗಿ ನಡೆ-ನುಡಿ ಪೂರಾಯನೂ ನೂತನ ಗಣಂಗಳಲ್ಲಿ ಒಬ್ಬನೂ ಆಗಿಹೋಗಿದ್ದನೆಂಬುದು ವಿದಿತವೆ ಆಗಿದೆ. ಶಾಂತೇಶನೂ

ತನ್ನ ಮುತ್ತಾತನನ್ನು ತೋಂಟದ ಸಿದ್ಧೇಶ್ವರರ ಶಿಷ್ಯನೆಂದಿರುವುದರಿಂದ ಆ ಇಬ್ಬರೂ ಸಮಕಾಲೀನರಾಗಿದ್ದರೆಂಬುದರಲ್ಲಿ ಕಿಂಚಿತ್ತೂ ಸಂಶಯಕ್ಕೆಡೆಯಿಲ್ಲ.

ಹೀಗೆ ಉಪಲಬ್ಧವಿರುವ ಗ್ರಂಥಸ್ಥ ಪ್ರಮಾಣಗಳು ತೋಂಟದ ಸಿದ್ಧಲಿಂಗೇಶ್ವರರೂ ಗುಬ್ಬಿಯ ಮಲ್ಲಣ್ಣಗಳೂ 15ನೆಯ ಶತಮಾನದವರು ಎಂಬದನ್ನು ಸಾದೃಶ್ಯಗೊಳಿಸಿದ್ದರೂ ಈ ಎಲ್ಲ ಗ್ರಂಥಾಧಾರಗಳನ್ನು ಮನವಿಟ್ಟು ಗಮನಿಸಿದ್ದರೆ ಕೆಲವರು ಇತ್ತೀಚಿಗೆ ಶ್ರೀ ಸಿದ್ಧಲಿಂಗೇಶ್ವರರ ಕಾಲ ಹದಿನೈದನೆಯ ಶತಮಾನವಲ್ಲ, ಹದಿನಾರನೆಯ ಶತಮಾನವೆಂದು[9] ವಾದಿಸತೊಡಗುತ್ತಿರಲಿಲ್ಲ. ಆದರೆ ಪೂರ್ವಗ್ರಹಪೀಡಿತರಾದ ಕೆಲವರಲ್ಲಿ ಒಬ್ಬರಾದ ಎಲ್. ಬಸವರಾಜು "ಈತನು (ತೋಂಟದ ಸಿದ್ಧಲಿಂಗಯತಿ) ತುಮಕೂರು ಪ್ರಾಂತದ ಕಗ್ಗೆರೆ ತೋಂಟದಲ್ಲಿ ಸಿದ್ಧನಾಗಿ ಜನರ ಮನ್ನಣೆಯನ್ನು ಸೂರೆಗೊಂಡು ಪ್ರಖ್ಯಾತನಾದುದು ಕ್ರಿ.ಶ. ೧೫೬೦ರ ಸುತ್ತಿನಲ್ಲಿ. ಇನ್ನೂ ವಿದ್ವಾಂಸರೂ ಅವನು (ಕ್ರಿ.ಶ. ೧೪೭೦) ಹದಿನೈದನೆಯ ಶತಮಾನದಲ್ಲಿದ್ದವನೆಂಬ ವಾದ ಊರ್ಜಿತವಾಗುವುದಿಲ್ಲ." "ಅವನಿದ್ದ ಆ ಹದಿನಾರನೇ ಶತಮಾನ"–ಇತ್ಯಾದಿ ಹೇಳಿಕೆಗಳು ಸತ್ಯಕ್ಕೆ ದೂರವಾದುವುಗಳು. ನಿಜಾಂಶಗಳನ್ನು ಅರಿತು ಆಡಿದ ವಿಮರ್ಶಾತ್ಮಕವಾದ ಮಾತುಗಳಲ್ಲ ಎಂಬುದನ್ನು ವಿದ್ವಜ್ಜನರು ಸಾಧಾರವಾಗಿ ಬಲ್ಲರು. ಇಲ್ಲದ ವಿವಾದವನ್ನು ತಂದೊಡ್ಡಿದ ಅವರೇ ಚಾರಿತ್ರಿಕ ಸಂಗತಿಗಳನ್ನು ತಿರುವು ಮುರುವು ಮಾಡಿ ವಿರೂಪಗೊಳಿಸಿದ್ದಾರೆ. ಇದು ಅನುಚಿತ, ಹಾಗೂ ಅಪಚಾರವೆನಿಸಿದೆ. ವಿರಕ್ತ ತೋಂಟದಾರ್ಯರನ್ನು ಮೂಲ ಕಗ್ಗೆರೆಯ ಶಿವಯೋಗಿ ತೋಂಟದ ಸಿದ್ಧಲಿಂಗರೆಂದು ತಪ್ಪಾಗಿ ಗ್ರಹಿಸಿದ ಕಾರಣದಿಂದಲೋ ಏನೋ ಅವರಿಂದ ಆದ ಈ ಪ್ರಮಾದವನ್ನು ಪರಪ್ರತ್ಯಯನೇಯ ಬುದ್ಧಿಯಿಂದ ಅಂಧಕೂಪನ್ಯಾಯದಂತೆ ಅನುಸರಿಸಿ ಮತ್ತೆ ಕೆಲವರು ರಾತ್ರಿ ಕಂಡ ಬಾವಿಗೆ ಹಗಲ ಬಿದ್ದಂತಾಗಿದೆ. ಆ ಕಾರಣ ಅವರ ಇಂತಹ ಹೇಳಿಕೆಗಳು ಗ್ರಂಥಸ್ಥ ಪ್ರಮಾಣಕ್ಕೆ ವಿರುದ್ಧವಾಗಿವೆ ಎಂಬುದನ್ನು ಪ್ರಾಜ್ಞರಾದ ಓದುಗರೂ, ವಿದ್ವಾಂಸರೂ ಎಚ್ಚರದಿಂದ ಕೂಲಂಕಷವಾಗಿ ವಿಮರ್ಶಿಸಿ ನಿರ್ಣಯಕ್ಕೆ ಬಂದಿದ್ದಾರೆ ಎಂಬುದನ್ನು ಈ ಕೆಲವು ಮಹನೀಯರು ಮರೆಯದಿರಲಿ ಎಂಬುದೇ ಆಶಯ.

ಪ್ರಸ್ತುತ ಶಾಂತೇಶನ ತೋಂಟದ ಸಿದ್ಧೇಶ್ವರ ಪುರಾಣದ ರಚನೆಗೆ ನೆರವಾದ ಗುರೂತ್ತಮನೆಂದರೆ ಪಚ್ಚೆಯ ಕಂಥೆಯಾರ್ಯನ ಶಿಷ್ಯನಾದ ಚಂದ್ರಶೇಖರಮೂರ್ತಿ.

---

9. ನೋ: 1 "ಸಿದ್ಧಲಿಂಗಶಿವಯೋಗಿ" (೧೯೭೪–ಪು ೧೨೬ ಎಲ್. ಬಸವರಾಜು) ಐದನೆಯ ಶತಮಾನೋತ್ಸವದ ಅಂಗವಾಗಿ ೨೫-೧.೧೯೭೧ರಂದು ಏರ್ಪಡಿಸಿದ್ದ ವಿಚಾರಗೋಷ್ಠಿಯ ಪ್ರಬಂಧಗಳ ಪ್ರಕಟನೆ-ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ.
2. ಪ್ರಸ್ತುತ ಲೇಖಕನ ಸಿದ್ಧಲಿಂಗ ಶಿವಯೋಗಿಯನ್ನು ಕುರಿತ ಲೇಖ: ಪುಪು ೮೭–೧೨೫

ಆತನು ತೋಂಟದ ಸಿದ್ಧಲಿಂಗೇಶ್ವರರಿಂದ 'ತರುಣ'ನಾಗಿ ಕೇಳಿದ ಭುವನಕೋಶ, ವೀರ ಶೈವ ಸಿದ್ಧಾಂತಾದಿ ವಿಷಯಕ ಬೋಧೆಯನ್ನು ತನ್ನ ಪರಿಪಕ್ವವಾದ ಮುಕ್ತಾವಸ್ಥೆಯಲ್ಲಿ ಶಾಂತೇಶನಿಗೆ ಉಪದೇಶಿಸಿ ಪುರಾಣ ರಚನೆಯನ್ನು ಸಾಂಗೋಪಾಂಗವಾಗಿ ಸಂಪೂರ್ಣ ಗೊಳಿಸಲು ಕಾರಣನಾದನು. ಈ ಬಗೆಗೆ ಕವಿ ಬಳಸಿರುವ ಗ್ರಂಥಸ್ಥ ಮಾತುಗಳೇ ಸಾಕ್ಷಿ.

ಶಾಂತೇಶನ ಕೃತಿಯಲ್ಲಿ ಚಂದ್ರಶೇಖರ ಗುರುವಿನ ಬಗೆಗೆ ಹೆಚ್ಚಿನ ಸಂಗತಿಗಳೇನೂ ದೊರಕವು. ಆದರೆ ಒಬ್ಬ ಚಂದ್ರಶೇಖರದೇವರ ಗದ್ದುಗೆ ಚನ್ನರಾಯನ ಪಟ್ಟಣ ದಲ್ಲಿದ್ದು ಅಲ್ಲಿ ಸು.ಕ್ರಿ.ಶ. 1604ರ ವೇಳೆಗೆ "ಚಂದ್ರಶೇಖರ ಸ್ವಾಮಿ ದೇವಸ್ಥಾನ"ವನ್ನು ಕಟ್ಟಿದರೋ ಏನೋ ಎಂಬುದನ್ನು ಸಂಶೋಧಿಸಿ ಖಚಿತಪಡಿಸಿಕೊಳ್ಳಬೇಕಾದ ಅಂಶ. ಚಂದ್ರಶೇಖರ ಗುರುವಿನ ಪ್ರಭಾವ ಗುಬ್ಬಿಯ ಸುತ್ತಮುತ್ತಲೂ ವ್ಯಾಪಿಸಿದ್ದಿತೆನ್ನ ಬಹುದು. ಅದೇ ತಾಲೂಕಿನಲ್ಲಿ ಚಂದ್ರಶೇಖರಪುರವೆಂಬ ನಾಲ್ಕು ಪುರಗಳು ಬಹುಶಃ ಆ ಹೆಸರಿನ ಸ್ವಾಮಿಯ ಮೇಲಣ ಭಕ್ತಿಯಿಂದ ಹೆಸರುಗೊಂಡಿವೆಯೆಂದು ತೋರುತ್ತದೆ. ತೋಂಟದ ಸಿದ್ಧಲಿಂಗೇಶ್ವರರ ಷಟ್ಸ್ಥಲಮಾರ್ಗವನ್ನು ಉಪದೇಶಿಸಿ ಶಾಂತೇಶನಿಂದ ವಿರಕ್ತ ತೋಂಟದಾರ್ಯರ ಪುರಾಣ ಕೃತಿರಚನೆಗಿಂತ ಬೇರೆಯೇ ಆದರೂ ಅದಕ್ಕೆ ಪೂರಕವಾಗು ವಂತೆ ಸಿದ್ಧಾಂತ ಪ್ರಧಾನವಾದ ಪುರಾಣವೊಂದನ್ನು ರಚಿತವಾಗುವಂತೆ ಮಾಡಿದ ಕೀರ್ತಿ ಚಂದ್ರಶೇಖರ ಗುರುಮೂರ್ತಿಗೆ ಸಲ್ಲುತ್ತದೆ.

——

# ಕೆಳದಿ ಅರಸರ ಅಪ್ರಕಟಿತ ನಿರೂಪಗಳು

—ಡಾ|| ಕೆಳದಿ ವೆಂಕಟೇಶ್ ಜೋಯಿಸ್

ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ಅದರ ಘನತೆ-ಗೌರವಗಳನ್ನೇ ತಮ್ಮದಾಗಿಸಿಕೊಂಡು ಮೆರೆದ ಸಾಮ್ರಾಜ್ಯ ಕೆಳದಿ ಸಂಸ್ಥಾನದ್ದು. ಸುಮಾರು 265 ವರ್ಷಗಳ ಕಾಲ ಆಡಳಿತ ನಡೆಸಿ ಕಣ್ಮರೆಯಾದ ಈ ಸಾಮ್ರಾಜ್ಯ ಮಲೆನಾಡಿನ ಬಹು ಭಾಗದ ಜೊತೆಗೆ ಈಗಿನ ಕೇರಳದ ಬೇಕಲಕೋಟೆಯವರೆಗೆ ಅದಕ್ಕೂ ಮುಂದೆ ಬಲಿಯಾ ಪಟ್ಟಣದವರೆಗೆ ಹರಡಿತ್ತು. ಕೆಳದಿ ಅರಸರು ಸಾಹಿತ್ಯ, ಕಲೆ, ಸಂಸ್ಕೃತಿ, ಧಾರ್ಮಿಕ ಚಟುವಟಿಕೆಗಳಿಗೆ, ವಾಣಿಜ್ಯ ಬೆಳವಣಿಗೆಗೆ ನೀಡಿದ ಕೊಡುಗೆ ಗಮನೀಯವಾದುದು. ರಾಜಕೀಯಕ್ಕೆ ಸರಿಸಮನಾಗಿ ಧಾರ್ಮಿಕ ಬೆಳವಣಿಗೆಗೆ ಪ್ರಾಧಾನ್ಯವನ್ನು ಅವರು ನೀಡಿದ್ದರು. ತಮ್ಮ ಅಧಿಕಾರದ ಅವಧಿಯಲ್ಲಿ ಸುಮಾರು ನಾಲ್ಕು ನೂರಕ್ಕೂ ಹೆಚ್ಚು ಶಾಸನಗಳನ್ನಿತ್ತು ಧಾರ್ಮಿಕ ಕ್ಷೇತ್ರದಲ್ಲಿ ತಮ್ಮ ಆಸ್ತೆಯನ್ನು ತೋರಿದ್ದಾರೆ. ಶೃಂಗೇರಿ, ಕೂಡ್ಲಿ ಮೊದಲಾದ ಮಠಗಳಿಗೆ ನಿರೂಪಗಳನ್ನು ಕಳುಹಿಸಿ ತಮ್ಮ ಗೌರವವನ್ನು ಮೆರೆದಿದ್ದಾರೆ.

ಪ್ರಸ್ತುತ ದೊರೆತಿರುವ ಅಪ್ರಕಟಿತ ಈ ನಿರೂಪಗಳು ಕಾಗದ ಪ್ರತಿಯಲ್ಲಿ ಇರುವಂತಹವು. 26 ಪುಟಗಳ ಈ ಪುಸ್ತಕವು 12 × 22.5 ಸೆಂ. ಮೀ. ಇದೆ. ಹೊಸನಗರ ತಾಲೂಕಿನ ಗ್ರಾಮವೊಂದರಲ್ಲಿ, ಒಬ್ಬರ ಮನೆಯಲ್ಲಿ ದೊರೆತ ಈ ಹಸ್ತಪ್ರತಿಯು ಮೂರು ನಿರೂಪವನ್ನು, ಅಗ್ರಹಾರಕ್ಕೆ ಬಿಟ್ಟ ದಾನದ ವಿವರವನ್ನು ಒಳಗೊಂಡಿದೆ. ಮೊದಲ ನಿರೂಪವು ಅರುವತ್ತು ಅಗ್ರಹಾರದಲ್ಲಿ ಹೊಸದಾಗಿ ಕಟ್ಟಿಸಿದ ಅಗ್ರಹಾರಕ್ಕೆ ಬಿಟ್ಟ ಸ್ವಾಸ್ತೆಯ ವಿವರವನ್ನು, ಭದ್ರರಾಜಪುರ ಅಗ್ರಹಾರಕ್ಕೆ ಬಿಟ್ಟ ಸುಸ್ಥೆಯ ವಿವರವನ್ನು ಎರಡನೆಯ ನಿರೂಪವೂ. ಮೂರನೆಯ ನಿರೂಪವು ಬಾಳಗಾರ ಮಠದ ಧರ್ಮವನ್ನೂ ತಿಳಿಸುತ್ತದೆ. ಮೊದಲ ನಿರೂಪವು ಭದ್ರಯ್ಯನಾಯಕನಿಂದಲೂ, ಎರಡನೆಯದು ರಾಣಿ ಚನ್ನಮ್ಮಾಜಿಯವರಿಂದಲೂ, ಮೂರನೆಯದು ಸೋಮಶೇಖರನಾಯಕನಿಂದಲೂ ಕೊಡಲ್ಪಟ್ಟಿದೆ.

ಜೀರ್ಣಾವಸ್ಥೆಯಲ್ಲಿರುವ ಈ ಹಸ್ತಪ್ರತಿಯ ಶಾಸನ ವಿವರಗಳು ಯಥಾವತ್ತಾಗಿ ಇಲ್ಲಿ ಕೊಡಲ್ಪಟ್ಟಿದೆ.

## ಕೆಳದಿ ಅರಸರ ಅಪ್ರಕಟಿತ ಎರಡು ಶಾಸನಗಳು

ನಿರೂಪ : ೧

1. ಶುಭಕೃತ್ತು ಸಂವತ್ಸರದ ಭಾದ್ರಪದ ಶುದ್ಧ ೧ಲು ಶ್ರೀಮತ್ಕೆಳದಿ ಭ
2. ದ್ರಪ್ಪನಾಯಕರು ವೆಂಕಗೆ ಬರಶಿ ಕಳುಹಿದ ಕಾರ್ಯ । ಹೊಸ್ತಾಗಿ

3. ಹೆಚ್ಚುವರಿ ಅಗ್ರಹಾರಗಳಿಗೆ ಅರವತ್ತು ಅಗ್ರಹಾರದ ಮಾಗ
4. ಣೆ ವಳಗಣ ಭಾರತ್ತಿಪುರದ ಗ್ರಾಮ ೧ ದೆವಲಾಪುರ ಗ್ರಾಮ ೧ ಕೊ
5. ದೂರ ಗ್ರಾಮ ೧ ತ್ರಿಯಂಪುರ ಗ್ರಾಮ ೧ ಕಿತ್ತಂದೂರು ಗ್ರಾಮ ಹೊ
6. ಸತ್ತಾಗಿ ಅಕಲಾಪುರ ಗ್ರಾಮ ೧ ಮಾನಿಸ್ಥಳ ಹೊರತ್ತಾಗಿ ವಿರೂಪಾ
7. ಪುರ ಗ್ರಾಮ ೧ ಸಂಮುಚಿಗ್ರಾಮ ೧ ಬಳಗೊಡು ಗ್ರಾಮ ೧ ಅಂತ್ತೂಗ್ರಾಮ
8. ಲನ್ನು । ಶೊಭಕ್ರುತು ಸಂವತ್ಸರದ ಶ್ರಾವಣ ಶುದ ೧೫ ಸೊಮೊ
9. ಪರಾಗ ಪುಂಣ್ಯ ಕಾಲದಲೂ ಯಿ ಅರುವತ್ತು ಅಗ್ರಹಾರಗಳಿಂ
10. ದಾವಿಂಗಡಿಸಿದ ಮಹಾಜನಂಗಳಿಗೂ ದೇವಸ್ತಾನ ಛತ್ರ ಅ
11. ದ್ಯನ ಶಾಸ್ತ್ರ ಪುರಾಣಕೆ ಸಹಾ ಸಹಿರಂಣ್ಯೋದಕದಾನಧಾ
12. ರಾಪೂರ್ವಕವಾಗಿ । ಶಿವಾರ್ಪಿತವಾಗಿ ಬಿಟ್ಟುಯಿದೆವೆ ಯಿ
13. xxxxಗಳಿಂದಾ ಹಣ ಮಣಿಹ ಮುಂತ್ತಾಗಿಯೆನು ಕೆಳ
14. ಲಾಗದು ಯಿ ಕಾಗದ ಸೆನಬಾಗರ ಕಡಿತಕೆ ಬರಶಿಮ
15. ಹಾಜನಂಗಳ ವಶರ್ಕೆ ಕೊಡುವದೂಯೆಂದು xx ನಿರೂ
16. ಪ. ೧
17. ರಕ್ತಾಕ್ಷಿ ಸಂವತ್ಸರದ ಭಾದ್ರಪದ ಬಹು
18. ಳ ೧೦ ಲ್ಲು ಅಪ್ಪಣೆ ಆದು ಸರ್ವಮಾಂನ್ಯ ಗ್ರಾಮಗಳಲ್ಲಿವ
19. ತ್ತುವಳಿ ಮಂಣಿನಲ್ಲಿ ಸಶಿಬಾಳೆ ಹಾಕಿ ಆಗುಮಾಡಿಕೊಂಡು
20. xxx ಹೆಚ್ಚಿಗೆ ಹಿಗ್ಗಿಯಕ್ಕೆ ಸಮಂಧವಿಲ್ಲ ಮಹಾಜನಂ
21. ಗಳಿಗೆ ಅನುಭವಿಸಿ ಕೊ xxx ಅಪ್ಪಣೆ xx ೨ ನಿರೂಪ.

ನಿರೂಪ : ೨

1. ಪ್ರಮಾದೀಚ ಸಂವತ್ಸರದ ಕಾರ್ತಿಕ ಬ ೧ಳಲ್ಲು ಶ್ರೀ ಮತ್ಕೆಳ
2. ದಿ ಚಂನಂಮಾಜಿಯವರು । ಬಿಳಿಕೃಷ್ಣಪಗೆ ಬರಶಿ ಕಳು
3. ಹಿದ ಕಾರ್ಯ । ಹೊಸ್ತಾಗಿ ಕಟ್ಟಿಸುವ ಭದ್ರರಾಜಪುರದ
4. ಮಹಾಜನಂಗಳೂ ತಂಮ್ಮತ್ತಂಮ್ಮ ಮನೆಗಳರ್ಗೆತ್ತಮಗೆ
5. ಬಿಟ್ಟ ಸ್ವಾಸ್ತಿಗಳಿಂದಾ ತಹರದವಸಸೊತ್ತೆಗಳಿ
6. ಶಹರ್ರ ಜನಿಸುಯೆದಿನರ್ರಿತ್ತಿರ್ರಂದು ಕೊಳುತ್ತಿದಲಿಸು x
7. ಕದವರು ತಡೆಯುತ್ತಾರ್ರಿಯೆಂತ್ತ ಸರ್ವಮಾನ್ಯದ ಅಗ್ರಾಮ
8. ದವರು xxx ಕೊಂಡಲಿರ್ತ್ತಡೆಯಬಾರದು । ತಂಮ್ಮ xxx
9. ಗೃಹಕೃತ್ಯಕೆ ಕಂದು ಕೊಂಬದಿನಿಶಿರ್ಗೆ ಸುಂಕ ಬಿಡಬೆಕೆಂದು
10. ಕೆಳದವರ್ಗ ಸುಂಕದವರಿಗೆ ಕಟ್ಟುಮಾಡಿರುವರು. ಯಿಕಾ
11. ಗದಾ ಸೆನಬಾಗರ ಕಡಿತಕ್ಕೆ ಬರಶಿತ್ತಿರುಗಾ ಗಾಮಕಜ

12. ನಂಗಳವರ ವಶಕೆ ಕಡುವದಾಗಿಯಂದು ನಿರೂ
13. ಪ. ೧.

ನಿರೂಪ : ೩

1. ಕಿಲಕ ಸಂವತ್ಸರದ ಆಷಾಢ ಶು. ೧೦ಲ್ಲು ಶ್ರೀಮಕ್ಕೆಳ
2. ದಿ ಸೊಮಶೆಖರನಾಯಕರು ರಾಮುಗೆ ಬರಶಿಕಳು
3. ಹಿದ ಕಾರ್‍ಯ । ಬಾಳಗಾರ ವೆಂಗಟ್ಟಬಟ್ಟರುವ ಮಗ xxxx
4. ಸಬಟ್ಟನ್ನು xx ರು ಬಂದು ಭದ್ರರಾಜಪುರ
5. ಗ್ರಹಾರರ್ಕೆ ಉತ್ತರವಾದು । ವಿರುಪಾಪುರ ಗ್ರಾ xx
6. ಲ್ಲಿ ಆವಭಟರ ಸಂಕ್ಯೆಬಟಗೆ ಉತ್ತರವಾಗಿದ್ದ ಸ್ವಾಸ್ತಿ x
7. ಳಗೆ ನಲೂರ ವ್ಯಾಸಂಣನ್ನು ಗ ೫೯೧||೦ ಸ್ವಾಸ್ತಿಯಂ
8. ನ್ನು ಕ್ರಯದಾನವಾಗಿತ್ತೆಗದುಕೊಂಡು ಸೊಮೊ
9. ಪರಾಗ ಪುಂಣ್ಯಕಾಲದಲೂ ತಂನತ್ತಂದೆಗೊಸ್ಕರದಾ
10. ನದತ್ತವಾಗಿ ಕೊಟ್ಟು ಪಟ್ಟ ಬರ ಕೊಟ್ಟುಯಿದಾರ್‍ರೆ
11. ಕಾಣಿಕೆ ಕೊಟ್ಟೆನ್ನು ನಿರ್‍ರೂಪ ಬರಶಿಕೊಡಬೆಕೆಂದು ಹೆಳ
12. ಕೊಳ್ಳುತ್ತಾನೆ. ಪ್ರತ್ತಿ ಅಪ್ಪಣೆ ಆಗಬೆಕೆಂದು ನಿರ್ನಾಣ್ಯ x
13. ಮಾವನವರು ಹೆಳಿದ ಸಮಂಧಾಯಿೊ ಶ್ರೀನಿವಾಸಭಟನ
14. ಕೈಯಾ ಕಾಣಿಕೆ ಗ ೧೯೩|೦ ಯಿೊ ಹತ್ತು ವರಹಾಂನ್ನು ಮೂ
15. ರು ಹಣಹಾಗವಂನ್ನು ಅರಮನೆಗೆ ತ್ತೆಗದು ಕೊಂಡು
16. ಯಿೊ ಭದ್ರರಾಜಪುರದ ಅಗ್ರಹಾರಕೆ ಉತ್ತಾರವಾದ
17. ಸ್ವಾಸ್ತಿಗಳಿಗೆ ನಲೂರವ್ಯಾಸಂಣನ್ನು ಕ್ರಯಕೆ ತ್ತೆಗದುಕೊಂ
18. ಡ ಬಗೆಯಲೂ ಗ೫೯೧||೦ ಅಯಿದುವರಹಾಂನ್ನೊ ಹ
19. ಣಾ ಅಡ ಸ್ವಾಸ್ತಿಯೆಂನ್ನು ಬಾಳಗಾರ ಶ್ರಿನಿವಾಸ ಭಟ
20. ೦ಗೆ ಶಿವಾರ್ಪಿತವಾಗಿ ಕೊಟ್ಟುಯಿದೆವೆ ಪಟ್ಟ ಪ್ರಮಾಣ
21. ನ್ನುಯಿೊತನ ಹವಾಲ್ಗೆ ಮಾಡಿಕೊಟ್ಟುಯಿೊ ಕಾಗದವಂನ್ನು
22. ಶ್ಯಾನಭಾಗರ ಕಡತಕ್ಕೆ ಬರಶಿ ತ್ತಿರುಗಾ xxx ವ
23. ಶಕೆ ಕೊಡುವದಾಗಿ ಯಂದು ನಿರೂಪ ೧.

---

# ಸಂಶೋಧನೆ : ಇಂದು

—ಡಾ|| ಟಿ. ವಿ. ವೆಂಕಟಾಚಲ ಶಾಸ್ತ್ರೀ

ಸಂಶೋಧನೆಯ ಸಾಮಾನ್ಯ ಸ್ವರೂಪವನ್ನೂ ಕನ್ನಡ ಭಾಷಾಸಾಹಿತ್ಯಗಳ ಗತಿ ವಿಗತಿಗಳನ್ನೂ ಕುರಿತು ನಾನು ಈಗಾಗಲೇ ಬೇರೆ ಬೇರೆ ಸಂದರ್ಭಗಳಲ್ಲಿ ಕೆಲವು ಮಾತು ಗಳನ್ನು ಹೇಳಿದ್ದೇನೆ. ಇಲ್ಲಿ ಅವುಗಳಿಂದ ಹೆಚ್ಚೇನೂ ಬೇರೆ ಹೇಳುವಂತಹ ಮಾತುಗಳಿಲ್ಲ; ಅವನ್ನು ಜ್ಞಾಪಿಸಿಕೊಳ್ಳುವ ಇನ್ನೊಂದು ಅವಕಾಶವಷ್ಟೇ ಇದು.

ಸಂಶೋಧನೆ ಎನ್ನುವುದು ಸಂಶೋಧಕನ ಒಂದು ಸಾರಸ್ವತ ತಪಶ್ಚರ್ಯೆ ; ಒಂದು ಕುತೂಹಲ ಪ್ರಪಂಚ. ಈ ತಪಶ್ಚರ್ಯೆ ಕುತೂಹಲಗಳು ಏಕಕಾಲದಲ್ಲಿ ಆತನ ಭಾವನಾಶಕ್ತಿಯನ್ನೂ ಬುದ್ಧಿಬಲವನ್ನೂ ನಿರೀಕ್ಷಿಸತಕ್ಕವು. ಇಲ್ಲಿ ಹೆಚ್ಚು ಶ್ರಮ, ಹೆಚ್ಚು ಸಮಯಗಳು ವಿನಿಯೋಗವಾಗಬೇಕಾಗುತ್ತದೆ. ವಿಷಯದ ಆಯ್ಕೆಯಲ್ಲಿ ಸಣ್ಣದು ದೊಡ್ಡದು ಎಂಬ ಪ್ರಮಾಣಭೇದವಾಗಲಿ, ಸಾಮಾನ್ಯ ವಿಶೇಷ ಎಂಬ ವಸ್ತು ಮಹತ್ವದ ಭೇದವಾಗಲಿ ಇರುವುದಿಲ್ಲ. ಎಲ್ಲವೂ ಭಾಷಾಸಾಹಿತ್ಯಗಳ ಸಮಸ್ಯೆ ಸಂದರ್ಭಗಳನ್ನು ಅರ್ಥಮಾಡಿಕೊಂಡು ಪರಿಹಾರಗಳನ್ನು ಪಡೆಯುವುದಕ್ಕೆ ಸಹಕಾರಿಯಾಗತಕ್ಕವು. ಒಂದು ಪಠ್ಯದ ಮೂಲ ಆಕೃತಿ ಸ್ವರೂಪಗಳು, ಆ ಪಠ್ಯದ ಲೇಖಕನ ಕಾಲ ದೇಶಾದಿ ಯಾದ ಇತಿವೃತ್ತದ ವಿಚಾರಗಳು, ಪಠ್ಯದಲ್ಲಿ ಅಂತರ್ಗತವಾದ ಸಮಾಜ ಧರ್ಮ ಸಂಸ್ಕೃತಿ ಮೊದಲಾದ ಜೀವನ ವ್ಯಾಪಾರಗಳು, ಹಾಗೂ ಆ ಪಠ್ಯದ ಭಾಷೆ ಶೈಲಿ ಛಂದಸ್ಸುಗಳು ಇವೆಲ್ಲ ಸಂಶೋಧನ ಕಾರ್ಯದ ಭಾಗಗಳೇ ಆಗಿವೆ. ಈ ಕಾರ್ಯದ ಜೀವಲಕ್ಷಣವೆಂದರೆ ಹಳೆಯದರ ಪರಿಷ್ಕಾರ ಹಾಗೂ ಹೊಸತರ ಆವಿಷ್ಕಾರ.

ಕನ್ನಡ ಭಾಷೆಯಲ್ಲಿ ಮೊದಲು ಕ್ರೈಸ್ತ ಮಿಷನರಿಗಳು ಪ್ರಾಚೀನ ಕವಿಗಳ ಪ್ರಸಿದ್ಧ ಕೃತಿಗಳನ್ನೂ ಲಕ್ಷಣಗ್ರಂಥಗಳನ್ನೂ ಸಂಪಾದಿಸಿ ಪ್ರಕಟಿಸುವ ಮೂಲಕ ಸಂಶೋಧನೆಗೆ ಬೀಜಾವಾಪ ಮಾಡಿದರು. ದೇಶೀಯ ಪಂಡಿತರು—ಆಂಗ್ಲ ಶಿಕ್ಷಣದ ಶಿಸ್ತನ್ನು ಪಡೆದ ವರು—ಈ ಕೃಷಿಯನ್ನು ಬಳಿಕ ಚುರುಕುಗೊಳಿಸಿ ಮುನ್ನಡಸಿದರು. ಕಿಟ್ಟೆಲ್, ರೈಸ್, ಆರ್. ನರಸಿಂಹಾಚಾರ್, ಬಿ. ಎಂ. ಶ್ರೀ., ಇವರು ಕನ್ನಡ ಸಂಶೋಧನೆಯ ದಿಕ್ಕು ದೆಸೆಗಳನ್ನು ನಿರ್ದೇಶಿಸಿದ ಮೊದಲಿಗರೆಂದು ತಿಳಿಯಬಹುದು. ಅಲ್ಲಿಯವರೆಗೆ ಕಾವ್ಯ ಸೃಷ್ಟಿ, ಲಕ್ಷಣ ಮತ್ತು ಲೌಕಿಕ ಶಾಸ್ತ್ರ ಗ್ರಂಥಗಳ ರಚನೆ ಇವುಗಳಲ್ಲೇ ನಮ್ಮ ಹಳೆಯ ಕವಿಗಳ ಮನಸ್ಸು ನಟ್ಟದ್ದು, ವಿಮರ್ಶೆ ಸಂಶೋಧನೆಗಳೆಂಬವು ಬಲುಮಟ್ಟಿಗೆ ಅಪರಿಚಿತ ವಿದ್ಯಮಾನಗಳಾಗಿದ್ದುವು. ಆದರೆ ಈಗ ಪಾಶ್ಚಾತ್ಯ ಸಾಹಿತ್ಯ ಶಿಕ್ಷಣದ ಪ್ರಭಾವದಿಂದ

ಅವುಗಳಿಗೆ ನೆಲೆಬೆಲೆಗಳು ಬಂದುವು. ಪ್ರಾಚೀನ ಪದ್ಯಗ್ರಂಥಗಳ ಸಂಪಾದನೆ ಪ್ರಕಟನೆಗಳು ತನ್ನೊಂದಿಗೆ ನಿಘಂಟು ರಚನೆ, ಸಾಹಿತ್ಯಚರಿತ್ರೆ, ವ್ಯಾಕರಣ, ಛಂದಸ್ಸು, ಕಾವ್ಯಮೀಮಾಂಸೆ, ಶಬ್ದಾರ್ಥವಿಚಾರ ಮೊದಲಾದ ಅಧ್ಯಯನ ಕ್ಷೇತ್ರಗಳನ್ನು ಕೂಡಿಸಿಕೊಂಡುವು. ಕನ್ನಡ ನವೋದಯದ ಸ್ವಲ್ಪ ಮೊದಲಲ್ಲಿ ಹಾಗೂ ಆರಂಭದಲ್ಲಿ ಸೃಜನಶೀಲ ಸಾಹಿತ್ಯ ಪ್ರಕಾರಗಳ ವ್ಯವಸಾಯಕ್ಕಿಂತ ವಿದ್ವತ್ತು ವಿಚಾರ ಸಾಹಿತ್ಯಗಳ ವ್ಯವಸಾಯವೇ ಬಹುಮಟ್ಟಿಗೆ ಪ್ರಾಶಸ್ತ್ಯ ಪ್ರಾಚುರ್ಯಗಳನ್ನು ಗಳಿಸಿತು ಎಂದು ಇಲ್ಲಿ ನೆನೆಯಬಹುದಾಗಿದೆ. ಈ ದಿಕ್ಕಿನಲ್ಲಿ ಸಾಹಿತಿಗಳು ಶ್ರಮಿಸಿದರು ; ವಿಶ್ವವಿದ್ಯಾನಿಲಯಗಳು, ವಿದ್ವತ್ ಸಂಸ್ಥೆಗಳು ಹಾಗೂ ಖಾಸಗಿ ಪ್ರಕಟನಾಲಯಗಳು ಒಳ್ಳೆಯ ಕೆಲಸ ಮಾಡಿದುವು.

ವಾಸ್ತವವಾಗಿ ಸಮಗ್ರ ಭರತಖಂಡದಲ್ಲಿಯೇ ಸಂಶೋಧನೆಯ ಚಟುವಟಿಕೆಗಳು ೧೯–೨೦ನೆಯ ಶತಮಾನಗಳ ಮಧ್ಯಾವಧಿಯಲ್ಲಿ ಅಭೂತಪೂರ್ವವಾಗಿ ನಡೆದುದನ್ನು ನಾವು ಕಾಣುತ್ತೇವೆ. ಇತಿಹಾಸ, ಪುರಾತತ್ತ್ವ, ಜಾನಪದ, ಶಾಸನಶಾಸ್ತ್ರ, ಲಿಪಿಶಾಸ್ತ್ರ, ನಾಣ್ಯಶಾಸ್ತ್ರ, ಗ್ರಂಥ ಸಂಪಾದನೆ, ಮೂಲಸಾಹಿತ್ಯಶೋಧನೆ, ಭಾಷಾಶಾಸ್ತ್ರ, ಮೊದಲಾದ ಅಧ್ಯಯನ ಕ್ಷೇತ್ರಗಳು ವಿದ್ವಜ್ಜನರ ಕೃಷಿಗೆ ಕನ್ನೆಹೊಲಗಳಾಗಿ ಪರಿಣಮಿಸಿದುವು. ಲಾಕ್ಷಣಿಕ ಮತ್ತು ಲೌಕಿಕ ಶಾಸ್ತ್ರ ಗ್ರಂಥಗಳು ಮೂಲ ಸಾಹಿತ್ಯ ಶೋಧನೆ ಸಂಪಾದನೆಗಳ ಜೊತೆಜೊತೆಗೇ ಅಧ್ಯಯನಕ್ಕೆ ಅಳವಟ್ಟುವು. ಅಂದು ಸರ್ಕಾರವೂ ಅನ್ಯ ವಿದ್ವತ್ ಸಂಸ್ಥೆಗಳೂ ಖಾಸಗಿ ಪ್ರಕಾಶನ ಸಂಸ್ಥೆಗಳೂ ಈ ಕೆಲಸವನ್ನು ಕೈಕೊಂಡುವು : ವೈಯಕ್ತಿಕ ಪ್ರಯತ್ನಗಳನ್ನು ಪ್ರೋತ್ಸಾಹಿಸಿದುವು.

ಆದರೆ ಇಂದು ಏನಾಗಿದೆ ? ಸಾಹಿತ್ಯಕ್ಕೆ, ಸಾಕ್ಷರತೆಗೆ ನಡುವೆ ಇರುವ ವ್ಯತ್ಯಾಸ ನಮಗೆ ತಿಳಿದಿರುವಂತೆ ತೋರುವುದಿಲ್ಲ. ಜನತೆಗೆ ಓದಿನ ಮೂಲಕ ಮನೋರಂಜನೆ ನೀಡುವುದು, ಅವರ ಭಾವದ ಹಸಿವು ಹಿಂಗಿಸುವುದು ಇವು ಮುಖ್ಯವಾಗಿ, ಸೃಜನಶೀಲ ಸಾಹಿತ್ಯ ಪ್ರಕಾರಗಳು ಹೆಚ್ಚಿನ ಪ್ರಚಾರ ಪಡೆಯುತ್ತಿವೆ, ಪ್ರಾಶಸ್ತ್ಯಗಳಿಸುತ್ತಿವೆ. ಜೀವನ ಸಂಸ್ಕಾರವನ್ನು ಕೊಡುವ ಸಾಹಿತ್ಯವನ್ನು ಸಾಮಾನ್ಯ ಜನತೆಯ ಬಳಿಗೆ ಒಯ್ಯುವುದು ಅವಶ್ಯ ಎಂಬ ದೃಷ್ಟಿಯಿಂದ ಇದು ಸರಿಯಿರಬಹುದು. ಆದರೆ ಅಂತಹ ಸಾಹಿತ್ಯ ಪ್ರಕಾರಗಳ ಮೌಲ್ಯಮಾಪನಕ್ಕೆ ಸಹಕಾರಿಯಾಗುವ ವಿಮರ್ಶೆಗೆ, ಅಂತಹ ವಿಮರ್ಶೆಗೆ ಒದಗಬೇಕಾಗಿರುವ ಪಠ್ಯದ ಆಕೃತಿ ನಿರ್ಣಯ, ಅರ್ಥಾನ್ವಯಗಳು, ವಸ್ತುಸ್ವರೂಪ, ಸಾಮಾಜಿಕ ಆದಿ ಸಂದರ್ಭಗಳ ವಿಶ್ಲೇಷಣೆ, ಕರ್ತೃ ವಿಚಾರ, ಭಾಷೆ ಶೈಲಿ ಛಂದಸ್ಸುಗಳ ನಿರ್ವಹಣೆ ಮೊದಲಾದುವನ್ನು ತರ್ಕಬದ್ಧವಾಗಿ ಗೊತ್ತುಪಡಿಸುವ, ಹಾಗೆ ಗೊತ್ತುಪಡಿಸುವಾಗ ಎದುರಾಗುವ ಸಮಸ್ಯೆಗಳನ್ನು ಭೇದಿಸಿ ಪರಿಹಾರಗಳನ್ನು ಕಂಡು ಹಿಡಿಯುವ ಸಂಶೋಧನೆಗೆ ತಕ್ಕ ಪ್ರಚಾರವಾಗಲಿ, ಪ್ರಾಶಸ್ತ್ಯವಾಗಲಿ ಇಲ್ಲ ಎನ್ನುವುದಾದರೆ ಅದು ಕನ್ನಡಿಗರ ಬುದ್ಧಿಶಕ್ತಿಯ, ತರ್ಕಕೌಶಲದ, ಯುಕ್ತಾಯುಕ್ತ ವಿವೇಚನೆಯ ಬಡತನವನ್ನು ತೋರಿಸುತ್ತದೆ ಎನ್ನಬೇಕಾಗುತ್ತದೆ.

ಈಗ್ಗೆ ಕೆಲವು ವರ್ಷಗಳ ಹಿಂದಿನವರೆಗೆ ವೈಯಕ್ತಿಕ ಹಾಗೂ ಸಾಂಸ್ಥಿಕ ನೆಲೆಗಳಲ್ಲಿ ನಡೆದಿರುವ ಸಂಶೋಧನ ಕ್ಷೇತ್ರದ ಕೆಲಸಗಳನ್ನು ಗಮನಿಸಿದರೆ, ಅದು ಸಂತೋಷ ಅಭಿಮಾನಗಳನ್ನು ಉಕ್ಕಿಸುವಂತೆ ನಡೆದುದು ಯಾರಿಗಾದರೂ ಗೋಚರಿಸುತ್ತದೆ. ಸಾಮಾನ್ಯವಾದ ಅಧ್ಯಯನ ಕುತೂಹಲವುಳ್ಳ ಸಾಹಿತಿಯಿಂದ ವಿದ್ವಾಂಸನವರೆಗೆ, ಸಣ್ಣ ಸ್ಥಳದ ಕರ್ನಾಟಕ ಸಂಘದಿಂದ ವಿಶ್ವವಿದ್ಯಾನಿಲಯದವರೆಗೆ ಅಂತಹ ಕೆಲಸಗಳು ನಡೆದಿವೆ. ಆದರೆ ಈಚಿನ ವರ್ಷಗಳಲ್ಲಿ, ಇಂತಹ ಕೆಲಸಗಳನ್ನು ಪೋಷಿಸುತ್ತಿದ್ದ ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗಳು, ಮೈಸೂರು ಧಾರವಾಡಗಳ ವಿಶ್ವವಿದ್ಯಾನಿಲಯಗಳು, ಮೈಸೂರಿನ ಶಾರದಾ ಮಂದಿರದಂತಹ ಖಾಸಗಿ ಪ್ರಕಾಶನ ಸಂಸ್ಥೆಗಳು ಹಣದ ಅಭಾವವನ್ನು ಮುಂದೊಡ್ಡಿ ಈ ಕೆಲಸಗಳನ್ನು ಬಲುಮಟ್ಟಿಗೆ ಕುಂಠಿತಗೊಳಿಸಿವೆ. ಮದರಾಸು ವಿಶ್ವವಿದ್ಯಾನಿಲಯದ ಕನ್ನಡ ಪ್ರಕಟನೆಗಳು ಎಂದೋ ನಿಂತುಹೋದುವು. ಇದಕ್ಕೆ ಹೊರರಾಜ್ಯದಲ್ಲಿ ಕನ್ನಡ ಪ್ರಕಟನೆಗಳಿಗೆ ಧನ ವ್ಯಯವಾಗುವುದು ಅಪೇಕ್ಷಣೀಯವಲ್ಲ ಎಂಬ ಧೋರಣೆ ಕಾರಣವಾದಂತೆ ತೋರುತ್ತದೆ. ಪರಿಸ್ಥಿತಿಯನ್ನು ವಿಮರ್ಶಿಸಿದರೆ, ಸಂಶೋಧನೆಯ ಚಟುವಟಿಕೆಗಳಿಗೆ ಹಣದ ಅಭಾವ, ಪ್ರೋತ್ಸಾಹದ ಕಾರ್ಪಣ್ಯ ಎನ್ನುವುದು ಅಂತಹ ಪ್ರಬಲ ಕಾರಣಗಳೆಂದು ನನಗೆ ತೋರುತ್ತಿಲ್ಲ. ಸಾಹಿತ್ಯದಲ್ಲಿ ಪ್ರೀತಿ, ವಿದ್ವತ್ ಕಾರ್ಯಗಳಲ್ಲಿ ಶ್ರದ್ಧೆ ಉತ್ಸಾಹಗಳು, ತಕ್ಕ ಸಮಯದಲ್ಲಿ ತಕ್ಕ ನಿರ್ಣಯವನ್ನು ಕೈಕೊಳ್ಳುವ ವಿವೇಕ, ಪಟ್ಟು ಹಿಡಿದು ಕೆಲಸ ಸಾಧಿಸುವ ಶ್ರಮ ಸಹಿಷ್ಣುತೆ, ಸಹಾಯ ದ್ರವ್ಯದ ಮೂಲಗಳನ್ನು ಶೋಧಿಸಿ ಅವುಗಳೊಂದಿಗೆ ವ್ಯವಹರಿಸಿ ಪ್ರಯೋಜನ ಪಡೆಯುವ ಅಪೇಕ್ಷೆ, ಕೌಶಲ ಕರ್ತವ್ಯಪ್ರಜ್ಞೆಗಳು ಇವು ಅತ್ಯವಶ್ಯವಾಗಿರುವ ನಾಯಕತ್ವದ ಅಭಾವವೇ, ಅದಕ್ಷತೆಯೇ ನನಗೆ ಪ್ರಬಲವಾದ ಕಾರಣವೆಂದು ತೋರುತ್ತಿದೆ. ಹೀಗಾಗಿ ಲಕ್ಷಗಟ್ಟಲೆ ಹಣವನ್ನು, ಬಳಕೆಗೆಂದು ಮೀಸಲಾಗಿರುವುದನ್ನು ಹಾಗೂ ನೀಡಿರುವುದನ್ನು ಬಳಸದೆಯೇ ಸಂಶೋಧನೆಯ ಕೆಲಸಗಳು ಸೊರಗಿಹೋಗಿವೆ. ಇದರೊಂದಿಗೆ ಇನ್ನೂ ಒಂದು ಅಪಾಯವನ್ನು ಇಲ್ಲಿ ತಿಳಿಸಬೇಕು. ಅದು ಅನಾವಶ್ಯಕವಾದ ಹಾಗೂ ವ್ಯರ್ಥ ಪುನರಾವರ್ತನೆಯ ಕೆಲಸಗಳಿಗಾಗಿ ಆಗುತ್ತಿರುವ ಧನವ್ಯಯದಿಂದ ಆಗಬೇಕಾದ ಕೆಲಸಗಳು ಆಗದೆ ನಿಲ್ಲುವಂತಾಗಿರುವ ಒಂದು ವಿಷಾದದ ಸ್ಥಿತಿಯೇ ಆಗಿದೆ. ಕೃತಿಗಳ ಪುನರ್ಮುದ್ರಣಗಳಿಗಾಗಿ, ಒಂದೇ ಬಗೆಯ ಸಾಹಿತ್ಯದ ಚಿಕ್ಕ ದೊಡ್ಡ ಆವೃತ್ತಿಗಳಿಗಾಗಿ, ಒಪ್ಪಿಸಿದ ಹಸ್ತಪ್ರತಿಗಳನ್ನೆಲ್ಲ ಮುದ್ರಿಸಿ ಹೊರತರಬೇಕೆಂಬ ಅತ್ಯುತ್ಸಾಹದಿಂದಾಗಿ, ದುಬಾರಿ ವೆಚ್ಚದ ದುಂದುಗಾರಿಕೆಯ ಪ್ರಕಟನೆಗಳಿಗಾಗಿ ಆಗಿರುವ ಹಣದ ವೆಚ್ಚದಲ್ಲಿ ಅನೆಷ್ಟೋ ಅಮುದ್ರಿತ ಗ್ರಂಥಗಳನ್ನು ಹೊರತರುವ ಸಾಧ್ಯತೆ ತಪ್ಪಿಹೋಗಿದೆ.

ಈಚೆಗೆ ಸರ್ಕಾರ ಹಾಗೂ ಖಾಸಗಿ ಉದ್ಯಮಗಳೆರಡೂ ಪುಸ್ತಕ ಪ್ರಕಟನೆಯಲ್ಲಿ ಸೃಜನಶೀಲ ಸಾಹಿತ್ಯ ಹಾಗೂ ಸಾಹಿತ್ಯವಿಮರ್ಶೆ ಇವುಗಳ ಕಡೆಗೇ ಹೆಚ್ಚು ಒತ್ತು ಕೊಡುತ್ತಿದ್ದು ವಿಚಾರ ಸಾಹಿತ್ಯ ಸಂಶೋಧನೆಗಳು ಅವಜ್ಞೆಗೆ ಗುರಿಯಾಗುತ್ತಿವೆ.

ಸರ್ಕಾರದ ಅಂಗಭಾಗಗಳಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಾಹಿತ್ಯ ಅಕಾಡೆಮಿಗಳ ಕಾರ್ಯ ಚಟುವಟಿಕೆಗಳು ಈಚೆಗೆ ಪ್ರೋತ್ಸಾಹದಾಯಕವಾಗಿರುವುದೇನೋ ನಿಜ ; ಆದರೆ ಅಲ್ಲಿ ಇನ್ನೂ ಹೆಚ್ಚು ವಿಚಕ್ಷಣೆಯ, ತಕ್ಕ ಮೇಲುಸ್ತುವಾರಿಯ ಆವಶ್ಯಕತೆಯಿದೆ. ಅವು ಹೆಚ್ಚಿನ ಔದಾರ್ಯವನ್ನು ತೋರಿ ಹಿರಿಯ ವಿದ್ವಾಂಸರ ಸಂಶೋಧನ ಲೇಖನಗಳ ಸಂಕಲನಗಳನ್ನೂ ಸ್ವತಂತ್ರ ಸಂಶೋಧನ ಗ್ರಂಥಗಳನ್ನೂ ಪ್ರಕಟಿಸುವುದಾಗಬೇಕು ; ವಿಚಾರ ಸಾಹಿತ್ಯದ ಕೃತಿಗಳನ್ನು ಬರಸುವುದಾಗಬೇಕು. ಜನಸಾಮಾನ್ಯರನ್ನು ಮೆಚ್ಚಿಸುವುದೇ ಗುರಿಯಾಗಬೇಕಾಗಿಲ್ಲ ; ಬುದ್ಧಿವಂತ ಓದುಗರ ಜ್ಞಾನದಿಗಂತಗಳನ್ನು ವಿಸ್ತರಿಸುವ ಯೋಜನೆಗಳನ್ನು ಹಾಕಿಕೊಳ್ಳಬೇಕು.

ವೈಯಕ್ತಿಕ ನೆಲೆಯಲ್ಲಿ, ಬಿಎಂಶ್ರೀ–ಆರ್. ನರಸಿಂಹಾಚಾರ್ ಇವರಿಂದ ಮೊದಲಾಗಿ ನನ್ನ ಓರಗೆಯ ವಿದ್ವಾಂಸರವರೆಗೆ ಹಲವರು ತಮ್ಮ ತಮ್ಮ ಶಕ್ತಿಗೆ ಅನುಸಾರವಾಗಿ ಸಂಶೋಧನ ಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದರೂ ಇವುಗಳಿಗೆ ಬರುಬರುತ್ತ ಸೀಮಿತಗಳು ಹೆಚ್ಚುತ್ತಿವೆ ; ಅವಗಣನೆ ಅಪದೆಸೆಗಳು ಬೆಳೆಯುತ್ತಿವೆ. ವೆಂಕಣಯ್ಯ–ಎ.ಆರ್.ಕೃ, ತೀನಂಶ್ರೀ–ಡಿಎಲ್ಎನ್, ಚೆನ್ನಕೇಶವಯ್ಯಂಗಾರ್–ಶೇಷಯ್ಯಂಗಾರ್, ಕುಂದಣಗಾರ–ಮುಗಳಿ ಮೊದಲಾದ ಗಣ್ಯ ವಿದ್ವಾಂಸರ ವಿದ್ವತ್ ಸಂಪ್ರದಾಯ ಕ್ಷೀಣಿಸುತ್ತಿದೆಯೇನೋ ಎಂಬ ಆತಂಕ ಹೆಚ್ಚುತ್ತಿದೆ.

ಸಾಂಪ್ರದಾಯಿಕ ವ್ಯಾಕರಣಶಾಸ್ತ್ರದ ಕ್ಷೇತ್ರದಲ್ಲಿ, ಪ್ರಾಚೀನ ವ್ಯಾಕರಣ ಗ್ರಂಥಗಳ ಪರಿಷ್ಕೃತ ಆವೃತ್ತಿಗಳನ್ನೂ ಶಾಲಾವ್ಯಾಕರಣಗಳನ್ನೂ ಪ್ರಕಟಿಸುವುದರಲ್ಲಿಯೇ ನಮ್ಮ ವಿದ್ವಾಂಸರ ಹೊತ್ತು ಹೋಗುತ್ತಿದೆ. ಇವುಗಳು ವಿದ್ಯಾರ್ಥಿಗಳನ್ನೂ ಅಭ್ಯಾಸಿಗಳನ್ನೂ ಲಕ್ಷ್ಯದಲ್ಲಿಟ್ಟುಕೊಂಡು ಸಿದ್ಧವಾಗುವ ಪ್ರವೃತ್ತಿಗೆ ಸಾಮಾನ್ಯವಾಗಿ ಒಳಗಾಗಿರುವುದರಿಂದ, ವ್ಯಾಕರಣ ವಸ್ತುವಿನ ವಿಮರ್ಶೆ ಶೋಧನೆಗಳು ತಕ್ಕ ಸಂಶೋಧನೆಗೆ ಒಳಪಡುವುದು ಸಾಧ್ಯವಾಗುತ್ತಿಲ್ಲ. ಇದಕ್ಕೆ ಅಪವಾದಗಳು ಇಲ್ಲದೆ ಇಲ್ಲ. ಆದರೆ ಅವುಗಳ ಸಂಖ್ಯೆ ತೀರ ವಿರಳ. ಪ್ರಾಚೀನ ವ್ಯಾಕರಣಗಳು ತಮ್ಮ ನಿಜ ಸ್ವರೂಪದಲ್ಲಿ ಇನ್ನೂ ಸಂಪಾದಿತವಾಗಿಲ್ಲ. ಇಂಗ್ಲಿಷ್ ಭಾಷೆಯ Wren and Martin ಅವರ ಇಂಗ್ಲಿಷ್ ವ್ಯಾಕರಣದಂತಹ ಕನ್ನಡ ವ್ಯಾಕರಣ ಇನ್ನೂ ರಚಿತವಾಗಿಲ್ಲ ಎಂಬುದನ್ನು ಇಲ್ಲಿ ನೆನೆಯಬಹುದಾಗಿದೆ.

೨೦ನೆಯ ಶ. ದ ಮಧ್ಯಭಾಗದಲ್ಲಿ ಭಾಷಾವಿಜ್ಞಾನ ಹೊಸ ಮುಖಗಳನ್ನು ಪಡೆದು ಮುನ್ನಡೆದ ಮೇಲೆ ದ್ರಾವಿಡ ಭಾಷೆಗಳ ಅಧ್ಯಯನ ಸಹ ಪಟುಗೊಳ್ಳುವುದು ಸಾಧ್ಯವಾಯಿತು. ತೀ. ನಂ. ಶ್ರೀ, ಬಿಳಿಗಿರಿ, ಚಿದಾನಂದ ಮೂರ್ತಿ, ಹಾ. ಮಾ. ನಾಯಕ ಕುಶಾಲಪ್ಪಗೌಡ, ಶಂಕರಭಟ್ಟ ಈ ಕೆಲವರು ಈ ಕ್ಷೇತ್ರದಲ್ಲಿ ಶ್ರಮಿಸತೊಡಗಿದರು. ಆದರೆ ನಡೆದಿರುವ ಕೆಲಸ ತೀರ ಸ್ವಲ್ಪ. ತಮಿಳು ತೆಲುಗು ಭಾಷೆಗಳ ವಿದ್ವಾಂಸರು ತೋರಿಸಿದ ಹಾಗೂ ತೋರಿಸುತ್ತಿರುವ ಉತ್ಸಾಹ ಪರಿಶ್ರಮಗಳನ್ನು ಕನ್ನಡ ಭಾಷೆಯ

ವಿದ್ವಾಂಸರು ತೋರಿಸುತ್ತಿಲ್ಲ. ಈ ಅನಾದರಕ್ಕೆ ಕಾರಣವೇನೆಂದು ಗುರುತಿಸಬೇಕು. ಉಪಭಾಷಾ ಸರ್ವೇಕ್ಷಣೆ, ಮಾಂಡಲಿಕ ವೃತ್ತಿಪದಕೋಶ, ಕನ್ನಡ ಭಾಷೆಯ ಚರಿತ್ರೆ, ಪ್ರಾಚೀನ ಕವಿ ಕೃತಿಗಳ ವರ್ಣನಾತ್ಮಕ ವ್ಯಾಕರಣ ಹಾಗೂ ಪದಕೋಶಗಳು ಇಂತಹ ಕೆಲಸಗಳು ಸಾಂಸ್ಥಿಕ ನೆಲೆಗಟ್ಟಿನ ಮೇಲೆ ವಿಸ್ತೃತವಾಗಿ ಇನ್ನೂ ನಡೆಯಬೇಕಾಗಿದ್ದು, ಈ ದಿಕ್ಕಿನಲ್ಲಿ ತಕ್ಕ ಚಾಲನೆ ಕೊಡುವ ಮಾರ್ಗದರ್ಶಕ ವಿದ್ವಾಂಸರೇ ಕಣ್ಣಿಗೆ ಬೀಳುತ್ತಿಲ್ಲ.

ಆಧುನಿಕ ಭಾರತೀಯ ಸಂಶೋಧನಾತ್ಮಕ ಚಟುವಟಿಕೆಗಳಲ್ಲಿ ಛಂದಸ್ಸು ಎಂದಿನಿಂದಲೂ ಅಲಕ್ಷ್ಯಕ್ಕೆ ಒಳಗಾಗಿದ್ದ ವಿಷಯವಾಗಿದ್ದು, ಅದಕ್ಕೆ ಈಚೆಗೆ ಪ್ರಬಲವಾದ ಒತ್ತಾಸೆ ಚಾಲನೆಗಳನ್ನು ಕೊಟ್ಟವರು ಎಚ್. ಡಿ. ವೇಲಣಕರ ಅವರು. ಕನ್ನಡದ ಮಟ್ಟಿಗೆ ಈ ಚಾಲನೆ ಒತ್ತಾಸೆಗಳನ್ನು ಕೊಟ್ಟವರು ಬಿ. ಎಂ. ಶ್ರೀ, ಎ. ವೆಂಕಟ ಸುಬ್ಬಯ್ಯ, ಸೇಡಿಯಾಪು ಕೃಷ್ಣಭಟ್ಟ, ಕುಂದಣಗಾರ, ತೀ ನಂ ಶ್ರೀ ಈ ಕೆಲವರು. ಕರ್ಕಿಯವರ ನಿಬಂಧ ಪ್ರಕಟವಾದ ಮೇಲೆ, ಈಚೆಗೆ ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಛಂದಸ್ಸಿನ ಚರಿತ್ರೆ ಪ್ರಕಟವಾಗುವವರೆಗೆ ಇನ್ನೊಂದು ಘಟ್ಟದ ಕೆಲಸ ಈ ಕ್ಷೇತ್ರವನ್ನು ಕೃಷಿಗೋಳಿಸಲು ತಕ್ಕ ಮಟ್ಟಿಗೆ ಯತ್ನಿಸಿದೆ. ಇದು ನನ್ನ ಒಲವಿನ ಕ್ಷೇತ್ರವಾಗಿದ್ದು, ಅಲ್ಲಿ ತೆಗೆದ ಬೆಳೆಯಲ್ಲಿ ನನ್ನಪಾಲೂ ಇದೆ. ಸಿದ್ಧವಾಗಿ ಹಲವು ವರ್ಷಗಳೇ ಆಗಿರುವ 'ಹೊಸಗನ್ನಡ ಛಂದಸ್ಸು' ಎಂಬ ನಿಬಂಧ ಇನ್ನೂ ಪ್ರಸಾರಾಂಗದ ಕಪಾಟನಲ್ಲಿಯೇ ನಿದ್ರಿಸುತ್ತಿದೆ ಎನ್ನುವುದು ವಿಷಾದದ ಸಂಗತಿ. ಈ ವರೆಗೆ ಈ ದಿಕ್ಕಿನಲ್ಲಿ ನಡೆದ ಪ್ರಯತ್ನಗಳು ಕನ್ನಡ ಛಂದಸ್ಸಿನ ಲಾಕ್ಷಣಿಕ ಇಲ್ಲವೆ ಚಾರಿತ್ರಿಕ ಮುಖಗಳಿಗೆ ಸಂಬಂಧಿಸಿವೆಯಲ್ಲದೆ ಮೀಮಾಂಸೆಯ ಮುಖದಲ್ಲಿ ಆಗಿಲ್ಲ. ಈಚೆಗೆ ಪ್ರಕಟವಾಗಿರುವ ಸೇಡಯಾಪು ಅವರ 'ಛಂದೋಗತಿ' ಈ ಮುಖದ ಒಂದು ಒಳ್ಳೆಯ ಪ್ರಯತ್ನ. ಇಲ್ಲಿ ಛಂದೋಬಂಧಗಳ ಆಕೃತಿಯಲ್ಲಿಯ ಅಕ್ಷರವಿನ್ಯಾಸದ ಮರ್ಮಗಳನ್ನು ಭೇದಿಸುವ, ಪಾದ ಸಂಘಟನೆಯ ಕವಿ ಚಾತುರ್ಯವನ್ನು ಗುರುತಿಸುವ ಸ್ವಾರಸ್ಯಕರ ಸಮರ್ಥ ಜಿಜ್ಞಾಸೆಗಳಿವೆ. ಈಚೆಯ ವರ್ಷಗಳಲ್ಲಿ ಕನ್ನಡ ವಿದ್ವಾಂಸರ ಉತ್ಕೃಷ್ಟ ಸಂಶೋಧನ ಸಾಮರ್ಥ್ಯವನ್ನು ಪ್ರಕಟಿಸುವ ಒಂದು ಒಳ್ಳೆಯ ಸಾಕ್ಷ್ಯವಿದು. ಆದರೆ ಭಾಷೆ ಭಾವ ಮತ್ತು ಛಂದಸ್ಸುಗಳು ರಸಾವಹವಾಗಿ ಬೆರೆತು ಉದ್ದಿಷ್ಟ ಪರಿಣಾಮಗಳನ್ನು ತರುವ ರಹಸ್ಯಗಳ ವಿಶ್ಲೇಷಣಕಾರ್ಯ ಛಂದೋಮೀಮಾಂಸೆಯ ಭಾಗವಾಗಿ ಇನ್ನೂ ನಡೆಯಬೇಕಾಗಿದೆ.

ಈಗ ಅಲಂಕಾರಶಾಸ್ತ್ರದ ಸರದಿ. ಕನ್ನಡದಲ್ಲಿ ಈ ಕೆಲಸ ಎರಡು ರೀತಿಗಳಲ್ಲಿ ನಡೆದಿದೆ. ಒಂದು ಕನ್ನಡದ ಪ್ರಾಚೀನ ಅಲಂಕಾರ ಗ್ರಂಥಗಳ ಪ್ರಕಟನೆ, ಇನ್ನೊಂದು ಸಂಸ್ಕೃತದ ಪ್ರಸಿದ್ಧ ಅಲಂಕಾರ ಗ್ರಂಥಗಳ ಕನ್ನಡ ಭಾಷಾಂತರ. ಮೊದಲನೆಯ ಕೆಲಸ ಕೆ. ಬಿ. ಪಾಠಕರಿಂದ ಮೊದಲುಗೊಂಡು ಈಚೆಗೆ ತಿಪ್ಪೇರುದ್ರಸ್ವಾಮಿಯವರ ವರೆಗೆ ಬೇರೆ ಬೇರೆ ವಿದ್ವಾಂಸರಿಂದ ನಡೆದುಕೊಂಡು ಬಂದಿದೆ. ಈ ದಿಕ್ಕಿನಲ್ಲಿ ವಿಶೇಷವಾಗಿ ನೆನೆಯಬೇಕಾದುದು, ಮೆಚ್ಚಬೇಕಾದುದು ಎಂ. ವಿ. ಸೀತಾರಾಮಯ್ಯನವರ ಪರಿಶ್ರಮವನ್ನು.

ಉತ್ಸಾಹವನ್ನು. 'ಕವಿರಾಜಮಾರ್ಗ' 'ಉದಯಾದಿತ್ಯಾಲಂಕಾರ' ಇವುಗಳ ಪುನಃ ಪರಿಷ್ಕರಣ ಕಾರ್ಯವನ್ನು ಸಹಾಯಕ ಕೃತಿ ವಸ್ತು ವಿಸ್ತಾರಕ ವ್ಯಾಖ್ಯಾನದೊಂದಿಗೆ ಅವರು ಚೆನ್ನಾಗಿಯೇ ಮಾಡಿದ್ದಾರೆ. 'ಕವಿರಾಜಮಾರ್ಗ'ದ ಈಚೆಯ ಪರಿಷ್ಕರಣವನ್ನು ಸಿದ್ಧಪಡಿಸಿರುವ ಕೆ. ಕೃಷ್ಣಮೂರ್ತಿಗಳು ಪ್ರತಿಪದ್ಯ ತಾತ್ಪರ್ಯಾರ್ಥ ಕೊಟ್ಟು ಮಾಡಿರುವ ಸಹಾಯವೂ ನೆನೆಯಬೇಕಾದ್ದು. ಇಷ್ಟಾದರೂ ಇನ್ನೂ ಒಂದೆರಡು ಕೃತಿಗಳು ಬೆಳಕು ಕಾಣದೆ ಇದೆ. ಇದಕ್ಕಿಂತ ಮುಖ್ಯವಾದುದು ಎಂದರೆ, ಕನ್ನಡ ಅಲಂಕಾರ ಗ್ರಂಥಗಳ ವಸ್ತುವಿಮರ್ಶೆ, ತುಲನಾತ್ಮಕ ಅಧ್ಯಯನ, ಸ್ವೋಪಜ್ಞತೆಯ ಭಾಗದ ನಿರ್ದೇಶನ ಇವುಗಳ ಕೆಲಸ ತಪ್ಪದೆ ಇನ್ನೂ ನಡೆಯಬೇಕಾಗಿರುವುದು. ಕೆ. ಕೃಷ್ಣಮೂರ್ತಿಗಳು ಎರಡನೆಯ ಭಾಗದ ಕೆಲಸವನ್ನು, ಎಂದರೆ ಪ್ರಸಿದ್ಧ ಸಂಸ್ಕೃತ ಅಲಂಕಾರ ಗ್ರಂಥಗಳ ಕನ್ನಡ ಅನುವಾದಗಳನ್ನು ಮಾಡಿ ಸಲ್ಲಿಸಿರುವ ಸೇವೆ ತುಂಬ ದೊಡ್ಡದು. ಇವು ಬರಿಯ ಅನುವಾದಗಳಾಗಿರದೆ ವಿಮರ್ಶಾತ್ಮಕ ಅಧ್ಯಯನಗಳಿಂದ ಪರಿಪುಷ್ಟವೂ ಆಗಿವೆ. 'ಸಾಹಿತ್ಯ ದರ್ಪಣ' ಮೊದಲಾದ ಇನ್ನೂ ಒಂದೆರಡು ಜನಪ್ರಿಯ ಕೃತಿಗಳ ಅನುವಾದಕ್ಕೆ ಅವರು ಮನಸ್ಸು ಮಾಡಬೇಕಾಗಿದೆ. ವಿದ್ವಾನ್ ರಂಗನಾಥ ಶರ್ಮರ 'ಕವಿರಾಜಮಾರ್ಗ' ಕುರಿತ ವಿಚಾರಗಳು ಆ ಕೃತಿಯ ಅಧ್ಯಯನಕ್ಕೆ ಉಪಯುಕ್ತವಾದವು. ನಮ್ಮ ಪ್ರಾಚೀನ ಕಾವ್ಯ ಪುರಾಣಗಳನ್ನು ಅಲಂಕಾರ ಶಾಸ್ತ್ರದ ಪ್ರಕ್ರಿಯೆಗಳ ಅನ್ವಯದಿಂದ ಪರಿಶೀಲಿಸುವುದು ಸಾಧ್ಯವೇ ಎನ್ನುವುದು ಗಮನಿಸಬೇಕಾದ ವಿಷಯ ಎಂದು ಇಲ್ಲಿಯೇ ಸೂಚಿಸಬಹುದಾಗಿದೆ.

ನಿಘಂಟು ರಚನೆ ಒಂದು ಶ್ರಮದಾಯಕವಾದ, ಎಷ್ಟು ಶ್ರಮಿಸಿದರೂ ತಪ್ಪಿಗೆ ಅವಕಾಶವಾಗುವ ಒಂದು ಸಂಶೋಧನಾತ್ಮಕ ಉದ್ಯಮ. ಕನ್ನಡದಲ್ಲಿ ವೈಯಕ್ತಿಕ ನೆಲೆಯಲ್ಲಿ ಸಾಮಾನ್ಯ ಅಭ್ಯಾಸಿ ನಿಘಂಟುಗಳು ಸಾಕಷ್ಟು ಸಿದ್ಧವಾಗಿವೆ. ಇವುಗಳಲ್ಲಿ ಕನ್ನಡ-ಕನ್ನಡ ಏಕ ಭಾಷಿಕ ನಿಘಂಟು ರಚನೆಯಲ್ಲಿ ತೊಡಕುಗಳು ಹೆಚ್ಚು ; ಅಂತಹ ನಿಘಂಟಿನ ವ್ಯಾಪ್ತಿ ವಿಸ್ತಾರಗಳನ್ನು ನಿರ್ಧರಿಸುವುದೇ ಮೊದಲ ಕಷ್ಟದ ಕೆಲಸ. ಸಾಂಸ್ಥಿಕ ಪ್ರಯತ್ನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ದೊಡ್ಡ ಕನ್ನಡ ನಿಘಂಟು ಇನ್ನೇನು ಮುಗಿಯುವ ಘಟ್ಟಕ್ಕೆ ಬಂದಿದೆ. ಅದು ಎದುರಿಸಿರುವ, ಎದುರಿಸುತ್ತಿರುವ ಸಮಸ್ಯೆಗಳು ಹಲವಾರು. ಅವನ್ನೆಲ್ಲ ಇಲ್ಲಿ ವಿವರಿಸುವುದು ಕಷ್ಟ. ಆದರೆ ಒಂದು ವಿಷಯವನ್ನು ನಾನು ಹೇಳಬೇಕು. ಈ ನಿಘಂಟು ಈಗ ನಡೆಯುತ್ತಿರುವ ಮಾರ್ಗ ಕ್ರಮಣವನ್ನು ಗಮನಿಸಿದರೆ, ಕನ್ನಡದ ವಿದ್ವಜ್ಜನರ ಶಕ್ತಿ ಸಾಮರ್ಥ್ಯಗಳನ್ನೂ ಅವರ ಶ್ರದ್ಧಾಸಕ್ತಿಗಳನ್ನೂ ಕುರಿತು ಮತ್ತೆ ಮತ್ತೆ ಯೋಚಿಸುವ ಹಾಗೆ, ಕಳವಳಪಡುವ ಹಾಗೆ ಆಗುತ್ತದೆ. ಕನ್ನಡ ವಿದ್ವಾಂಸರಿಗೆ ಏನೋ ಮುಂಕುಕವಿದಿರುವ ಹಾಗೆ ತೋರುತ್ತದೆ. ನಮ್ಮಲ್ಲಿ ಇನ್ನೂ ತಮಿಳು-ಕನ್ನಡ, ತೆಲುಗು-ಕನ್ನಡ ಈ ಮೊದಲಾದ ದ್ವಿಭಾಷಿಕ ನಿಘಂಟುಗಳು ಸಿದ್ಧವಾಗಬೇಕಾಗಿವೆ. ಮದರಾಸಿನ ಏಷ್ಯನ್ ಅಧ್ಯಯನಗಳ ಸಂಸ್ಥೆ ಉದ್ದೇಶಿಸಿರುವ ಬಹು

ಭಾಷಿಕ ನಿಘಂಟು ಇನ್ನೂ ಬಾಲ್ಯಾವಸ್ಥೆಯಲ್ಲಿದೆ. ಗಜಶಾಸ್ತ್ರ, ಅಶ್ವಶಾಸ್ತ್ರ, ಶಿಲ್ಪಶಾಸ್ತ್ರ, ಮಲ್ಲಶಾಸ್ತ್ರ ಇತ್ಯಾದಿ ವಿಶಿಷ್ಟ ವಿಷಯಗಳ ನಿಘಂಟುಗಳು ಕನ್ನಡದಲ್ಲಿ ಸಿದ್ಧವಾಗಬೇಕಾಗಿದ್ದು, ಈ ಬಗ್ಗೆ ಯಾರೂ ಯೋಚಿಸುತ್ತಿರುವಂತೆಯೇ ಇಲ್ಲ. ಈ ಬಗೆಯ ನಿಘಂಟುಗಳ ಸಿದ್ಧತೆಯನ್ನು ನಮ್ಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಾಹಿತ್ಯ ಪರಿಷತ್ತು ಹಾಗೂ ಸಾಹಿತ್ಯ ಅಕಾಡೆಮಿಗಳು ಗಂಭೀರವಾಗಿ ಪರಿಗಣಿಸಿ ತಾವೇ ಕೈಗೆತ್ತಿಕೊಳ್ಳಬಹುದಾಗಿದೆ. ಕೆಲವು ಪ್ರಾಚೀನ ಕನ್ನಡ ನಿಘಂಟುಗಳು ಪ್ರಕಟವಾಗಿದ್ದರೂ, ಇನ್ನೂ ಕೆಲವು ಹಸ್ತಪ್ರತಿಗಳ ರೂಪದಲ್ಲಿಯೇ ಉಳಿದುಕೊಂಡಿವೆ. ಅವು ಶೀಘ್ರವಾಗಿ ಬೆಳಕು ಕಾಣಬೇಕು.

ಸಾಹಿತ್ಯ ಚರಿತ್ರೆ ಸಾಂಸ್ಕೃತಿಕ ಚರಿತ್ರೆಗಳು ಅವಶ್ಯವಾಗಿ ಸಂಶೋಧನೆಯ ಭಾಗಗಳಾಗಿವೆ. ಮೊದಲನೆಯದು ಮುಖ್ಯವಾಗಿ ಕವಿಯ ಕಾಲದೇಶಾದಿ ವಿಚಾರ, ಕೃತಿಸ್ವರೂಪ-ಪರಿಚಯ, ಕೃತಿಯ ಸಾಮಾಜಿಕ ಸಾಂಸ್ಕೃತಿಕ ಸಂಗತಿಗಳ ಕ್ರೋಡೀಕರಣ, ಕೃತಿಯ ಸಾಮಾನ್ಯ ವಿಮರ್ಶೆ ಇತ್ಯಾದಿ ವಿವರಗಳನ್ನು ಒಳಕೊಂಡಿದ್ದು ಒಟ್ಟು ಸಾಹಿತ್ಯದ ಇತಿಹಾಸ ಇಲ್ಲಿ ಕಾಲಾನುಕ್ರಮದ ಇಲ್ಲವೆ ಪ್ರಕಾರಗಳ ಇಲ್ಲವೆ ಚಳವಳಿಗಳ ದೃಷ್ಟಿಕೋನದಿಂದ ನಿರೂಪಿತವಾಗುವುದನ್ನು ಕಾಣುತ್ತೇವೆ. ಬೆಂಗಳೂರು ವಿಶ್ವವಿದ್ಯಾನಿಲಯ ತನ್ನ ಸಮಗ್ರ ಸಾಹಿತ್ಯ ಚರಿತ್ರೆಯ ಯೋಜನೆಯನ್ನು ಬಲುಮಟ್ಟಿಗೆ ಪೂರೈಸಿದೆ ; ಮೈಸೂರು ವಿಶ್ವವಿದ್ಯಾನಿಲಯ ಇನ್ನೂ ಪೂರೈಸಬೇಕಾಗಿದೆ. ಇವುಗಳ ಗುಣದೋಷ ವಿಮರ್ಶೆ ಇಲ್ಲಿಗೆ ಪ್ರಸ್ತುತವಲ್ಲ. ಭಾಷೆ ಸಾಹಿತ್ಯಗಳ ಮೂಲಭೂತವಾದ ಕೆಲಸಗಳ ಪೂರೈಕೆಯಲ್ಲಿ ಸಹ ನಾವು ತೋರಿಸುತ್ತ ಬಂದಿರುವ ಅನಾದರ ಅಶ್ರದ್ಧೆಗಳನ್ನು ನೆನೆದಾಗ, ದಿಟವಾಗಿ ನಮ್ಮ ಬುದ್ಧಿದಾರಿದ್ರ್ಯ ವಿವೇಕಗಳನ್ನು ನಾವು ಹಳಿದುಕೊಳ್ಳಬೇಕಾಗಿದೆ. ಇವಲ್ಲದೆ ಉಳಿದ ಕೆಲವು ಅಭ್ಯಾಸಿಗಳ ಸಾಹಿತ್ಯ ಚರಿತ್ರೆಗಳಿವೆ ; ಅವುಗಳಿಗೆ ಹಲವು ಸೀಮಿತಗಳಿವೆ.

ಬಿಡಿ ಬಿಡಿಯಾಗಿ ನೋಡಿದಾಗ, ಪುನಃ ಪರಿಶೀಲನೆಗೆ ಒಳಪಡಬೇಕಾಗಿರುವ ಎಷ್ಟೋ ಕವಿಕಾವ್ಯ ಸಮಸ್ಯೆಗಳಿವೆ ; ಆದಕ್ಕೆ ಈ ಹಿಂದೆ ಆರ್. ನರಸಿಂಹಾಚಾರ್ಯರು-ಎ. ವೆಂಕಟಸುಬ್ಬಯ್ಯ ಇಂತಹ ವಿದ್ವಾಂಸರಿಗಿದ್ದ ಆಸಕ್ತಿ ಉತ್ಸಾಹಗಳೇ ಈಗ ಕಾಣುತ್ತಿಲ್ಲ. ಇವು ನೀರಸ ನಿರಾಕರ್ಷಕ ಪ್ರಯತ್ನಗಳೆಂಬುದಾಗಿ ಇಂದಿನ ತರುಣ ವಿದ್ವಾಂಸರಿಗೆ ತೋರುತ್ತಿರುವುದೇ ಇದರ ಕಾರಣವಿದ್ದರೂ ಇರಬಹುದು. ಈಚೆಗೆ ಎಂ. ಎಂ. ಕಲಬುರ್ಗಿ, ಹಂಪ ನಾಗರಾಜಯ್ಯ, ಎಸ್. ಶಿವಣ್ಣ ಇಂಥ ಕೆಲವರು ಉತ್ಸಾಹದಿಂದ ಕೆಲಸ ಮಾಡಿ ಬೆಲೆಯುಳ್ಳ ಕೊಡುಗೆಗಳನ್ನು ನೀಡಿದ್ದಾರೆ. ಆದರೆ ಒಂದು ಸಂಗತಿಯ ಕಡೆಗೆ ವಿಷಾದದಿಂದ ತಮ್ಮ ಗಮನವನ್ನು ಸೆಳೆಯಬೇಕಾಗಿದೆ. ಕವಿಕಾವ್ಯ ಸಂಬಂಧವಾದ ತೊಡಕುಗಳನ್ನು ಕುರಿತು ಚರ್ಚಿಸುವುದರಲ್ಲಿ, ನಿಷ್ಕರ್ಷೆಯ ನೆಲೆಗಳನ್ನು ತಲುಪುವುದರಲ್ಲಿ ನಮ್ಮ ಕಾಲದ ವಿದ್ವಾಂಸರು ಈಗೀಗ ನಯರುಚಿ

ಸಂಯಮಗಳನ್ನು ಕಳೆದುಕೊಳ್ಳುತ್ತಿದ್ದಾರೆ ; ಅದೂರದೃಷ್ಟಿಯ ದುಡುಕಿನ ಹೇಳಿಕೆಗಳನ್ನು ಕೊಡುತ್ತಿದ್ದಾರೆ ; ಅನಾವಶ್ಯಕವಾದ ಉದ್ರೇಕ ಪತ್ರಿಕಾ ಪ್ರಚಾರದ ಅತ್ಯುತ್ಸಾಹಗಳನ್ನು ತೋರಿಸುತ್ತಿದ್ದಾರೆ. ವಾಸ್ತವವಾಗಿ.ವಿದ್ವತ್ ಪತ್ರಿಕೆಗಳಲ್ಲಿ ತರ್ಕಬದ್ಧವೂ ಸವಿಸ್ತೃತವೂ ಆಗಿ ನೆಮ್ಮದಿಯಿಂದ ನಿರೂಪಣೆಗೊಳ್ಳಬೇಕಾದ ಸಂಗತಿಗಳು ದಿನಪತ್ರಿಕೆಗಳ ಹಸಿ ಬಿಸಿ ಸುದ್ದಿಗಳಾಗಿ ತೂರಿಹೋಗುತ್ತಿವೆ.

ಪ್ರಶಸ್ತಿ ಬಹುಮಾನಗಳಿಗೆ ಪಾತ್ರವಾಗಿ ಜನಮನ್ನಣೆಗಳಿಸಿದ ಒಂದು ಸಂಶೋಧನ ಕೃತಿ ಈಗ್ಗೆ ಸ್ವಲ್ಪ ಮೊದಲಷ್ಟೇ ಒಂದೆರಡು ವಿವಾದಗಳಿಗೂ ಕಾರಣವಾಯಿತು. ವಿವಾದ ಗ್ರಸ್ತವಾಗುವ ನಿಲುವುಗಳನ್ನು ತಳೆಯುವುದು ತಪ್ಪೇನಲ್ಲ ಎನ್ನುವಂತೆ ಅವನ್ನೂ ಅವಕ್ಕೆ ಕಾರಣರಾದವರನ್ನೂ ಸಮರ್ಥಿಸಲು ವಿದ್ವಾಂಸರು ಉತ್ಸುಕರಾದರು ; ಆದರೆ ಪರಂಪರೆಯ ಗ್ರಹಿಕೆಗಳನ್ನು ವಿವಾದದ ಗ್ರಾಸವನ್ನಾಗಿ ಮಾಡಿದ ನಿಲವು ನಿರ್ಣಯಗಳ ನೈಜವೇನೆಂದು ಸತ್ಯಶೋಧನೆ ವಸ್ತುನಿಷ್ಠತೆಗಳ ಮನೋಧರ್ಮದಿಂದ ತಿಳಿಯುವ ಸಂಶೋಧಕ ಪ್ರಯತ್ನ ಗಳನ್ನೇನೂ ಕೈಕೊಳ್ಳಲಿಲ್ಲ. ಈ ಕೃತಿಯಲ್ಲಿಯ ಸಾಹಿತ್ಯಚರಿತ್ರೆಯ ಭಾಗಗಳಲ್ಲಿ ಇಂತಹ ವಿವಾದಗ್ರಸ್ತ ಹೇಳಿಕೆಗಳು ಇನ್ನೂ ಹಲವು ಇರುತ್ತಿದ್ದು, ಇವು ಸಡಿಲವಾದ ಹಾಗೂ ಸರಿಯಲ್ಲದ ದೊಡ್ಡ ದೊಡ್ಡ ನಿರ್ಣಯಗಳ ರೂಪದಲ್ಲಿ ಕಾಣಿಸಿಕೊಂಡಿವೆ, ಸದೃಢವಾದ ಸಾಕ್ಷ್ಯಾಧಾರಗಳನ್ನು ಅವಲಂಬಿಸಿಲ್ಲ ಎಂದು ಪ್ರಮಾಣಿಸಲು ಅವಕಾಶವಿದೆ. ಈ ಕೃತಿ ಯಲ್ಲಿಯ ಉದಾಹೃತ ಪದ್ಯಗಳಲ್ಲಿ ಒಂದೆರಡಾದರೂ ತಪ್ಪಿಲ್ಲದೆ ಮುದ್ರಿತವಾಗಿದೆಯೇ ಎಂದು ಹುಡುಕಿ ಹುಡುಕಿ ನಾನು ನಿರಾಶೆಗೊಂಡೆ.

ಈಚೆಗೆ ಕನಕದಾಸ-ಪುರಂದರದಾಸರ ಪದಗಳಲ್ಲಿ ಅಂಕಿತಗಳ ವ್ಯತ್ಯಾಸದಿಂದ ಉಂಟಾಗಿರುವ ಗೊಂದಲವನ್ನು ಒಂದು ದಿನಪತ್ರಿಕೆ ಮೊದಲ ಪುಟದಲ್ಲಿ ಪ್ರಕಟಿಸಿ ಅದಕ್ಕೆ ದೊಡ್ಡ ಪ್ರಚಾರ ಕೊಟ್ಟಿತು. ಈ ಅಂಕಿತ ಪಲ್ಲಟ ಈ ಇಬ್ಬರ ವಿಷಯದಲ್ಲಿಯೇ ಇಲ್ಲದೆ ಇತರ ದಾಸರ ಪದಗಳಲ್ಲಿಯೂ ಕಂಡುಬರುತ್ತಿದ್ದು, ಕನ್ನಡಅಧ್ಯಯನ ಸಂಸ್ಥೆಯ ಹರಿದಾಸ ಸಾಹಿತ್ಯದ ಪ್ರಕಟನೆಗಳಲ್ಲಿ ಅಂಥವನ್ನು ಸಂದರ್ಭ ಬಂದಲ್ಲಿ ತೋರಿಸಿರುವುದನ್ನು ಯಾರಾ ದರೂ ಗಮನಿಸಬಹುದು. ಬ್ರಾಹ್ಮಣ ಹರಿದಾಸರ ಕೀರ್ತನೆಗಳಲ್ಲಿಯೇ ಇದು ನಡೆದಿದೆ. ಹೀಗಿರುವಾಗ ಕೃತಿಚೌರ್ಯದ ವ್ಯಾಖ್ಯೆಯನ್ನು ತಿಳಿಯದೆ, ಇವನ್ನು ಕೃತಿಚೌರ್ಯದ ಸಾಕ್ಷ್ಯಗಳನ್ನಾಗಿ ತಿಳಿಯಲಾಗಿದೆ ; ಅಲ್ಲದೆ ಜಾತೀಯತೆಯ ಬಣ್ಣ ಬಳಿದು, ಗ್ರಂಥ ಸಂಪಾದನಕಾರರು ಎದುರಿಸುವ ಒಂದು ಸಾಮಾನ್ಯ ಸಂದರ್ಭವನ್ನು, ಸಮಸ್ಯೆಯನ್ನು, ವಿಕೃತಗೊಳಿಸಿ ಜನಮನವನ್ನು ಕಲಕುವ ಪ್ರಯತ್ನವನ್ನು ಮಾಡಿದೆ.

ಇದು ನಮ್ಮ ವಿದ್ವಾಂಸರ ಪರಿ, ಇದು ನಮ್ಮ ಸಂಶೋಧನೆಯ ರೀತಿ. *

---

* ದಿನಾಂಕ ೨೧-೯-೯೧ರ ಶನಿವಾರ ಬೆಂಗಳೂರು ಗೋಖಲೆ ಸಾರ್ವಜನಿಕ ಸಂಸ್ಥೆಯ ಆವರಣದಲ್ಲಿ ನಡೆದ ಎಂ. ವಿ. ಸೀತಾರಾಮಯ್ಯನವರ ಸಂಸ್ಮರಣೆಯ ಸಂಶೋಧನ ಗೋಷ್ಠಿಯಲ್ಲಿ ಮಾಡಿದ 'ಸಂಶೋಧನೆ : ಇಂದು' ಎಂಬ ವಿಷಯದ ಉಪನ್ಯಾಸ.

# ಟಿಪ್ಪಣಿ ಮಾಡುವ ವಿಧಾನ

—ಡಾ|| **ಕೃಷ್ಣ ಪರಮೇಶ್ವರ ಭಟ್ಟ**

ಸಂಶೋಧನ ಬರವಣಿಗೆಗೆ ಪೂರ್ವಭಾವಿಯಾಗಿ ಸಂಶೋಧನ ವಿಷಯವನ್ನು ಕುರಿತು ಲಭ್ಯವಿರುವ ಪ್ರಕಟಿತ-ಅಪ್ರಕಟಿತ ಮಾಹಿತಿಗಳನ್ನೆಲ್ಲ ಓದಿ, ಟಿಪ್ಪಣಿ ರೂಪದಲ್ಲಿ ಸಂಗ್ರಹಿಸಿಕೊಳ್ಳುವುದು ಒಂದು ಆವಶ್ಯಕವಾದ ಸಿದ್ಧತೆಯಷ್ಟೇ. ಯಾವುದೇ ಸಂಶೋಧಕ ತನ್ನ ಸಂಶೋಧನ ಲೇಖನ ಯಾ ಕೃತಿಯಲ್ಲಿ ತಾನು ವಿವೇಚಿಸಬೇಕಾಗಿರುವ ವಿಷಯದಲ್ಲಿ ಈವರೆಗೆ ನಡೆದಿರುವ ಚರ್ಚೆ ಯಾ ಲಭ್ಯವಿರುವ ತಿಳುವಳಿಕೆಯನ್ನು ಸಂಗ್ರಹವಾಗಿ (ಓದುಗನಿಗೆ ಹಿನ್ನೆಲೆಯಾಗಿ) ನಿರೂಪಿಸಿ ಅನಂತರದಲ್ಲಿ ತಾನು ಹೊಸದಾಗಿ / ಹೆಚ್ಚಿನದಾಗಿ ಚರ್ಚಿಸಲಿರುವ ವಿಷಯವನ್ನು ವಿವರವಾಗಿ ನಿರೂಪಿಸುವುದು ಇಂದಿನ ಬಹುತೇಕ ಸಾಮಾಜಿಕ / ವೈಜ್ಞಾನಿಕ ಸಂಶೋಧನ ಲೇಖನಗಳಲ್ಲಿ ಕಂಡುಬರುವ ಒಂದು ಮಾದರಿಯಾಗಿದೆ. ಇದರಿಂದಾಗಿ ಸಂಶೋಧಕ ತನ್ನ ಆಯ್ಕೆಯ ಕ್ಷೇತ್ರದಲ್ಲಿ ನಡೆದ ಸಂಶೋಧನಗಳಿಗೆ ಎಷ್ಟರ ಮಟ್ಟಿಗೆ ಪರಿಚಿತನಾಗಿದ್ದಾನೆ ಹಾಗೂ ಆಯಾ ವಿಷಯವನ್ನು ಕುರಿತಂತೆ ಆತನ ಕೊಡುಗೆ ಏನು ಎಂಬುದು ಸ್ಪಷ್ಟವಾಗುತ್ತದೆ ; ಚರ್ವಿತಚರ್ವಣಗಳಿಗೆ ಅವಕಾಶ ಕಡಮೆಯಾಗುತ್ತದೆ.

ವಿಷಯಸಂಗ್ರಹಣದ ಸಂದರ್ಭದಲ್ಲಿ ಟಿಪ್ಪಣಿ ಮಾಡಿಕೊಳ್ಳುವುದು ಏಕೆ? ಇದು ಅನಿವಾರ್ಯವೇ? ಎಂಬ ಅಷ್ಟೊಂದು ಮುಖ್ಯವಲ್ಲದ ಪ್ರಶ್ನೆಗೆ ಹೀಗೆ ವಿವರಣೆ ಕೊಡಬಹುದು: ಒಂದು, ಚರ್ಚಿಸಬೇಕಾದ ವಿಷಯಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಮಾಹಿತಿ ಹಾಗೂ ಅಭಿಪ್ರಾಯಗಳೆಲ್ಲವನ್ನೂ ನೆನಪಿನಲ್ಲಿಟ್ಟುಕೊಳ್ಳುವುದು ಸಂಶೋಧಕನಿಗೆ ಕಷ್ಟಸಾಧ್ಯವಾದ ಸಂಗತಿ. ಮಾಹಿತಿ, ಚರ್ಚೆಗಳ ಪ್ರಮಾಣ ಹೆಚ್ಚಿದ್ದಷ್ಟೂ ಇದು ಅಸಾಧ್ಯವೇ ಆಗುತ್ತದೆ. ಎರಡು, ಲಭ್ಯವಿರುವ ಮಾಹಿತಿ, ಅಭಿಪ್ರಾಯಗಳನ್ನು ಬೇಕಾದ ರೀತಿಯಲ್ಲಿ ಕೃತಿಯಲ್ಲಿ ಅಳವಡಿಸಿಕೊಂಡು ಕೃತಿಗೆ ಒಂದು ವಿಶಿಷ್ಟವಾದ ಆಕಾರವನ್ನು ಕೊಡುವುದು ಸಾಧ್ಯವಾಗುತ್ತದೆ. ಮೂರು, ಸಂಗ್ರಹಿಸಿದ ಮಾಹಿತಿ, ಅಭಿಪ್ರಾಯಗಳನ್ನು ಸಂಶೋಧನ ಕೃತಿಯಲ್ಲಿ ಅಳವಡಿಸಿಕೊಳ್ಳುವುದರಷ್ಟೇ ಮುಖ್ಯವಾದದ್ದು ಆ ಮಾಹಿತಿ ಅಭಿಪ್ರಾಯಗಳು ಯಾರವು ? ಎಲ್ಲಿಂದ ದೊರೆತವು?—ಎಂಬುದು. ಇದರಿಂದಾಗಿ ಸಂಶೋಧಕನ ಹೇಳಿಕೆಗಳನ್ನು ಇತರರ ಹೇಳಿಕೆಗಳಿಂದ ಪ್ರತ್ಯೇಕಿಸಿ ನೋಡುವುದು ಸಾಧ್ಯವಾಗುವುದಲ್ಲದೇ ಯಾವುದೇ ಚರ್ಚೆ-ವಿಶ್ಲೇಷಣೆಗಳಿಗೆ ಸಂಬಂಧಿಸಿದಂತೆ ಯಾವ ಯಾವ ಸಂಶೋಧಕನ ಕೊಡುಗೆಯ ಪ್ರಮಾಣ ಎಷ್ಟು ಎಂಬುದನ್ನು ಓದುಗ ನಿರ್ಧರಿಸಲು ಸಾಧ್ಯ

ವಾಗುತ್ತದೆ. ಅಲ್ಲದೇ ಇದರಿಂದಾಗಿ ಇತರರ ಅಭಿಪ್ರಾಯಗಳನ್ನು ತಾಳಿನೋಡಲೂ ಸಾಧ್ಯವಾಗುತ್ತದೆ.

ಇನ್ನು ಟಿಪ್ಪಣಿಯಲ್ಲಿ ಯಾವ ಯಾವ ಅಂಶಗಳು ಸೇರಿರಬೇಕು ? ಹಾಗೂ ಅದನ್ನು ಮಾಡಿಕೊಳ್ಳುವುದು ಹೇಗೆ ?–ಎಂಬ ವಿಚಾರ. ಮೇಲುನೋಟಕ್ಕೆ ಇದು ತೀರ ಕ್ಷುಲ್ಲಕವಾದ ವಿಷಯ. ಆದರೆ ವಿಷಯಗ್ರಹಣದಲ್ಲಿ ಆಗುವ ದೋಷಗಳು ಹಾಗೂ ಕೃತಿಯಲ್ಲಿ ವಿಷಯ ನಿರೂಪಣೆಯ ಹಂತದಲ್ಲಿ ಆಗುವ ದೋಷಗಳಿಗೆ ಬಹುಮಟ್ಟಿಗೆ ದೋಷಪೂರ್ಣವಾದ ಟಿಪ್ಪಣಿಗಳೇ ಕಾರಣವಾಗುತ್ತದೆ. ಆದ್ದರಿಂದ ಟಿಪ್ಪಣಿ ಮಾಡಿಕೊಳ್ಳುವಾಗಲೇ ಹೆಚ್ಚು ಲಕ್ಷ್ಯವಹಿಸುವುದು ಒಳ್ಳೆಯದು.

ಉದ್ದೇಶಕ್ಕೆ ಅನುಗುಣವಾಗಿ ಟಿಪ್ಪಣಿಗಳಲ್ಲಿ ಎರಡು ವಿಧಗಳು : ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ಮಾತ್ರ ಬೇರೆ ಬೇರೆ ಲೇಖನ/ಕೃತಿಗಳಿಂದ ಮಾಹಿತಿ/ಅಭಿಪ್ರಾಯಗಳನ್ನು ಆಯ್ದು ಪ್ರತ್ಯೇಕ ಪಟ್ಟಿಕೆಗಳ ಮೇಲೆ ಬರೆದುಕೊಳ್ಳುವುದು ಒಂದು ವಿಧ. ಉದಾಹರಣೆಗೆ, 'ಹಗರಣ' ಎಂಬ ವಿಷಯ/ಪದವನ್ನು ಕುರಿತು ಲೇಖನವೊಂದನ್ನು ಬರೆಯಲು ಉದ್ದೇಶಿಸಿದ್ದರೆ, ಆ ಪದ ಅಥವಾ ಅದನ್ನು ಹೋಲುವ ಪದಗಳು (ಉದಾ-ಹಗರಣ, ಹಗಣ, ಹರಗಣ) ಎಲ್ಲೆಲ್ಲಿ ಬಳಕೆಯಾಗಿವೆಯೆಂಬುದನ್ನು ನೋಡಿ, ಆ ಪದಗಳನ್ನು ಅರ್ಥೈಸಲು ಬೇಕಾಗುವಷ್ಟು ವಾಕ್ಯಗಳನ್ನು ಮಾತ್ರ, ಪ್ರತಿಯೊಂದು ಮೂಲ ಆಕರಕ್ಕೂ ಪ್ರತ್ಯೇಕ ಪಟ್ಟಿಕೆಯನ್ನು ಬಳಸಿಕೊಂಡು, ಬರೆದುಕೊಳ್ಳುವುದು. ಹೀಗೆಯೇ, ಕವಿಯೊಬ್ಬ ತನ್ನ ಓದುಗನೊಡನೆ ಎಂತಹ ಸಂಬಂಧವನ್ನು ತನ್ನ ಕಾವ್ಯದಲ್ಲಿ ವ್ಯಕ್ತಪಡಿಸಿದ್ದಾನೆ ಎಂಬುದನ್ನು ಅಧ್ಯಯನ ಮಾಡುವುದೇ ಉದ್ದೇಶವಾಗಿದ್ದರೆ ಆ ಕವಿಯ ಕವನಗಳಲ್ಲಿ ಓದುಗನನ್ನು ನಿರ್ದೇಶಿಸುವ ಅಥವಾ ಸಂಬೋಧಿಸುವ ಸಾಲುಗಳನ್ನು ಮಾತ್ರ ಬರೆದುಕೊಂಡರೆ ಸಾಕಾಗುತ್ತದೆ. ಉಳಿದ ಕೃತಿಭಾಗಗಳನ್ನು ನಿರ್ಲಕ್ಷಿಸಿದರೂ ಹೆಚ್ಚಿನ ಸಂದರ್ಭಗಳಲ್ಲಿ ನಷ್ಟವೇನೂ ಆಗದು. ಇನ್ನು ಕೆಲವೊಮ್ಮೆ ನಿರ್ದಿಷ್ಟ ವಿಷಯವಾವುದನ್ನೂ ಕುರಿತಿರದೇ, ಸಂಶೋಧನೆಗೆ ಪೂರ್ವಸಿದ್ಧತೆಯಾಗಿ, ಪೂರಕವಾಗಿ, ಸಾಮಾನ್ಯ ಓದಿಗಾಗಿ (general reading) ಆಯ್ದುಕೊಳ್ಳುವ ಕೃತಿ/ಲೇಖನಗಳನ್ನು ಸಂಗ್ರಹಿಸಿ ಟಿಪ್ಪಣಿ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿ ಟಿಪ್ಪಣಿಯೆನ್ನುವುದು ಇಡೀ ಕೃತಿಯ ಸಾರಾಂಶವೇ ಆಗಿರುತ್ತದೆ. ಇದೇ ಟಿಪ್ಪಣಿಯ ಎರಡನೇ ವಿಧ.

ಯಾವುದೇ ವಿಧದ ಟಿಪ್ಪಣಿಯಲ್ಲಿಯೂ ಕಡ್ಡಾಯವಾಗಿ ಅನುಸರಿಸಲೇ ಬೇಕಾದ ಕೆಲವು ಸಂಗತಿಗಳಿರುತ್ತವೆ. ಅಂಥವುಗಳಲ್ಲಿ ಒಂದು, ಟಿಪ್ಪಣಿಗೆ ಆಕರವಾದ ಕೃತಿಯ ಲೇಖಕರು, ಶೀರ್ಷಿಕೆ ಹಾಗೂ ಅನುವಾದ ಅಥವಾ ಸಂಪಾದನೆಯಾಗಿದ್ದರೆ ಅನುವಾದಕ ಅಥವಾ ಸಂಪಾದಕರ ಹೆಸರುಗಳನ್ನು (ಇದೇ ಅನುಕ್ರಮದಲ್ಲಿ ಕೊಡುವುದು ಈಗ ಹೆಚ್ಚು ರೂಢಿಯಲ್ಲಿದೆ.) ತಪ್ಪಿಲ್ಲದೆ ಮೂಲದಲ್ಲಿ ಇದ್ದಂತೆ ಕೊಡುವುದು. ಉದಾಹರಣೆಗೆ, ಲೇಖಕರ ಹೆಸರು 'ಸಿದ್ದಲಿಂಗಯ್ಯ' ಎಂದಿದ್ದಲ್ಲಿ ಅದನ್ನು 'ಸಿದ್ಧಲಿಂಗಯ್ಯ' ಎಂದು

ಮಹಾಪ್ರಾಣ ಯುಕ್ತವಾಗಿ ಬರೆಯಬಾರದು ; ಲೇಖಕರು ತಮ್ಮ ಹೆಸರಿನ ಅಂಗವಾಗಿ 'ಅಯ್ಯಂಗಾರ್' ಎಂದು ಬರೆಯುತ್ತಿದ್ದರೆ ಅದನ್ನು ಹಾಗೆಯೇ ಉಳಿಸಿಕೊಳ್ಳಬೇಕಲ್ಲದೆ 'ಐಯಂಗಾರ್' ಎಂದಾಗಿ ಬದಲಾಯಿಸಬಾರದು. ಕೃತಿಯ ಶೀರ್ಷಿಕೆ 'ಅನಂತನಾಥ ಪುರಾಣಂ' ಎಂದಿದ್ದುದನ್ನು 'ಅನಂತನಾಥಪುರಾಣ' ಎಂದು ಬರೆದುಕೊಳ್ಳಕೂಡದು ; 'ವಿಕ್ರಮಾರ್ಜುನ ವಿಜಯಂ' ಎಂಬುದನ್ನು 'ಪಂಪ ಭಾರತ' ಎಂದಾಗಿ ಉಲ್ಲೇಖಿಸ ಕೂಡದು. ಟಿಪ್ಪಣಿಗಳಲ್ಲಿ ಹೆಸರು, ಶೀರ್ಷಿಕೆಗಳನ್ನು ಬದಲಾಯಿಸಿ ಬರೆದುಕೊಂಡಲ್ಲಿ ಅವೇ ಮುಂದೆ ಪ್ರಕಟಿತ ರೂಪಗಳಲ್ಲೂ ಕಾಣಿಸಿಕೊಳ್ಳುವ ಸಾಧ್ಯತೆ ಹೆಚ್ಚಾಗಿರುತ್ತವೆ. ಕನ್ನಡದ ಅನೇಕ ಸಂಶೋಧನ ಕೃತಿಗಳಲ್ಲಿಯ ಅಡಿಟಿಪ್ಪಣಿಗಳಲ್ಲಿಯ ಉಲ್ಲೇಖಗಳಲ್ಲಿ 'ಪಂಪಭಾರತ' 'ಕುಮಾರವ್ಯಾಸಭಾರತ' 'ಪಂಪರಾಮಾಯಣ' ಇತ್ಯಾದಿ ರೂಪಗಳು ಕಾಣಿಸಿಕೊಂಡಿರುವುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ಟಿಪ್ಪಣಿಸಿ ಕೊಳ್ಳಲು ಮರೆಯಬಾರದ ಇನ್ನೊಂದು ಸಂಗತಿ : ಟಿಪ್ಪಣಿಗೆ ಸಂಬಂಧಿಸಿದ ಆಕರದ ಮುದ್ರಣ ಸಂಖ್ಯೆ, ವರ್ಷ, ಪುಟಸಂಖ್ಯೆ ಇತ್ಯಾದಿ ಸಾಧ್ಯವಾದಷ್ಟು ವಿವರಗಳನ್ನು ಬರೆದಿಟ್ಟುಕೊಳ್ಳಬೇಕು. ಇದರಿಂದಾಗಿ ಮುಂದೆ ಈ ವಿವರಗಳಿಗಾಗಿ ಆಯಾ ಆಕಾರ ಗಳನ್ನು ಪುನಃ ಹುಡುಕಿಕೊಂಡು ಹೋಗುವ ಶ್ರಮ ತಪ್ಪುತ್ತದೆ ; ಕೆಲವೊಮ್ಮೆ ಆ ಆಕರ ಗಳು ಮತ್ತೆ ಸಿಗದೆಯೂ ಹೋಗಬಹುದು. ಪ್ರಕಟಣೆಗಳಲ್ಲಿ ಉದ್ಧರಣಗಳನ್ನು ಕುರಿತು ಮೂಲವನ್ನು ಉಲ್ಲೇಖಿಸುವಾಗ ಎಷ್ಟನೆಯ ಮುದ್ರಣ ಎಂಬುದನ್ನು ಹೇಳದೆ (ಒಂದ ಕ್ಕಿಂತ ಹೆಚ್ಚಿನ ಸಂಖ್ಯೆಯ ಮುದ್ರಣವಿದ್ದಲ್ಲಿ) ಕೇವಲ ಪುಟಸಂಖ್ಯೆಯನ್ನು ಕೊಡುವುದು ನಿರುಪಯುಕ್ತವಾಗುತ್ತದೆ. ಗಮನಿಸಬೇಕಾದ ಮೂರನೆಯ ಸಂಗತಿ: ಯಾವುದೇ ವಿಷಯ ವನ್ನು ಟಿಪ್ಪಣಿಸಿಕೊಳ್ಳುವಾಗ ಅದಕ್ಕೆ ಸಂಬಂಧಿಸಿದ, ಚರ್ಚಿಸಬೇಕಾದ ಬೇರೊಂದು ವಿಷಯ ನೆನಪಾದರೆ ಅಥವಾ ಆ ವಿಷಯವನ್ನು ಕುರಿತ ಸಂದೇಹ, ಭಿನ್ನಾಭಿಪ್ರಾಯಗಳು ತಲೆದೋರಿದರೆ ಟಿಪ್ಪಣಿಯಲ್ಲಿ ಯುಕ್ತಸ್ಥಳಗಳಲ್ಲಿ ಆವರಣದೊಳಗೆ ಬೇರೆ ಬಣ್ಣದ ಮಸಿಯಿಂದ ಅದನ್ನು ಬರೆದಿಟ್ಟುಕೊಳ್ಳಬಹುದು. ಇದಕ್ಕಿಂತ ಸುಲಭವಾದ ಮಾರ್ಗ ವೆಂದರೆ ಅದೇ ಬಣ್ಣದ ಮಸಿಯಿಂದಲೇ ಆವರಣದಲ್ಲಿ 'ಸ್ವ:' ಎಂದು ಬರೆದು ಮುಂದೆ ಸ್ವಂತದ ಅಭಿಪ್ರಾಯಗಳನ್ನು ಬರೆದುಕೊಳ್ಳುವುದು. ಟಿಪ್ಪಣಿ ಮಾಡುವ ಸಂದರ್ಭದಲ್ಲಿ ಹೊಳೆಯಬಹುದಾದ ಕೆಲವು ವಿಚಾರಗಳು ಅನಂತರದಲ್ಲಿ ಮರೆಯುವುದನ್ನು ಹೀಗೆ ತಪ್ಪಿಸಬಹುದು. ನೆನಪಿಡಬೇಕಾದ ನಾಲ್ಕನೆಯ ಸಂಗತಿ : ಬೇರೆ ಬೇರೆ ವಿಷಯಗಳನ್ನು ಕುರಿತ ಟಿಪ್ಪಣಿಗಳನ್ನು ಬೇರೆ ಬೇರೆ ಬಣ್ಣದ ಮಸಿಯನ್ನುಪಯೋಗಿಸಿಕೊಂಡು ಅಥವಾ ಇದಕ್ಕಿಂತ ಉತ್ತಮವಾದ ವಿಧಾನವಾಗಿ, ಬೇರೆ ಬೇರೆ ಬಣ್ಣದ ಪಟ್ಟಿಕೆಗಳಲ್ಲಿ ಬರೆದು ಕೊಳ್ಳುವುದು. ಇದರಿಂದಾಗಿ ಆಯಾ ವಿಷಯಗಳನ್ನು ಕುರಿತ ಟಿಪ್ಪಣಿಗಳನ್ನು ಒಂದೆಡೆಗೆ ಜೋಡಿಸಿಕೊಳ್ಳಲು ಅನುಕೂಲವಾಗುತ್ತದೆ.

ಇನ್ನು ಮುಂದೆ ಟಿಪ್ಪಣಿಯ ಎರಡನೇ ವಿಧವಾದ ಲೇಖನ/ಕೃತಿಗಳ ಸಾರಾಂಶ

ರೂಪದ ಟಿಪ್ಪಣಿಗಳ ಬಗೆಗೆ ಗಮನಹರಿಸಬಹುದು. ಇದನ್ನು ಒಂದೆರಡು ನಿರ್ದಿಷ್ಟ ಉದಾಹರಣೆಗಳೊಡನೆ ವಿವರಿಸುವುದು ಉತ್ತಮ.

ಉದಾ : 1. ಈ ಕೆಳಗೆ 'ಕನ್ನಡ ಜಾನಪದ ವಿಶ್ವಕೋಶ'ದಿಂದ ಆಯ್ದ 'ಖೆಡ್ಡಾ' ಎಂಬ ಪುಟ್ಟ ಲೇಖನವಿದೆ :

## ಖೆಡ್ಡಾ

ಕಾಡಾನೆಗಳನ್ನು ಹಿಡಿದು ಪಳಗಿಸುವ ಒಂದು ವಿಧಾನ. 'ಖೆಡ್ಡಾ' ಎನ್ನುವ ಹಿಂದು-ಸ್ತಾನಿ ಪದದ ಮೂಲಾರ್ಥ ಸಣ್ಣಗುಂಡಿ ಎಂದು. ಒಂದು ಕಾಲದಲ್ಲಿ ಕಾಡಾನೆಗಳನ್ನು ಹಿಡಿಯುವಾಗ ಕಂದಕಗಳನ್ನು ತೋಡುತ್ತಿದ್ದುದರಿಂದ ಈ ಪದಕ್ಕೆ ಇಂಥ ಅರ್ಥ ಬಂದಿದೆ. ಖೆಡ್ಡಾಕ್ಕೆ ಹಿಂದಿಯಲ್ಲಿ 'ಬಂಗಡಿ' ಎಂದೂ ಕನ್ನಡದಲ್ಲಿ 'ಆನೆಪಂಗಡಿ' ಎಂದೂ ಹೆಸರಿದೆ. ನೆಲಮಟ್ಟದಲ್ಲೇ ದಪ್ಪ ದಿಮ್ಮಿಗಳಿಂದ ದೊಡ್ಡ ಬೋನೊಂದನ್ನು ನಿರ್ಮಿಸಿ ಅದರಲ್ಲಿ ಆನೆಗಳನ್ನು ಬಂಧಿಸುವ ಖೆಡ್ಡಾ ವಿಧಾನ ಮೈಸೂರಿನ ವೈಶಿಷ್ಟ್ಯಗಳಲ್ಲೊಂದಾಗಿದೆ. ಸದ್ಯಕ್ಕೆ ಮೈಸೂರಿನ ಕಾಕನಕೋಟೆ ಕಾಡಿನ ಕಾರಾಪುರ, ಚಾಮರಾಜನಗರ ತಾಲ್ಲೂಕಿನ ಬೂದಿಪಡಗಗಳಲ್ಲಿ ಖೆಡ್ಡಾ ಕಾರ್ಯಾಚರಣೆ ನಡೆಯುತ್ತದೆ. ಇದರಿಂದ ಸರ್ಕಾರಕ್ಕೆ ಸ್ವಲ್ಪಮಟ್ಟಿನ ಲಾಭವೂ ಜನರಿಗೆ ಮನರಂಜನೆಯೂ ಒದಗುತ್ತದೆ.

ನದಿಯ ಒಂದು ಪಕ್ಕದಲ್ಲಿ ಖೆಡ್ಡಾದ ಬೋನನ್ನಿರಿಸಿ ಅದರ ಸುತ್ತ ೮ ರಿಂದ ೯ ಅಡಿ ಆಳದ ಕಂದಕವನ್ನು ನಿರ್ಮಿಸಲಾಗಿರುತ್ತದೆ. ಕಾಡಿನಲ್ಲಿ ಹರಡಿಕೊಂಡಿರುವ ಆನೆಗಳನ್ನು ನದಿಯ ಮುಖಾಂತರ ಅಟ್ಟಿ ಖೆಡ್ಡಾದೊಳಕ್ಕೆ ಸೇರಿಸುವುದು ಈ ಏರ್ಪಾಡಿನ ಉದ್ದೇಶ. ಖೆಡ್ಡಾಕ್ಕೆ ಮೂರು ಪ್ರವೇಶದ್ವಾರಗಳಿರುತ್ತವೆ. ಖೆಡ್ಡಾಕ್ಕೆ ಆನೆಗಳು ಪ್ರವೇಶಿಸಿ ಬರುವ ಆವರಣಗಳು ೫ ರಿಂದ ೧೦ ಮೈಲಿಗಳಷ್ಟು ವಿಸ್ತಾರವಾಗಿದ್ದು ಒಂದು ವಾರದವರೆಗೆ ಆನೆಗಳಿಗೆ ಸಾಕಾಗುವಷ್ಟು ನೀರು, ಹುಲ್ಲು ಮತ್ತಿತರ ಆಹಾರವಸ್ತುಗಳ ಸೌಲಭ್ಯವಿರುತ್ತದೆ.

ಆನೆಗಳನ್ನು ಸೆರೆಹಿಡಿಯುವುದಕ್ಕೆ ಮೂರು ತಿಂಗಳು ಮೊದಲೇ ಚಟುವಟಿಕೆ ಆರಂಭವಾಗುತ್ತದೆ. ಸಿದ್ಧತೆಗಳೆಲ್ಲ ಮುಗಿದ ಮೇಲೆ ಅರಣ್ಯಾಧಿಕಾರಿಗಳು ಸ್ಥಳೀಯ ಕಾಡುಕುರುಬರೇ ಮೊದಲಾದವರೊಡನೆ ಬೆಟ್ಟಪ್ರದೇಶಗಳಲ್ಲಿ ಕಾವಲು ನಿಂತು ಕಾಡಾನೆಗಳ ಸಂಚಾರವನ್ನು ಗಮನಿಸುತ್ತಾರೆ. ಮುದಿಯಾನೆಗಳೂ ಮರಿಯಾನೆಗಳೂ ಹೆಚ್ಚಾಗಿರದ ಹಿಂಡನ್ನು ಆವರಣದೊಳಗೆ ನುಗ್ಗಿಸುತ್ತಾರೆ. ಆವರಣಕ್ಕೆ ಬಂದ ಆನೆಗಳು ಹಿಂದಿರುಗಿ ಹೋಗದಂತೆ ಭದ್ರವಾದ ಕಾವಲಿರುತ್ತದೆ. ಹಗಲು-ರಾತ್ರಿಗಳೆನ್ನದೆ ಬೆಂಕಿ ಉರಿಸಲಾಗುತ್ತದೆ. ಬಿದಿರಿನ ಕಡಕುಗಳನ್ನು ಅಲ್ಲಾಡಿಸುವುದರ ಮೂಲಕ, ತಮಟೆ ಬಡಿಯುವುದರ ಮೂಲಕ ವಿಪರೀತ ಸದ್ದು ಮಾಡಿ ಆನೆಗಳು ಆವರಣ ಬಿಟ್ಟು ಹೋಗದಂತೆ ನೋಡಿಕೊಳ್ಳಲಾಗುತ್ತದೆ. ಆವರಣದೊಳಗೆ ಕೂಡಿದ ಆನೆಗಳನ್ನು ಪಳಗಿಸಿದ ಆನೆಗಳ ನೆರವಿನಿಂದ ನದಿಯೊಳಗೆ ಇಳಿಯುವಂತೆ ಮಾಡಲಾಗುತ್ತದೆ. ಶಿಕಾರಿಗಳೂ ಬೇಟೆ ಅಧಿಕಾರಿಗಳೂ ಅವುಗಳನ್ನು ಅಟ್ಟಿಸಿಕೊಂಡು ಹೋಗುವ ದೃಶ್ಯ ಆಕರ್ಷಕವಾಗಿರುತ್ತದೆ. ಹೀಗೆ ಅಟ್ಟಿಸಿಕೊಂಡು ಹೋದ ಆನೆಗಳನ್ನು ಪ್ರವೇಶದ್ವಾರದ ಮೂಲಕ ಖೆಡ್ಡಾದ ಆವರಣಕ್ಕೆ ನುಗ್ಗಿಸಿ ಕೂಡಲಾಗುತ್ತದೆ. ಎರಡು ದಿನಗಳ ಕಾಲ ಅವುಗಳಿಗೆ ಅಲ್ಲಿಯೇ ಸಮೃದ್ಧವಾಗಿ ನೀರು ಮತ್ತು ಮೇವನ್ನು ಒದಗಿಸಲಾಗುತ್ತದೆ. ಅನಂತರ ಒಂದೊಂದ

ನ್ನಾಗಿ ಹೊರಕ್ಕೆ ಬಿಟ್ಟುಕೊಂಡು ಕಾಲು ಮತ್ತು ಕೊರಳಿಗೆ ಭಾರಿಭಾರಿ ಹಗ್ಗಗಳನ್ನು ಬಿಗಿದು ಅಲ್ಲಿಂದ ಸಾಗಿಸಿಕೊಂಡು ಹೋಗಿ ಮರಗಳಿಗೆ ಕಟ್ಟಲಾಗುತ್ತದೆ. ಆನೆಗಳಿಗೆ ಹಗ್ಗ ಬಿಗಿಯುವ ಸ್ಥಳಕ್ಕೆ 'ರೋಪಿಂಗ್ ಸ್ಟಾಕೇಡ್' ಎಂದು ಹೆಸರು. ಬಂಧಿತ ಆನೆಗಳನ್ನು ಕರೆದೊಯ್ದು ಮರಗಳಿಗೆ ಕಟ್ಟಿ ಹಾಕುವ ಪ್ರದೇಶ 'ಫೀಲ್‌ಖಾನೆ' ಎಂದು ಕರೆಯಲ್ಪಡುತ್ತದೆ. ಹಗ್ಗದಿಂದ ಬಿಗಿದ ಆನೆಗಳನ್ನು ಪಳಗಿಸುವ ಕೆಲಸವನ್ನು ಅನುಭವಿಗಳಾದ ಮಾವುತರು ಬುದ್ಧಿವಂತಿಕೆಯಿಂದಲೂ ಚತುರತೆಯಿಂದಲೂ ನಿರ್ವಹಿಸುತ್ತಾರೆ. ಮೂರ್ನಾಲ್ಕು ತಿಂಗಳು ಕಳೆದ ಮೇಲೆ ಅವುಗಳಿಂದ ಕೆಲವು ಹಗುರವಾದ ಕೆಲಸಗಳನ್ನು ಮಾಡಿಸುತ್ತಾರೆ. ಪ್ರೌಢ ವಯಸ್ಸಿನ ಆನೆಗಳನ್ನು ಪಳಗಿಸಲು ಆರು ತಿಂಗಳಿಂದ ಒಂದು ವರ್ಷ ಹಿಡಿಯುತ್ತದೆ. ಕಿರಿವಯಸ್ಸಿನ ಆನೆಗಳನ್ನು ಪಳಗಿಸಲು ಮೂರು ತಿಂಗಳು ಸಾಕು. ಪಳಗಿಸಲಾಗದ ಹೆಚ್ಚು ವಯಸ್ಸಾದ ಆನೆಗಳನ್ನು ಮತ್ತೆ ಕಾಡಿಗೆ ಬಿಟ್ಟುಬಿಡಲಾಗುತ್ತದೆ.

ಬೆಳೆಗಳನ್ನು ನಾಶಪಡಿಸುವ ಆನೆಗಳನ್ನು ಹಿಡಿಯುವುದಕ್ಕಾಗಿ ೧೮೭೩ರಲ್ಲಿ ಖೆಡ್ಡಾ ಯೋಜನೆ ಆರಂಭವಾಯಿತು. ಇದಕ್ಕೆ ಮೊದಲು ಈ ದೊಡ್ಡ ಗುಳಿಯೊಂದಕ್ಕೆ ಆನೆಗಳು ಬೀಳುವಂತೆ ಮಾಡಿ ಅವುಗಳನ್ನು ಹಿಡಿಯಲಾಗುತ್ತಿತ್ತು. ಈ ಗುಳಿಗಳು ಇಪ್ಪತ್ತು ಅಡಿಯಷ್ಟು ಆಳವಾಗಿರುತ್ತಿದ್ದವು. ಗುಳಿಯ ಮೇಲ್ಭಾಗವನ್ನು ಬೊಂಬುಗಳಿಂದ ಮುಚ್ಚಿ ಅದರ ಮೇಲೆ ಮಣ್ಣನ್ನು ಹರಡಿ ಎಲೆ ಮತ್ತು ಸಣ್ಣ ಪುಟ್ಟ ಸಸ್ಯಗಳಿಂದ ಮುಚ್ಚಲಾಗಿರುತ್ತದೆ. ಸ್ವಲ್ಪ ದೂರದವರೆಗೆ ಭೂಮಿಯನ್ನು ಅಗೆದಿರಲಾಗುತ್ತದೆ. ಈ ಗುಳಿಗಳು ಮೊದಲ ವರ್ಷದಲ್ಲಿ ಪ್ರಯೋಜನಕ್ಕೆ ಬರುವುದಿಲ್ಲ. ಎರಡನೇ ವರ್ಷದಲ್ಲಿ ಗುಳಿಯ ಮೇಲೆ ಹರಡಿರುವ ಮಣ್ಣಿನ ಮೇಲೆ ಸಸಿಗಳು ಚಿಗುರೊಡೆದು ಹಚ್ಚಹಸುರಿನ ಹುಲ್ಲು ನಳನಳಿಸತೊಡಗಿದಾಗ ಆನೆಗಳು ಅವುಗಳಿಂದ ಆಕರ್ಷಿತವಾಗುತ್ತವೆ. ಆನೆಯೊಂದು ಹಸಿರು ಮೇವಿನ ಆಸೆಯಿಂದ ಬಂದು ಗುಂಡಿಯೊಳಕ್ಕೆ ಬಿದ್ದ ಮೇಲೆ ರಾಶಿಗಟ್ಟಲೆ ಮಣ್ಣನ್ನು ಒಳಗೆ ಸುರಿಯಲಾಗುತ್ತಿತ್ತು. ಗುಂಡಿಯ ಆಳವನ್ನು ಕಡಿಮೆ ಮಾಡುತ್ತಿದ್ದ ಆ ಮಣ್ಣಿನ ಮೇಲೆ ಆನೆ ಹತ್ತಿ ಹೊರಬರಲು ಪ್ರಯತ್ನಿಸುತ್ತದೆ. ಆಗ ಆ ಆನೆಯನ್ನು ಈ ಮೊದಲೇ ಪಳಗಿಸಲ್ಪಟ್ಟ ಆನೆಗಳು ಸುತ್ತುವರಿದು ತಪ್ಪಿಸಿಕೊಂಡು ಹೋಗದಂತೆ ಜಾಗ್ರತೆ ವಹಿಸುತ್ತಿದ್ದವು. ಅದೇ ವೇಳೆಗೆ ಕುರುಬರು ಆ ಆನೆಯ ಮೇಲೆ ಹಗ್ಗಗಳನ್ನೆಸೆದು ಬಂಧಿಸುತ್ತಿದ್ದರು.

ಮೈಸೂರಿನಲ್ಲಿ ಸ್ಯಾಂಡರ್‌ಸನ್ ಅವರಿಂದ ಪ್ರಾರಂಭವಾದ ಖೆಡ್ಡಾ ಯೋಜನೆ ೧೮೭೪ ರ ಜೂನ್ ತಿಂಗಳಲ್ಲಿ ನಡೆಸಿದ ಪ್ರಥಮ ಪ್ರಯೋಗದಲ್ಲೇ ಐವತ್ತೈದು ಆನೆಗಳನ್ನು ಹಿಡಿದು ಯಶಸ್ಸನ್ನು ಸಾಧಿಸಿತು. ಪ್ರಥಮ ಖೆಡ್ಡಾ ಏರ್ಪಾಡಾಗಿದ್ದುದು ಚಾಮರಾಜನಗರ ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದ ಹತ್ತಿರ.

ಇದು ವಿಶ್ವಕೋಶದಲ್ಲಿಯ ಲೇಖನವಾದುದರಿಂದ ಮಾಹಿತಿಗಳನ್ನು ಸಂಗ್ರಹರೂಪದಲ್ಲಿ ಒಳಗೊಂಡಿರುತ್ತದೆ ಹಾಗೂ ವಿಷಯವನ್ನು ಕುರಿತಾಗಿ ಲೇಖಕರ ವೈಯಕ್ತಿಕ ಅಭಿಪ್ರಾಯ/ಧೋರಣೆ ಇಲ್ಲಿರುವುದಿಲ್ಲ ಅಥವಾ ಇರುವುದು ಅನಪೇಕ್ಷಣೀಯ. ಕಮ್ಮಟವೊಂದರಲ್ಲಿ ಈ ಲೇಖನವನ್ನು ವಿದ್ಯಾರ್ಥಿಗಳು ಸಾರಾಂಶರೂಪಕ್ಕಿಳಿಸಿದವುಗಳಲ್ಲಿ ಪ್ರಕೃತ ಮೂರನ್ನು ನೋಡೋಣ. ಅವು ಹೀಗಿವೆ :

ಅ : "ಕಾಡಾನೆಗಳನ್ನು ಹಿಡಿದು ಪಳಗಿಸುವ ವಿಧಾನ. ಖೆಡ್ಡಾ-ಹಿಂದುಸ್ತಾನಿ ಪದ. ಕಾಡಾನೆ ಹಿಡಿಯುವಾಗ ಸಣ್ಣ ಕಂದಕ ತೋಡಿ ಆನೆ ಹಿಡಿಯುತ್ತಿದ್ದುದರಿಂದ ಈ ಪದ ಬಂದಿದೆ.

1873ರಲ್ಲಿ ಖೆಡ್ಡಾ ಯೋಜನೆ ಆರಂಭವಾಗಲು ಬೆಳೆಗಳನ್ನು ನಾಶಪಡಿಸುವ ಆನೆಗಳನ್ನು ಹಿಡಿಯುವದಕ್ಕಾಗಿ ಮೈಸೂರಿನಲ್ಲಿ ಸ್ಯಾಂಡರ್‌ಸನ್‌ರಿಂದ 1874ರಿಂದ ಆರಂಭವಾಗಿದೆ, ಪ್ರಥಮ ಖೆಡ್ಡಾ ಏರ್ಪಾಡಾದದ್ದು ಚಾಮರಾಜನಗರ ತಾಲೂಕಿನ ಬಿಳಿಗಿರಿರಂಗನಬೆಟ್ಟದ ಹತ್ತಿರ. ಖೆಡ್ಡಾ ತಂತ್ರ ಆಕರ್ಷಿತವಾದುದು ರೋಮಾಂಚಿತವಾದುದು."

ಆ : "ಖೆಡ್ಡಾ ಎಂದರೆ ಕಾಡಾನೆಗಳನ್ನು ಹಿಡಿದು ಪಳಗಿಸುವ ಒಂದು ವಿಧಾನ. ಇದು ಹಿಂದೂಸ್ತಾನಿ ಪದ. ಮೂಲ ಅರ್ಥ ಸಣ್ಣ ಗುಂಡಿ. ಕರ್ನಾಟಕದಲ್ಲಿ ಚಾಮರಾಜ ನಗರದ ಬಿಳಿಗಿರಿರಂಗನ ಬೆಟ್ಟದ ಹತ್ತಿರ ಪ್ರಥಮ ಖೆಡ್ಡಾ ಏರ್ಪಾಡಾಗಿದ್ದು ಮೈಸೂರಿನಲ್ಲಿ 1874ರ ಜೂನ್ ತಿಂಗಳಲ್ಲಿ ಸ್ಯಾಂಡರ್‌ಸನ್ ಅವರಿಂದ ಪ್ರಾರಂಭವಾಯಿತು. ಕಾಡಿನಲ್ಲಿ ಆನೆಗಳ ಸುಳಿವು ಹಿಡಿದು 3-4 ತಿಂಗಳು ಮೊದಲೆ ಕಾಡುಕುರುಬರು ಹಾಗೂ ಇನ್ನಿತರರ ಸಹಾಯದಿಂದ ಅವುಗಳನ್ನು ಖೆಡ್ಡಾ ಆವರಣದ ಕಡೆಗೆ ಓಡಿಸಿ ಆ ಆವರಣದಲ್ಲಿ ಬಂಧಿಸಿ 6 ತಿಂಗಳಿಂದ 1 ವರುಷದ ಒಳಗೆ ಪಳಗಿಸುತ್ತಾರೆ. ಪಳಗಿದ ಆನೆಗಳನ್ನು ಮರಗಳಿಗೆ ಕಟ್ಟುತ್ತಾರೆ. ಆನೆಗಳಿಗೆ ಹಗ್ಗ ಬಿಗಿಯುವುದಕ್ಕೆ ರೋಪಿಂಗ್ ಸ್ಟಾಕೇಡ್ ಎಂದು ಹೆಸರು. ಬಂಧಿತ ಆನೆಗಳನ್ನು ಕರೆದೊಯ್ದು ಮರಗಳಿಗೆ ಕಟ್ಟಿಹಾಕುವ ಪ್ರದೇಶ 'ಫೀಲ್‌ಖಾನ್' ಎಂದು ಕರೆಯುತ್ತಾರೆ. ಈ ಖೆಡ್ಡಾ ವಿಧಾನಕ್ಕೆ ಕನ್ನಡದಲ್ಲಿ 'ಆನೆಪಂಗಡಿ' ಹಿಂದಿಯಲ್ಲಿ 'ಬಂಗಡಿ' ಎಂದು ಕರೆಯುತ್ತಾರೆ."

ಇ : "ಕಾಡಾನೆಗಳನ್ನು ಹಿಡಿದು ಪಳಗಿಸುವ ಒಂದು ವಿಧಾನವಾದ 'ಖೆಡ್ಡಾ'ವು ಹಿಂದಿಯಲ್ಲಿ 'ಬಂಗಡಿ' ಕನ್ನಡದಲ್ಲಿ 'ಆನೆಪಂಗಡಿ' ಎಂಬ ಹೆಸರನ್ನು ಪಡೆದಿದೆ. ಕಾಡಿನಲ್ಲಿ ಹರಡಿಕೊಂಡಿರುವ ಆನೆಗಳನ್ನು ನದಿಯ ಮುಖಾಂತರ ಅಟ್ಟಿ ಖೆಡ್ಡಾದೊಳಕ್ಕೆ ಸೇರಿಸುವ ಈ ಕಾರ್ಯಾಚರಣೆಯು ಸದ್ಯಕ್ಕೆ ಮೈಸೂರಿನ ಕಾಕನಕೋಟೆ, ಬೂದಿಪಡಗಗಳಲ್ಲಿ ನಡೆಯುತ್ತದೆ. ಮೂರು ತಿಂಗಳ ಮೊದಲಿನಿಂದಲೇ ಸಿದ್ಧತೆಗಳನ್ನು ಮಾಡಿಕೊಂಡು, ಕಾಡಾನೆಗಳ ಸಂಚಾರವನ್ನು ಗಮನಿಸಿ, ಭದ್ರವಾದ ಕಾವಲು ಹಾಕಿ, ಆನೆಗಳನ್ನು ಆವರಣದೊಳಗೆ ನುಗ್ಗಿಸಿ, ಹಿಂದಕ್ಕೆ ಹೋಗದಂತೆ ಮಾಡಿ, ಬೆಂಕಿ ಉರಿಸಿ, ವಿಪರೀತ ಶಬ್ದ ಮಾಡಿ, ನದಿಯೊಳಗೆ ಇಳಿದ ಆನೆಗಳನ್ನು ಅಟ್ಟಿಸಿಕೊಂಡು ಹೋಗಿ ಖೆಡ್ಡಾದ ಆವರಣಕ್ಕೆ ನುಗ್ಗಿಸಿ, ಅಲ್ಲಿಯೇ ನೀರು ಮತ್ತು ಮೇವನ್ನು ಒದಗಿಸಿ, ಅನಂತರ ಹೊರಗೆ ಕರೆದುತಂದು ಅನುಭವಿ ಮಾವುತರ ಮೂಲಕ ಪಳಗಿಸಲಾಗುತ್ತದೆ.

ಬೆಳೆಗಳನ್ನು ನಾಶಪಡಿಸುವ ಆನೆಗಳನ್ನು ಹಿಡಿಯಲು, ಮೊದಲು ದೊಡ್ಡ ಗುಳಿಯೊಂದಕ್ಕೆ ಆನೆಗಳು ಬೀಳುವಂತೆ ಮಾಡಿ, ಗುಳಿಯ ಮೇಲ್ಭಾಗವನ್ನು ಬೊಂಬುಗಳಿಂದ ಮುಚ್ಚಿ, ಅದರಮೇಲೆ ಮಣ್ಣನ್ನು ಹರಡಿ, ಎಲೆ ಮತ್ತು ಸಸ್ಯಗಳಿಂದ ಮುಚ್ಚಿ, ಸ್ವಲ್ಪ ದೂರದವರೆಗೆ ಭೂಮಿಯನ್ನು ಅಗೆದು ಆನೆಗಳು ಆ ಪ್ರದೇಶಕ್ಕೆ ಬರುವಂತೆ ಆನೆಯ ಮೇಲೆ ಹಗ್ಗಗಳನ್ನೆಸೆದು ಬಂಧಿಸಿ, ಅವುಗಳನ್ನು ಖೆಡ್ಡಾಕ್ಕೆ ನುಗ್ಗಿಸುವರು."

ಈ ಮೇಲೆ ಮೂವರು ಸಂಶೋಧಕ ವಿದ್ಯಾರ್ಥಿಗಳ ಸಾರಾಂಶರೂಪದ ಟಿಪ್ಪಣಿಗಳು ಭಿನ್ನರೂಪದಲ್ಲಿವೆ ಎಂಬುದು ಮೇಲ್ನೋಟಕ್ಕೇ ಕಾಣುವ ಸಂಗತಿ. ಇದು ಸಹಜವೇ. ಏಕರೂಪತೆಯನ್ನು ನಿರೀಕ್ಷಿಸುವುದು ಸರಿಯೂ ಅಲ್ಲ. (ಇವುಗಳಲ್ಲಿಯ ವಾಕ್ಯದೋಷಗಳನ್ನು ಇಲ್ಲಿ ನಿರ್ಲಕ್ಷಿಸೋಣ.) ಆದರೆ ವಿಷಯನಿರೂಪಣೆಗೆ ಸಂಬಂಧಿಸಿದಂತೆ ಸಾಕಷ್ಟು ವ್ಯತ್ಯಾಸಗಳಿವೆ. ಈ ವ್ಯತ್ಯಾಸಗಳನ್ನು ಗಮನಿಸುವ ಮೊದಲು ಲೇಖನವು ಒಳಗೊಂಡಿರುವ ಸಂಗತಿಗಳನ್ನು ಅತಿಮುಖ್ಯವಾದವುಗಳು, ಮುಖ್ಯವಾದವುಗಳು, ಅಮುಖ್ಯ

ವಾದುವುಗಳು–ಹೀಗೆ ಹಲವು ಸ್ತರಗಳಲ್ಲಿ ಗುರುತಿಸಿಕೊಂಡು ಮೇಲ್‌ಸ್ತರದ (ಹೆಚ್ಚು ಮುಖ್ಯವಾದ) ಸಂಗತಿಗಳನ್ನು ಬಿಡದೇ ಅವನ್ನು ಕುರಿತು (ಕೆಳಸ್ತರದ ಸಂಗತಿಗಳಿಗಿಂತ) ಹೆಚ್ಚು ವಿವರಗಳು ಇರುವಂತೆ ನೋಡಿಕೊಳ್ಳಬೇಕು. ಉದಾಹರಣೆಗೆ ಈ ಮೇಲಿನ ಲೇಖನದಲ್ಲಿಯ ವಿಷಯಗಳನ್ನು ಮಹತ್ವಗಳಿಗೆ ಅನುಸಾರವಾಗಿ ಕೆಳಗಿನಂತೆ ವಿಂಗಡಿಸಿ ಕೊಳ್ಳಬಹುದು :

I. ಖೆಡ್ಡಾ ಎಂದರೆ ಏನು ? ಯಾಕೆ ರೂಢಿಗೆ ಬಂದಿತು ? ವಿಧಾನಗಳು (ಹಳೆಯ ಹಾಗೂ ಸುಧಾರಿತ ವಿಧಾನಗಳಾವುವು ?

II. ಯಾವಾಗ ಪ್ರಾರಂಭವಾಯಿತು ? ಯಾರಿಂದ ? ಮೊದಲು ಎಲ್ಲಿ ನಡೆಯಿತು ? ಈಗ ಎಲ್ಲಿ ನಡೆಯುತ್ತಿದೆ ?

III. ಖೆಡ್ಡಾ ಶಬ್ದದ ಅರ್ಥ. ಖೆಡ್ಡಾದಲ್ಲಿ ಪಾಲುಗೊಳ್ಳುವ ವ್ಯಕ್ತಿಗಳು ಇತ್ಯಾದಿ.

ಹೀಗೆ ಮೂರೇ ಸ್ತರಗಳಲ್ಲಿ ವಿಂಗಡಿಸಬೇಕೆಂದೇನೂ ಇಲ್ಲ ಮಹತ್ವಕ್ಕೆ ಅನುಗುಣವಾಗಿ ಹೆಚ್ಚು ಸ್ತರಗಳಾಗಿ ವಿಂಗಡಿಸಿಕೊಳ್ಳಬಹುದು. ಇಲ್ಲಿ ಮುಖ್ಯವಾದದ್ದೆಂದರೆ ಕಡಿಮೆ ಮಹತ್ವದ ಸಂಗತಿಗಳನ್ನು ಟಿಪ್ಪಣಿಸಿಕೊಳ್ಳುವಾಗ ಅವಕ್ಕಿಂತ ಹೆಚ್ಚು ಮಹತ್ವದ ಸಂಗತಿಗಳನ್ನು ಬಿಡಬಾರದು ಹಾಗೂ ಅವುಗಳಿಗೆ ಸಾಪೇಕ್ಷವಾಗಿ ಹೆಚ್ಚು ಅವಕಾಶವನ್ನು ಕೊಡಬೇಕು.

ಮೇಲೆ ಉದಾಹರಿಸಿದ ಮೂರು ಸಾರಾಂಶಲೇಖನಗಳಲ್ಲಿ ಮೊದಲನೆಯದರಲ್ಲಿ ಖೆಡ್ಡಾಯೋಜನೆಯ ಹಳೆ-ಹೊಸ ವಿಧಾನಗಳನ್ನು ಪ್ರಸ್ತಾಪಿಸಿಲ್ಲ ಹಾಗೂ ಸುಧಾರಣೆಯನ್ನು ಕುರಿತು ಹೇಳಿಲ್ಲ. ಹಳೆಯ ವಿಧಾನವು ಸಾಕಷ್ಟು ಕಾಲವನ್ನು ತೆಗೆದುಕೊಳ್ಳುವಂಥದೆಂಬುದನ್ನು ಸಾರಾಂಶಕಾರರು ಗ್ರಹಿಸಿಲ್ಲ. ಖೆಡ್ಡಾದ ವಿವರವನ್ನು ಸಂಪೂರ್ಣವಾಗಿ ಕೈಬಿಡಲಾಗಿದೆ. ಸ್ಥಳೀಯರಾದ ಕಾಡುಕುರುಬರ ಪಾತ್ರ ಮುಖ್ಯವೆಂಬುದನ್ನೂ ಗಮನಿಸಿಲ್ಲ. ಎರಡನೆಯದಾದ 'ಆ' ಉದಾಹರಣೆಯಲ್ಲಿಯೂ ಮುಖ್ಯ ವಿಚಾರವಾದ ಖೆಡ್ಡಾ ವಿಧಾನಗಳು–ಅದರಲ್ಲಾದ ಸುಧಾರಣೆಯನ್ನು ಗಮನಿಸಿಲ್ಲ. ಬದಲಾಗಿ ಅಮುಖ್ಯವಾದ ಕೆಲವು ಹೆಸರುಗಳನ್ನು ಪಟ್ಟಿಮಾಡಿದೆ. ಈ ಸಾರಾಂಶದಿಂದ ಖೆಡ್ಡಾ ವಿಧಾನದ ಕಲ್ಪನೆ ಮೂಡುವಂತಿಲ್ಲ. ಖೆಡ್ಡಾ ಯೋಜನೆ ರೂಪುಗೊಂಡುದರ ಕಾರಣವೂ ಇಲ್ಲಿ ತಿಳಿಯುವಂತಿಲ್ಲ. ಮೂರನೆಯ 'ಇ' ಉದಾಹರಣೆಯಲ್ಲಿ ಖೆಡ್ಡಾದ ಎರಡು ವಿಧಾನಗಳ ಪ್ರಸ್ತಾವವಿದ್ದರೂ ಅವು ಬೇರೆ ಬೇರೆ ಎಂಬುದು ಸ್ಪಷ್ಟವಾಗದೇ ಒಂದೇ ವಿಧಾನವೆಂಬಂತೆ ನಿರೂಪಿಸಲ್ಪಟ್ಟಿದೆ. ವಿಧಾನಗಳಲ್ಲಾದ ಸುಧಾರಣೆ ಏನು ? ಏಕೆ ? ಎಂಬುದನ್ನು ಹೇಳಿಲ್ಲ. ಸಾರಾಂಶಕಾರರು ಅದನ್ನು ಗ್ರಹಿಸಿಲ್ಲವೆಂಬುದು ಸ್ಪಷ್ಟವಾಗಿದೆ. ಖೆಡ್ಡಾ ವಿಧಾನವನ್ನು ವಿವರಿಸುವ ಮೊದಲ ಭಾಗದಲ್ಲಿ ಹೆಚ್ಚಿನ ಮಾಹಿತಿಯನ್ನೇನೂ ಕೊಡದೆ ಅನವಶ್ಯಕವಾಗಿ ಹೆಚ್ಚು ಪದಗಳನ್ನು ವ್ಯಯಿಸಲಾಗಿದೆ. ಖೆಡ್ಡಾ ಯಾವಾಗ, ಯಾರಿಂದ,

ಎಲ್ಲಿ ಪ್ರಾರಂಭವಾಯಿತೆಂಬುದರ ಹಾಗೂ ಕಾಡುಕುರುಬರ ಪಾತ್ರದ ಪ್ರಸ್ತಾವ ಇಲ್ಲ. 'ಇ' ಉದಾಹರಣೆ ಸಾಪೇಕ್ಷವಾಗಿ ಹೆಚ್ಚು ವಿಸ್ತಾರವಾಗಿದ್ದರೂ ಹೆಚ್ಚು ವಿಷಯಗಳು ಬಿಟ್ಟುಹೋಗಿವೆಯೆಂಬುದು ಗಮನಿಸಬೇಕಾದದ್ದು.

ಇಲ್ಲಿ ಹೇಳಲೇಬೇಕಾದ ಇನ್ನೊಂದು ಮಾತಿದೆ. ಟಿಪ್ಪಣಿಗಳು ಸ್ವಂತಕ್ಕಾಗಿ ಇರುವುದರಿಂದ ಅವು ಪೂರ್ಣ ವಾಕ್ಯರೂಪಗಳಿಂದ ಕೂಡಿರಬೇಕೆಂದೇನೂ ಇಲ್ಲ. ಉದಾಹರಣೆಗೆ, "ಖೆಡ್ಡಾ–ಕಾಡಾನೆ ಹಿಡಿದು ಪಳಗಿಸುವ ವಿಧಾನ; (ಹಿಂದುಸ್ತಾನಿ) ಖೆಡ್ಡಾ=(ಹಿಂದಿ.) ಬಂಗಡಿ, (ಕ.) ಆನೆ ಪಂಗಡಿ. ಸ್ಯಾಂಡರ್‌ಸನ್‌ನಿಂದ 1874ರಲ್ಲಿ, ಬಿಳಿಗಿರಿ ರಂಗನಬೆಟ್ಟದಲ್ಲಿ ಪ್ರಾರಂಭ" ಹೀಗೆ ಸಂಕ್ಷೇಪಿಸಿ ಬರೆದುಕೊಳ್ಳಬಹುದು. ಪೂರ್ಣ ವಾಕ್ಯಗಳಲ್ಲಿಯೇ ಸಂಕ್ಷೇಪಿಸುವುದಾದರೆ 'ಖೆಡ್ಡಾ' ಲೇಖನದ ಸಾರಾಂಶ ಸುಮಾರಾಗಿ ಹೀಗಿರಬೇಕು:

ಖೆಡ್ಡಾ : ಇದು (ಹಿಂದೂಸ್ತಾನಿ ಮೂಲ. ಅರ್ಥ 'ಗುಂಡಿ') ಕಾಡಾನೆಗಳನ್ನು ಹಿಡಿದು ಪಳಗಿಸುವ ಒಂದು ವಿಧಾನ. ಖೆಡ್ಡಾ ಕಾರ್ಯಾಚರಣೆ ಮೈಸೂರಿನ ಸುತ್ತ ಮುತ್ತ ರೂಢಿಯಲ್ಲಿದೆ. ನದಿಯ ತೀರದಲ್ಲಿ ನೆಲಮಟ್ಟದಲ್ಲಿ ಬೋನನ್ನಿರಿಸಿ, ಸುತ್ತ ಆಳವಾದ ಕಂದಕ ತೋಡಿ, ನದಿಯ ದಿಕ್ಕಿನಿಂದ ಆನೆಗಳನ್ನು ಅಟ್ಟಿಸಿಕೊಂಡು ಬಂದು ಬೋನಿನಲ್ಲಿ ಬೀಳಿಸಿ, ಬಂಧಿಸಲಾಗುತ್ತದೆ. ಇದಕ್ಕೆ ಮೊದಲೇ ಸಾಕಷ್ಟು ಆಹಾರ ಸಾಮಗ್ರಿಗಳನ್ನು ಸಂಗ್ರಹಿಸಿಟ್ಟುಕೊಳ್ಳಲಾಗುತ್ತದೆ. ಈ ಕಾರ್ಯಚರಣೆಯಲ್ಲಿ ಆನೆಗಳ ವಿಷಯವನ್ನು ಬಲ್ಲ ಸ್ಥಳೀಯ ಕಾಡುಕುರುಬರ ಸಹಾಯ ಪಡೆಯಲಾಗುತ್ತದೆ. ಬಂಧಿತ ಆನೆಗಳನ್ನು ಪಳಗಿಸಲಾಗುತ್ತದೆ : ಪಳಗಿಸಲಾರದವನ್ನು ಬಿಟ್ಟುಬಿಡಲಾಗುತ್ತದೆ. ಖೆಡ್ಡಾ ಯೋಜನೆ ಬೆಳೆಗಳನ್ನು ನಾಶಪಡಿಸುವ ಆನೆಗಳನ್ನು ಹಿಡಿಯಲು ಸ್ಯಾಂಡರ್‌ಸನ್ ಎಂಬುವನಿಂದ ರೂಪುಗೊಂಡಿತು. 1874ರಲ್ಲಿ ಮೊದಲ ಬಾರಿ ಬಿಳಿಗಿರಿರಂಗನ ಬೆಟ್ಟದ ಹತ್ತಿರ ಕಾರ್ಯಚರಣೆ ನಡೆದು 55 ಆನೆಗಳನ್ನು ಹಿಡಿಯಲಾಯಿತು. ಇದಕ್ಕೆ ಮೊದಲು ಬೇರೊಂದು ರೀತಿಯಲ್ಲಿ ಆನೆಗಳನ್ನು ಹಿಡಿಯಲಾಗುತ್ತಿತ್ತು. ಆಳವಾದ ಗುಳಿತೋಡಿ, ಬಿದಿರು ಬೊಂಬುಗಳಿಂದ ಅದನ್ನು ಮುಚ್ಚಿ. ಮಣ್ಣು ಹರಡಿ, ಹುಲ್ಲು ಬೆಳಸಿ, ಅದರಿಂದ ಆಕರ್ಷಿತವಾಗಿ ಆನೆಗಳು ಗುಳಿಗೆ ಬಂದು ಬಿದ್ದಾಗ ಅವನ್ನು ಬಂಧಿಸಿ, ಅನಂತರ ಮಾವುತರಿಂದ ಪಳಗಿಸಲಾಗುತ್ತಿತ್ತು. ಈ ರೀತಿಯ ಕಾರ್ಯಾಚರಣೆ 2–3 ವರ್ಷಗಳ ದೀರ್ಘಾವಧಿಯನ್ನು ತೆಗೆದುಕೊಳ್ಳುತ್ತಿತ್ತು.

ಆದರೆ ಹಿಂದೆಯೇ ಹೇಳಿದಂತೆ ಹೀಗೆ ಶುದ್ಧ ವಾಕ್ಯಗಳಲ್ಲಿ, ಕ್ರಮಬದ್ಧವಾಗಿ ಟಿಪ್ಪಣಿಮಾಡಿಕೊಳ್ಳುವುದು ಅನವಶ್ಯಕವಾಗುತ್ತದೆ. ಅನಪೇಕ್ಷಣೀಯವೂ ಹೌದು. ದೀರ್ಘಲೇಖನ ಅಥವಾ ಕೃತಿಗಳ ವಿಷಯದಲ್ಲಿ ಇದು ಅಸಾಧ್ಯವೂ ಹೌದು. ಮುಖ್ಯವೆನಿಸಿದ ಅಥವಾ ಭವಿಷ್ಯದಲ್ಲಿ ಉಪಯುಕ್ತವೆನಿಸಿದ ಆಲೋಚನೆಗಳನ್ನು ನೆನಪಿನಲ್ಲಿ ಉಳಿಯುವ ರೀತಿಯಲ್ಲಿ ಟಿಪ್ಪಣಿ ಮಾಡಿಕೊಳ್ಳಬೇಕೆಂಬುದಷ್ಟೇ ಇಲ್ಲಿ ಮುಖ್ಯವಾಗಿ ನೆನಪಿಡಬೇಕಿರುವುದು.

ಕೊನೆಯದಾಗಿ ಒಂದು ಮಾತನ್ನು ಹೇಳುವುದು ಇಲ್ಲಿ ಅಗತ್ಯವಾಗಿದೆ. ಒಮ್ಮೆ ಟಿಪ್ಪಣಿಗಳನ್ನು ಮಾಡಿಕೊಂಡನಂತರ ಸಂಶೋಧಕನಿಗೆ ಆಕರ ಸಾಮಗ್ರಿಗಳನ್ನು ಮತ್ತೆ

ಪರಿಶೀಲಿಸುವ ಅಗತ್ಯವಿಲ್ಲವೆಂದು ಭಾವಿಸಿದರೆ ತಪ್ಪಾದೀತು. ಪುನರ್‌ಪರಿಶೀಲನೆಯ ಅಗತ್ಯವು ಆಕರ ಸಾಮಗ್ರಿಯಲ್ಲಿ ಆಯಾ ವಿಷಯವು ಹೇಗೆ ನಿರೂಪಿತವಾಗಿದೆ (ಕೇವಲ ಪ್ರಸ್ತಾವ ಮಾತ್ರವಿದೆಯೇ ಅಥವಾ ವಿವರವಾಗಿ ಚರ್ಚಿತವಾಗಿದೆಯೇ) ಹಾಗೂ ಸಂಶೋಧಕನು ಆಯಾ ವಿಷಯಗಳನ್ನು ಹೇಗೆ ಬಳಸಿಕೊಳ್ಳುತ್ತಾನೆ (ಕೇವಲ ಮಾಹಿತಿಯಾಗಿ ಪರಿಗಣಿಸುತ್ತಾನೆಯೇ ಅಥವಾ ಅದನ್ನು ಚರ್ಚೆಯ ವಸ್ತುವಾಗಿ ಸ್ವೀಕರಿಸಿದ್ದಾನೆಯೇ) ಎಂಬುದನ್ನು ಅವಲಂಬಿಸಿದೆ.

# ಮೂವರು ಶ್ರೀವೈಷ್ಣವ ಹರಿದಾಸರು

—ನಾ. ಗೀತಾಚಾರ್ಯ

ಕನ್ನಡ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಪ್ರತ್ಯೇಕವಾಗಿ ಶ್ರೀವೈಷ್ಣವ ಹರಿದಾಸ ಸಾಹಿತ್ಯದ ಬೆಳವಣಿಗೆಯನ್ನು ಇತ್ತೀಚೆಗೆ ದೊರೆತಿರುವ ಮೂವರು ಶ್ರೀವೈಷ್ಣವ ಕೀರ್ತನ ಕಾರರ ಹಿನ್ನೆಲೆಯಲ್ಲಿ ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೧

ದ್ವೈತಸಿದ್ಧಾಂತ ಪ್ರವರ್ತಕರಾದ ಮಧ್ವಾಚಾರ್ಯರ ತತ್ವಗಳಿಗೆ ಅನುಗುಣವಾಗಿ ಹರಿಸ್ತುತಿಯನ್ನು ಮಾಡುವ ಕೀರ್ತನೆಗಳನ್ನೂ ಕೃತಿಗಳನ್ನೂ ರಚಿಸಿದ ಹರಿಭಕ್ತರನ್ನು 'ಹರಿದಾಸರು' ಎಂದು ಸ್ಥೂಲವಾಗಿ ಹೇಳಲಾಗುತ್ತದೆ. ಮಧ್ವಮತಾನುಯಾಯಿಗಳಲ್ಲದ ಕೆಲವರು ತಮ್ಮನ್ನೂ ಹರಿದಾಸರೆಂದೇ ಕರೆದುಕೊಂಡು ಈ ಪರಂಪರೆಯಲ್ಲಿ ಬೆಳೆದು ಬಂದಿರುವುದನ್ನು ಮೊದಲಿನಿಂದಲೂ ಕಾಣಬಹುದು (ಕನಕದಾಸರು–ಪೂರ್ವದಲ್ಲಿ ಶ್ರೀವೈಷ್ಣವ ಆಚಾರ್ಯರ ಶಿಷ್ಯರಾಗಿದ್ದರು. ಬೇಲೂರು ವೈಕುಂಠದಾಸರು ಶ್ರೀವೈಷ್ಣವರು. ಮಹೀಪತಿದಾಸರು, ತಿಮ್ಮಪ್ಪದಾಸರು ಅದ್ವೈತಿಗಳು) ಹೀಗಾಗಿ ಹರಿದಾಸ ಸಾಹಿತ್ಯದ ಮುಖ್ಯವಾಹಿನಿ ದ್ವೈತವಾದರೂ ಅದ್ವೈತ ವಿಶಿಷ್ಟಾದ್ವೈತಗಳೂ ಜೊತೆಜೊತೆ ಯಾಗಿಯೇ ಬೆಳೆದು ಬಂದಿವೆ ಎನ್ನಬಹುದು.

ಸಾಮಾನ್ಯವಾಗಿ ಕೃತಿರಚನೆ ಮಾಡುವವರು ಕ್ರಮಬದ್ಧವಾಗಿ ಗುರುವಿನಿಂದ 'ದಾಸದೀಕ್ಷೆ'ಯನ್ನೂ 'ಅಂಕಿತ'ವನ್ನೂ ಪಡೆದಿರುತ್ತಾರೆ. ವಿಠಲ ಅಂಕಿತ ದಾಸಸಾಹಿತ್ಯ ದಲ್ಲಿ ಹಾಸುಹೊಕ್ಕಾಗಿದೆ. "ಈ ಭಕ್ತಿಪಂಥಕ್ಕೆ ವಿಠಲನಿಂದ ದೊರೆತ ಆಶೀರ್ವಾದ ವರ್ಣಿಸಲಸದಳ.... ಕನ್ನಡ ಹರಿದಾಸರ ಅಂಕಿತದೊಂದಿಗೆ ವಿಠಲನ ಹೆಸರು ಬಹುಮಟ್ಟಿಗೆ ಅವಿಭಾಜ್ಯ ಅಂಗವಾಯಿತು." [1] ಎಂಬ ಮಾತು ಬಹಳ ಗಮನಾರ್ಹವಾದದ್ದು. "ಈ 'ವಿಠಲ' ಅಂಕಿತ ಮಧ್ವಮತಾನುಯಾಯಿ ದಾಸರದ್ದು. ಇದಕ್ಕೆ ಭಿನ್ನವಾಗಿ ಮಧ್ವೇತರ ಭಾಗವತ ಸಂಪ್ರದಾಯದ ಹರಿದಾಸರು ಕ್ರಮಬದ್ಧವಾದ 'ದಾಸದೀಕ್ಷೆ' ಮತ್ತು 'ಅಂಕಿತ' ವನ್ನು ಗುರುಮುಖೇನ ಪಡೆದಿದ್ದರೆಂಬುದರ ಬಗ್ಗೆ ಸ್ಪಷ್ಟ ನಿದರ್ಶನಗಳು ಲಭ್ಯವಾಗುವು ದಿಲ್ಲ. ಆದ್ದರಿಂದಲೇ ಇವರೂ "ದಾಸ' ಎಂದಷ್ಟೇ ಉಪಲಕ್ಷಿತರಾಗಿದ್ದಾರೆ" [2] ಎಂಬ

1. ಡಾ॥ ಜಿ. ವರದರಾಜರಾವ್, ಶ್ರೀಪಾದರಾಯರ ಕೃತಿಗಳು, ಪುಟ. 20 (ಪೀಠಿಕೆ)
2. ಎಂ.ವಿ. ಸೀತಾರಾಮಯ್ಯ, ಹರಿದಾಸರು ಮತ್ತು ಅನುಭವ ಕವಿಗಳು, ಪುಟ. 3

ಮಾತಿನಿಂದ ಪ್ರತ್ಯೇಕಿಸುವ ಪ್ರಯತ್ನ ಮಾಡಲಾಗಿದೆ. ಈ ಬಗ್ಗೆ ವಿವರವಾದ ಚರ್ಚೆಗೆ ಅವಕಾಶವಿದೆ.

ಕರ್ನಾಟಕದಲ್ಲಿ ವಿಶಿಷ್ಟಾದ್ವೈತ ಹನ್ನೆರಡನೆಯ ಶತಮಾನದಿಂದಲೇ ಕಾಣಿಸಿಕೊಂಡರೂ ಜನಸಾಮಾನ್ಯರ ನಡುವೆ ಬೆಳೆಯಲಿಲ್ಲ. ಕಾರಣ ಇದರ ಧಾರ್ಮಿಕ ಆಚರಣೆಗಳು ತಮಿಳು ಭಾಷೆಯಲ್ಲಿದ್ದುದು ಮತ್ತು ಮತೀಯ ಗ್ರಂಥಗಳು ಸಂಸ್ಕೃತ, ದ್ರಾವಿಡ (ತಮಿಳು) ಪ್ರಬಂಧಗಳಾಗಿದ್ದುದು ಎಂಬ ಮಾತಿದೆ. ರಾಮಾನುಜಾಚಾರ್ಯರು ಈ ಧರ್ಮದ ತಿರುಳನ್ನು ಎಲ್ಲರಿಗೂ ತಿಳಿಯುವಂತೆ ಸಾರ್ವಜನಿಕವಾಗಿ ಪ್ರಕಟಿಸುವುದರ ಮೂಲಕ ಸಾಮಾನ್ಯ ಜನರನ್ನೂ ಈ ಧರ್ಮದತ್ತ ಸೆಳೆದು ಭಕ್ತರನ್ನಾಗಿ ಅನುಯಾಯಿಗಳನ್ನಾಗಿ ಮಾಡಿದರೇ ವಿನಾ ಮತೀಯ ಆಚರಣೆಯ ವಿಧಿವಿಧಾನಗಳಲ್ಲಿ ಸೆಲೆಗೊಳಿಸಲಿಲ್ಲ. ಆದ್ದರಿಂದ ಅನ್ಯಮತೀಯರು ಶ್ರೀವೈಷ್ಣವ ಮತಾನುಯಾಯಿಗಳಾದರೂ ಶ್ರೀವೈಷ್ಣವ ಬ್ರಾಹ್ಮಣರಾಗಲಿಲ್ಲ ಎಂಬುದನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕು. ಆದ್ದರಿಂದ ವಿಶಿಷ್ಟಾದ್ವೈತವನ್ನು ಪ್ರತಿಪಾದಿಸುವ ಗ್ರಂಥಗಳು ಕನ್ನಡದಲ್ಲಿ ಪ್ರಸಾರಗೊಳ್ಳಲೂ ಇಲ್ಲ. ಸೃಷ್ಟಿಯಾಗಲೂ ಇಲ್ಲ. ಆದರೂ ಕನಕದಾಸರ ಕೀರ್ತನೆಗಳಲ್ಲಿ ವಿಶೇಷವಾಗಿ 'ಮೋಹನ ತರಂಗಿಣಿ'ಯಲ್ಲಿ ವಿಶಿಷ್ಟಾದ್ವೈತ ತತ್ವ ಪ್ರತಿಪಾದನೆಯಾಗಿರುವ ಹಿನ್ನೆಲೆಯಲ್ಲಿ ಅವರು ಶ್ರೀವೈಷ್ಣವ ಮತಾನುಯಾಯಿಗಳಾಗಿದ್ದಿರಬಹುದೆಂಬ ಅಭಿಪ್ರಾಯ ಮತ್ತು ವಾದಿರಾಜರ ಸಮಕಾಲೀನರಾದ ಬೇಲೂರು ವೈಕುಂಠದಾಸರು ಶ್ರೀವೈಷ್ಣವರೇ ಆಗಿದ್ದರೆಂಬುದು ಕನ್ನಡದಲ್ಲಿ ಶ್ರೀವೈಷ್ಣವದಾಸರೂ ಸಾಹಿತ್ಯರಚನಯಲ್ಲಿ ತೊಡಗಿದ್ದರೆಂಬ ಚರ್ಚೆಗೆ ಅವಕಾಶ ಮಾಡಿಕೊಡುತ್ತದೆ. ವಿದ್ವಾಂಸರು ಇದಮಿತ್ಥಂ ಎಂದು ಹೇಳಲಾಗದ ಕುಮಾರವ್ಯಾಸ, ಲಕ್ಷ್ಮೀಶ ಮುಂತಾದ ಪ್ರಮುಖ ಕವಿಗಳ ಮತವನ್ನು ಶ್ರೀವೈಷ್ಣವತ್ವದ ದೃಷ್ಟಿಯಲ್ಲಿ ಪುನರಾಲೋಚಿಸಲು ಸಾಧ್ಯವಿದೆ.

ಹಾಗೆ ನೋಡಿದರೆ ಹರಿದಾಸ ಸಾಹಿತ್ಯ ನಾಲ್ಕನೇ ಘಟ್ಟದ ನಂತರ ಬೆಳೆದದ್ದು ಶ್ರೀವೈಷ್ಣವ ಸಾಹಿತ್ಯದಲ್ಲಿಯೇ. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ರಾಜಧರ್ಮವಾಗಿ ಪ್ರವರ್ಧಮಾನಕ್ಕೆ ಬಂದ ಶ್ರೀವೈಷ್ಣವ ಧರ್ಮ ಸಹಜವಾಗಿ, ವ್ಯಾಪಕವಾಗಿ ಬೆಳೆಯಿತು. ಶ್ರೀವೈಷ್ಣವಧರ್ಮ–ಮತ–ತತ್ವಗಳನ್ನು ಕನ್ನಡದಲ್ಲಿ ಪ್ರತಿಪಾದಿಸುವ ಕಾರ್ಯಕ್ಕೆ ಸ್ವತಃ ರಾಜನೇ ತೊಡಗಿದ್ದುದರಿಂದ ಅನೇಕ ಜನ ಕವಿಗಳೂ ಪಾಲ್ಗೊಂಡು ಹಲವಾರು ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದರು. ತಿರುಮಲಾರ್ಯನ 'ಗೀತಗೋಪಾಲ' (1700) ಚಿಕುಪಾಧ್ಯಾಯನ 'ದಿವ್ಯಸೂರಿಚರಿತೆ' (1700) ಚಿಕದೇವರಾಜನ 'ಚಿಕದೇವರಾಜ ಬಿನ್ನಪ' (1700) ಮುಂತಾದ ಕೃತಿಗಳು ಶ್ರೀವೈಷ್ಣವ ಮತ–ತತ್ವವನ್ನು ನೇರವಾಗಿ ಕನ್ನಡದಲ್ಲಿ ತಿಳಿಯ ಹೇಳುವ ಮೊದಲ ಪ್ರಯತ್ನವಾಗಿವೆ. ಚಿಕದೇವರಾಜಒಡೆಯರ ಆಳ್ವಿಕೆಯಲ್ಲಿ ಶ್ರೀವೈಷ್ಣವ ಮತಕ್ಕೆ ರಾಜರ ಬೆಂಬಲ ದೊರೆಯಿತು. ವಿಶಿಷ್ಟಾದ್ವೈತ ತತ್ವವನ್ನು ಕನ್ನಡದಲ್ಲಿ ತಿಳಿಯ ಹೇಳುವ ಕಾರ್ಯಕ್ಕೆ ಇಂಬು ದೊರೆಯಿತು. ಹರಿದಾಸ ಸಾಹಿತ್ಯದ

ಕೀರ್ತನ ಪ್ರಕಾರವನ್ನು ಶ್ರೀವೈಷ್ಣವ ಕವಿಗಳು ಬಳಸಿಕೊಂಡರು"[3] ಎಂಬ ಮಾತಿನಲ್ಲಿ ಇಡೀ ಶ್ರೀವೈಷ್ಣವ ಸಾಹಿತ್ಯ ನಿರ್ಮಾಣವೇ ಹರಿದಾಸ ಪರಂಪರೆಯ ಮುಂದುವರಿಕೆ ಎಂದು ಗ್ರಹಿಸಲಾಗಿದೆ. ಆದರೆ ಇದು 'ಭಕ್ತಿ ಪ್ರಧಾನವಾದ ಸಾಹಿತ್ಯ' ಎಂಬ ಅರ್ಥದಲ್ಲಾದರೆ ಸರಿ. ಕೀರ್ತನ ರೂಪದ ಸಾಹಿತ್ಯದ ಅರ್ಥದಲ್ಲಿ ಶ್ರೀವೈಷ್ಣವ ಸಾಹಿತ್ಯದಲ್ಲಿ ಕೀರ್ತನೆ ಅಷ್ಟು ಪ್ರಧಾನವಾಗಿ ಕಂಡುಬಂದಿಲ್ಲ ಎಂದೇ ಹೇಳಬೇಕು. ಚಿಕದೇವರಾಜನ ಹೆಸರಿನಲ್ಲಿದ್ದರೂ ತಿರುಮಲಾರ್ಯನದ್ದೆಂದು ವಿದ್ವಾಂಸರು ಅಭಿಪ್ರಾಯಪಡುವ 'ಗೀತ ಗೋಪಾಲ'ವನ್ನು ಬಿಟ್ಟರೆ ಉಳಿದವೆಲ್ಲ ಗದ್ಯ, ಚಂಪೂ, ಟೀಕು, ನಾಟಕ, ಸಾಂಗತ್ಯ, ಷಟ್ಪದಿ ಮುಂತಾದ ಬೇರೆ ಬೇರೆ ಪ್ರಕಾರಗಳಲ್ಲಿವೆ. "ಹರಿಸಂಕೀರ್ತನೆಗಳ ಭಂಡಾರಕ್ಕೆ ಗೀತಗೋಪಾಲವು ಉನ್ನತವಾದ ಅಲ್ಲದಿದ್ದರೂ ತುಂಬ ಮೆಚ್ಚುವಂಥ ಗೀತನಿಧಿಯನ್ನು ನೀಡಿರುತ್ತದೆ. ಶ್ರೀವೈಷ್ಣವ ಸಂಪ್ರದಾಯದ ಗೀತೆಗಳಲ್ಲಿಯಂತೂ ಕನ್ನಡದಲ್ಲಿ ಇದೇ ಮೊದಲನೆಯದು"[4] ಎಂಬ ಹೆಗ್ಗಳಿಕೆಗೆ ಪಾತ್ರವಾದ ಇದೊಂದೇ ಕೃತಿ ಈ ಕಾಲದಲ್ಲಿ ಹರಿದಾಸ ಸಾಹಿತ್ಯದ ಮುಂದುವರಿಕೆಗೆ ಕೊಂಡಿಯಾಗಿದೆ ಎಂದು ಹೇಳಬಹುದು.

೨

ಬೇಲೂರು ವೈಕುಂಠದಾಸರು, ಕನಕದಾಸರು ಮತ್ತು ತಿರುಮಲಾರ್ಯ ಇವರು ಮಾತ್ರ ಕೀರ್ತನ ಸಾಹಿತ್ಯದಲ್ಲಿ ಶ್ರೀವೈಷ್ಣವ ಮತವನ್ನು ಪ್ರತಿಪಾದಿಸಿರುವ ಕವಿಗಳೆನಿಸಿದ್ದಾರೆ. ತಿರುಮಲಾರ್ಯರ ನಂತರ ಕೀರ್ತನ ಸಾಹಿತ್ಯ ಅದ್ವೈತದಲ್ಲಿ ಕಾಣಿಸಿಕೊಂಡಂತೆ, (ಚಿದಾನಂದಾವಧೂತ, ಮುಹಲಿಂಗ, ತಿಮ್ಮಪ್ಪದಾಸ ಮುಂತಾದವರು) ದ್ವೈತ ಕೀರ್ತನಕಾರರು ಮುಂದುವರೆದಂತೆ ವಿಶಿಷ್ಟಾದ್ವೈತ ಪರಂಪರೆಯ ಕೀರ್ತನಕಾರರು ಈವರೆಗೆ ಉಪಲಬ್ಧವಾಗಿರಲಿಲ್ಲ. ಇತ್ತೀಚೆಗೆ ದೊರಕಿರುವ ಮೂವರು ಕೀರ್ತನಕಾರರು ಈ ಕೊರತೆಯನ್ನು ತುಂಬಿಕೀರ್ತನ ಸಾಹಿತ್ಯದಲ್ಲಿ ಶ್ರೀವೈಷ್ಣವ ಪರಂಪರೆಯನ್ನು ದೃಢಪಡಿಸಿದ್ದಾರೆ.

ರಂಗದಾಸರು (1830–1910) ಶಾಮಶರ್ಮರು (1891–1973) ಮತ್ತು ನಾರಾಯಣಶರ್ಮರು (912–1992) ಈ ಮೂವರೂ ಸ್ಪಷ್ಟವಾಗಿ ವಿಶಿಷ್ಟಾದ್ವೈತ ತತ್ವವನ್ನು ಪ್ರತಿಪಾದಿಸುವ ಶ್ರೀವೈಷ್ಣವ ಸಂಪ್ರದಾಯದ ಹರಿದಾಸರಾಗಿದ್ದಾರೆ. ಇವರಲ್ಲಿ

3. ಎಂ ವಿ. ಸೀ : ಹರಿದಾಸರು ಮತ್ತು ಅನುಭಾವ ಕವಿಗಳು ಪುಟ. 5. ಡಾ|| ರಂಶ್ರೀ ಮುಗಳಿ ಅವರೂ ಇದೇ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಪುಟ. 30)

4. ರಂ. ಶ್ರೀ. ಮುಗಳಿ. ಕನ್ನಡ ಸಾಹಿತ್ಯ ಚರಿತ್ರೆ ಪುಟ. 303, 1978.

ರಂಗದಾಸರು ಮತ್ತು ನಾರಾಯಣಶರ್ಮರ ಕೀರ್ತನೆಗಳು ಪ್ರಕಟವಾಗಿದ್ದು ಶಾಮಶರ್ಮರ ಕೀರ್ತನೆಗಳು ಇನ್ನೂ ಬೆಳಕು ಕಾಣಬೇಕಾಗಿದೆ.[5]

೧. **ರಂಗದಾಸರು** : 19ನೇ ಶತಮಾನದಲ್ಲಿ ಆಗಿಹೋದ ರಂಗದಾಸರು ತುಮಕೂರು ಬಳಿಯ ಮಾದಗೋನ ಹಳ್ಳಿಯವರು. 'ರಂಗದಾಸರು' ಎಂದೇ ತಮ್ಮ ಹೆಸರನ್ನು ರೂಢಿಸಿಕೊಂಡಿರುವ ಕೀರ್ತನಕಾರರು ಕೀರ್ತನೆಗಳನ್ನಲ್ಲದೆ ಶ್ರೀವೈಷ್ಣವ ಮತವಿಚಾರಕ್ಕೆ ಸಂಬಂಧಿಸಿದಂತೆ ನಾಲ್ಕು ಕೃತಿಗಳನ್ನೂ ಬರೆದಿದ್ದಾರೆ. ತಮ್ಮ ಊರಿನ ರಂಗನಾಥಸ್ವಾಮಿಯ ಅರ್ಚಕರಾಗಿದ್ದು ಅರ್ಚಾಮೂರ್ತಿಯ ಹೆಸರಿನಲ್ಲೇ ಅಂಕಿತವನ್ನು ಇಟ್ಟುಕೊಂಡು 16 ಕೀರ್ತನೆಗಳನ್ನು ರಚಿಸಿದ್ದಾರೆ. ಇವರ ಎಲ್ಲ ಕೀರ್ತನೆಗಳಲ್ಲೂ 'ಶ್ರೀ ಗುರುರಂಗೇಶ,' 'ಮಹದೇವಪುರ ಶ್ರೀರಂಗ' ಎಂಬ ಅಂಕಿತಗಳು ದೊರಕುತ್ತವೆ.

ರಂಗದಾಸರ ತಂದೆ–ತಾಯಿಗಳ ಹೆಸರು ಲಭ್ಯವಿಲ್ಲ. ರಂಗದಾಸರು ಲಗ್ನವಾಗಿದ್ದರಾದರೂ ತಾರುಣ್ಯದಲ್ಲಿ ಹೆಂಡತಿ ತೀರಿಹೋಗಿದ್ದು ಅನಂತರ ತಮ್ಮ ಅಣ್ಣನ ಕುಟುಂಬವನ್ನೇ ಪೋಷಿಸುತ್ತ ದಾಸದೀಕ್ಷೆಯನ್ನು ಪಡೆದು ಬ್ರಹ್ಮಚರ್ಯ ಜೀವನವನ್ನು ಪಾಲಿಸಿದ್ದಂತೆ ಕಾಣಿಸುತ್ತದೆ. ಸ್ವವಿವರಗಳನ್ನು ರಂಗದಾಸರು ಎಲ್ಲಿಯೂ ಹೇಳಿಕೊಂಡಿಲ್ಲ. ಅವರ ವಂಶಸ್ಥರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಕುಟ್ಟಿದ ಅವಲಕ್ಕಿ, ಹಾಲು, ಹಣ್ಣು ಇಷ್ಟನ್ನೇ ಆಹಾರವಾಗಿ ಸ್ವೀಕರಿಸುತ್ತ ಮತ ಸಂಪ್ರದಾಯದ ಮಡಿವಂತ ಆಚರಣೆಯಲ್ಲಿ ಮಠದ ಮನೆಯಲ್ಲಿ[6] ವಾಸಿಸುತ್ತ ಧ್ಯಾನ–ಆರಾಧನೆ–ಅಧ್ಯಯನ–ಮತಪ್ರಚಾರದಲ್ಲಿ ಕಾಲಕಳೆಯುತ್ತ ಸಾತ್ವಿಕಜೀವನ ಸಾಗಿಸಿದರೆಂದು ತಿಳಿದುಬರುತ್ತದೆ.

ರಂಗದಾಸರ ಕೀರ್ತನೆಗಳು ಭಕ್ತನೊಬ್ಬನ ಅಂತರಂಗ ನಿವೇದನೆಯ ರೂಪದಲ್ಲಿ ಮೋಕ್ಷಸಾಧನವಾಗಿ ಕಾಣಿಸಿಕೊಂಡಿದ್ದು ; ದಾಸರ ಜೀವನ ಸಾಧನೆಯ, ಶ್ರೀ ವೈಷ್ಣವ ಮತ ದರ್ಶನದ ಕುರುಹಾಗಿಯೂ ಗೋಚರವಾಗುತ್ತವೆ. ಕೀರ್ತನೆಯ ಎಲ್ಲ ಸಾಮಾನ್ಯ ಲಕ್ಷಣಗಳನ್ನು ಒಳಗೊಂಡಿರುವುದರ ಜೊತೆಗೆ ವಿಶಿಷ್ಟಾದ್ವೈತ ಪ್ರತಿಪಾದನೆ ಬಹಳ ಸ್ಪಷ್ಟವಾಗಿ ಮೂಡಿಬಂದಿದೆ.

೨. **ಶಾಮಶರ್ಮರು** : ಎಚ್. ಪುಟ್ಟಶಾಮಶರ್ಮಾ ಎಂಬ ನಿಜ ನಾಮಧೇಯವನ್ನು ಹೊಂದಿದ್ದ ಇವರು ತಮ್ಮನ್ನು 'ಶಾಮಶರ್ಮದಾಸ' ಎಂದು ಕೀರ್ತನೆ

---

5. ಈ ಎರಡೂ ಕೃತಿಗಳನ್ನು ಈ ಲೇಖಕನೇ ಸಂಪಾದಿಸಿದ್ದು ನಾರಾಯಣಶರ್ಮ ಸಂಸ್ಕೃತಿ ಕೇಂದ್ರ, ದೊಡ್ಡಹೆಜ್ಜಾಜಿಯಿಂದ 1993–94ರಲ್ಲಿ ಪ್ರಕಟಿಸಿದೆ. ಅಪ್ರಕಟಿತ ಕೀರ್ತನೆಗಳು ಈ ಲೇಖಕನ ಸಂಗ್ರಹದಲ್ಲಿವೆ.

6. ರಂಗದಾಸರು ವಾಸಿಸುತ್ತಿದ್ದ ಮನೆಯನ್ನು 'ಮಠದ ಮನೆ' ಎಂದು ಕರೆಯುತ್ತಿದ್ದುದು ಮಾದಗೋನಹಳ್ಳಿಯಲ್ಲಿ ಪ್ರಚಲಿತವಾಗಿದೆ. ರಂಗನಾಥಸ್ವಾಮಿ ದೇವಾಲಯದ ಆವರಣದಲ್ಲೇ ಈ ಮನೆಯಿದ್ದು ಅವರು ಊರಿನಲ್ಲಿದ್ದಾಗಲೆಲ್ಲ ಈ ಮನೆಯಲ್ಲಿದ್ದು ಸದಾ ಅಧ್ಯಯನ ನಿರತರಾಗಿರುತ್ತಿದ್ದರೆಂದು ಪ್ರತೀತಿಯಿದೆ.

ಗಳ ಕರ್ತೃವಾಗಿ ಕರೆದು ಕೊಂಡಿದ್ದಾರೆ. 23-8-1891ರಲ್ಲಿ ಬೆಂಗಳೂರು ಜಿಲ್ಲೆ ದೊಡ್ಡ ಬಳ್ಳಾಪುರ ತಾಲ್ಲೂಕು ದೊಡ್ಡಹೆಜ್ಜಾಜಿಯಲ್ಲಿ ರಂಗಸ್ವಾಮಿ ಮತ್ತು ರಂಗಮ್ಮಾಳ್ ಅವರ ಮಗನಾಗಿ ಶ್ರೀವೈಷ್ಣವ ಕುಟುಂಬದಲ್ಲಿ ಜನಿಸಿ, ಬಾಲ್ಯವಿದ್ಯಾಭ್ಯಾಸವನ್ನು ಸ್ವಸ್ಥಳದಲ್ಲೇ ಮುಗಿಸಿ, ಖಾಸಗಿಯಾಗಿ ಎಲ್. ಎಸ್. ತೇರ್ಗಡೆ ಹೊಂದಿ ಮೈಸೂರಿನಲ್ಲಿ ಅಪ್ಪರ್ ಸೆಕೆಂಡರಿ ಗಳಿಸಿ ಉಪಾಧ್ಯಾಯ ವೃತ್ತಿಯನ್ನು ಕೈಗೊಂಡಿದ್ದರು. ಹೆಂಡತಿ ವೆಂಕಟಮ್ಮಾಳ್‌ನವರೊಂದಿಗೆ ಸಾಂಸಾರಿಕ ಜೀವನ ನಡೆಸಿ ಇಬ್ಬರು ಹೆಣ್ಣು ಮಕ್ಕಳನ್ನು ಪಡೆದು ಪುತ್ರಸಿಗಾಗಿ ದೇವರಲ್ಲಿ ಹರಕೆ ಹೊತ್ತು ಪ್ರತಿದಿನ ಬೆಳಗಿನಜಾವ ಊರಿನಲ್ಲಿ ದೇವರನಾಮುಗಳನ್ನು ಹಾಡುತ್ತ ಭಜನೆ ಮಾಡುತ್ತಾ ದೇವರನ್ನು ಆರಾಧಿಸುತ್ತಿದ್ದರು. ಈ ಅವಿರತ ಸಾಧನೆಯ ಫಲವೋ ಎಂಬಂತೆ ಪುತ್ರಪ್ರಾಪ್ತಿಯನ್ನೂ ಪಡೆದು ಮುಂದೆ ಪ್ರಪತ್ತಿ ಮಾರ್ಗವನ್ನು ಅನುಸರಿಸಿ ಆರಾಧ್ಯದೇವ ದೊಡ್ಡಹೆಜ್ಜಾಜಿಯ ಚನ್ನಕೇಶವನನ್ನು ಅಂಕಿತವಾಗಿಟ್ಟುಕೊಂಡು 'ಜಾಜಿಕೇಶವನ' ಸ್ತುತಿಯಲ್ಲಿ ಮೋಕ್ಷಸಾಧನೆಯ ಮಾರ್ಗವನ್ನು ಕಂಡುಕೊಂಡು 1973ರಲ್ಲಿ ಕಾಲವಾದ ಶಾಮಶರ್ಮರು 'ಜಾಜೀಶ', 'ಹೆಜ್ಜಾಜಿ ಪುರವಾಸ' ಮುಂತಾದ ಅಂಕಿತಗಳಲ್ಲಿ 113 ಕೀರ್ತನೆಗಳನ್ನು ರಚಿಸಿದ್ದಾರೆ.

ತಾವು ಬದುಕಿರುವಾಗಲೇ ಈ ಕೀರ್ತನೆಗಳನ್ನು ಪ್ರಕಟಿಸಬೇಕೆಂದು ಹಲವು ಬಾರಿ ಪ್ರಯತ್ನಿಸಿ ವಿಫಲರಾಗಿರುವುದನ್ನು ಕೀರ್ತನೆಗಳಿಗೆ ಬರೆದಿರುವ ಮೊದಲ ಮಾತಿನಲ್ಲಿ ಕಾಣಬಹುದು. ಪ್ರಕಾಶಕರ ಮತ್ತು ಮುದ್ರಕರ ಹೆಸರನ್ನು ಮಾತ್ರ ಬಿಟ್ಟುಕೊಂಡು 'ಮೊದಲ ಮಾತ'ನ್ನು ಸಿದ್ಧಪಡಿಸಿದ್ದರೂ ಅದು ಈವರೆಗೆ ಪ್ರಕಟನೆಯ ಯೋಗವನ್ನು ಕಂಡಿಲ್ಲ. ಒಂದೆರಡು ಕೀರ್ತನೆಗಳು ಹೊಸಕೆರೆ ಚಿದಂಬರಯ್ಯನವರ 'ಭಕ್ತ ಬಂಧು' ಪತ್ರಿಕೆಯಲ್ಲಿ ಪ್ರಕಟವಾಗಿದ್ದುದನ್ನು, ಹಲವಾರು ಜನ ಇವರಿಂದ ಕೀರ್ತನೆಗಳನ್ನು ಹಾಡಿಸಿ ಕೇಳಿ ಆನಂದ ಪಟ್ಟಿರುವುದನ್ನು ದಾಸರು ಮೊದಲ ಮಾತಿನಲ್ಲಿ ಕೃತಜ್ಞತೆಯಿಂದ ಸ್ಮರಿಸಿದ್ದಾರೆ. ಈ ಎಲ್ಲ ಕೀರ್ತನೆಗಳೂ ಈ ಲೇಖಕನ ವಶಕ್ಕೆ ಬಂದನಂತರ ಬೇರೆಡೆ ಚದುರಿ ಹೋಗಿದ್ದಲ್ಲಿ ಅವುಗಳನ್ನು ಸಂಗ್ರಹಿಸುವ ಉದ್ದೇಶದಿಂದ ಕೆಲವು ಕೀರ್ತನೆಗಳೊಂದಿಗೆ ದಾಸರ ಬಗೆಗೆ ಒಂದು ಟಿಪ್ಪಣಿಯನ್ನು ಪ್ರಕಟಿಸಲಾಗಿತ್ತು.[7] ಈವರೆಗೂ ಈ ಕೀರ್ತನೆಗಳು ಅಪ್ರಕಟಿತವಾಗಿಯೇ ಇವೆ. ಕೀರ್ತನೆಗಳ ಜೊತೆಗೆ ಶಾಮಶರ್ಮರು ನಾಲ್ಕು ನಾಮಾವಳಿಗಳನ್ನೂ ಬರೆದಿದ್ದಾರೆ.

ಶಾಮಶರ್ಮರ ಕೀರ್ತನೆಗಳಲ್ಲಿ ಭಾವಪರವಶತೆ, ಭಕ್ತಿಯ ಅನನ್ಯತೆ, ಧನ್ಯತೆಯ ಭಾವ, ದೈವಸಾಕ್ಷಾತ್ಕಾರ ಅತ್ಯಂತ ಪರಿಣಾಮಕಾರಿಯಾಗಿ ಮೂಡಿ ಬಂದಿವೆ. ಇವರ ಕೀರ್ತನೆಗಳಲ್ಲಿಯೂ ಕೀರ್ತನ ಸಾಹಿತ್ಯದ ಎಲ್ಲ ಲಕ್ಷಣಗಳ ಜೊತೆಗೆ ವಿಶಿಷ್ಟಾದ್ವೈತ ತತ್ವದ ಪ್ರತಿಪಾದನೆ ನಿಚ್ಚಳವಾಗಿದೆ.

---

7. ಲೋಚನ ಸಂ: ೧ ಸಂ: ೨ ಪುಟ. ೩ ಡಿಸೆಂಬರ್ 83, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

೩. **ನಾರಾಯಣ ಶರ್ಮ** : ಎಚ್. ವಿ. ನಾರಾಯಣಸ್ವಾಮಿ ಎಂಬ ನಿಜ ನಾಮವನ್ನು ಹೊಂದಿದ್ದ ಇವರು 22.4.1912 ರಲ್ಲಿ ಜನಿಸಿ 9.4.1992 ರಲ್ಲಿ ದೈವಾಧೀನರಾದರು. ಎಂಬತ್ತು ವರ್ಷಗಳ ತುಂಬು ಜೀವನ ನಡೆಸಿದ ಕೀರ್ತನಕಾರರು ತಮ್ಮ ಕೃತಿಗಳಿಗೆ 'ನಾರಾಯಣಶರ್ಮದಾಸ' ಎಂದು ಹೆಸರಿಸಿಕೊಂಡಿದ್ದಾರೆ. ಶ್ರೀವೈಷ್ಣವ ಸಾತ್ವಿಕ ದಂಪತಿಗಳಾದ ವೆಂಕಟರಂಗನ್ (ಅಪ್ಪಯ್ಯಣ್ಣ) ಮತ್ತು ತಾಯಮ್ಮಾಳ್ ಅವರಿಗೆ ಎರಡನೇ ಮಗನಾಗಿಜನಿಸಿ ಕಡುಬಡತನದಲ್ಲಿ ಬಾಲ್ಯ ಕಳೆದರು. ತಂದೆ ಪ್ರತಿನಿತ್ಯ ದೈವಧ್ಯಾನ ಅರ್ಚನೆಯಲ್ಲಿ ತೊಡಗಿ, ಕೆಲವೊಮ್ಮೆ ದೇವರನಾಮ ಹಾಡುತ್ತ, ಶಾಸ್ತ್ರ ಹೇಳುತ್ತ ಉಪಾದಾನ ಮಾಡಿ ಕುಟುಂಬವನ್ನು ಸಾಕಿದವರು. ನಾರಾಯಣಶರ್ಮರು ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ ಎಲ್.ಎಸ್. ಪಾಸುಮಾಡಿ ಕೆಲವು ಕಾಲ ಬೆಂಗಳೂರಿನ ಎ.ಆರ್.ಪಿ. ಸಂಸ್ಥೆಯಲ್ಲಿ ಕೆಲಸಮಾಡಿ ನಂತರ ಸರ್ಕಾರಿ ಉಪಾಧ್ಯಾಯ ವೃತ್ತಿಯಲ್ಲಿ ಸೇವೆ ಸಲ್ಲಿಸಿ 1974ರಲ್ಲಿ ನಿವೃತ್ತಿ ಹೊಂದಿದರು. ಹೆಂಡತಿ ಲಕ್ಷ್ಮೀದೇವಿ ಅವರೊಂದಿಗೆ ನಾಲ್ಕುಜನ ಹೆಣ್ಣುಮಕ್ಕಳ ನಂತರ ಇಬ್ಬರು ಗಂಡುಮಕ್ಕಳನ್ನು ಪಡೆದು ವೃತ್ತಿಯ ಜೊತೆಗೇ ಜಪ-ತಪ-ಧ್ಯಾನ-ಆರಾಧನೆ ಅಧ್ಯಯನಗಳಲ್ಲಿ ಮನಸ್ಸಿಟ್ಟಿದ್ದರು. ನಿವೃತ್ತಿಯ ನಂತರ ಅದನ್ನೇ ಪೂರ್ಣವಾಗಿ ತೊಡಗಿಸಿಕೊಂಡು ಪ್ರಪತ್ತಿಮಾರ್ಗವನ್ನು ಕೈಗೊಂಡು ಜೀವನ ಸಾಗಿಸಿದರು.

ನಾರಾಯಣಶರ್ಮರ 26 ಕೀರ್ತನೆಗಳು ಪ್ರಕಟವಾಗಿದ್ದು ಇನ್ನೂ ಕೆಲವು ದೊರಕುವ ಸಂಭವವಿದೆ. ಕೀರ್ತನೆಗಳ ಜೊತೆಗೆ ವಿಶಿಷ್ಟಾದ್ವೈತ ಸಂಪ್ರದಾಯಕ್ಕೆ ಸೇರಿದ ಏಳು ಧಾರ್ಮಿಕ ಕೃತಿಗಳನ್ನೂ ಬರೆದಿದ್ದಾರೆ. ಇವು ಇನ್ನೂ ಪ್ರಕಟವಾಗಬೇಕಾಗಿದೆ.

ನಾರಾಯಣಶರ್ಮರ ಕೀರ್ತನೆಗಳಲ್ಲೂ ಶರಣಾಗತಿಭಾವ, ಭಗವಂತನ ನಾಮ ಸ್ಮರಣೆ, ಭಕ್ತಿಪಾರಮ್ಯವನ್ನು ಕಾಣಬಹುದು. ಇದರ ಜೊತೆಗೆ ಉಳಿದಿಬ್ಬರು ಕೀರ್ತನಕಾರರಲ್ಲಿರುವಂತೆ ವಿಶಿಷ್ಟಾದ್ವೈತ ತತ್ವದ ಲಕ್ಷಣಗಳೂ ಸಹಜವಾಗಿ ಮೂಡಿಬಂದಿವೆ.

೩

ನಾರಾಯಣಶರ್ಮ ಶಾಮಶರ್ಮ ಮತ್ತು ರಂಗದಾಸರು ಬಂಧುಗಳೂ ಆಗಿದ್ದಾರೆ. ನಾರಾಯಣಶರ್ಮರ ಚಿಕ್ಕಪ್ಪ ಶಾಮಶರ್ಮರು. ನಾರಾಯಣಶರ್ಮರ ಹೆಂಡತಿಯ ತವರೂರು ಪಕ್ಕದೂರಾದ ಸೊಣ್ಣೇನಹಳ್ಳಿ. ಈ ಕುಟುಂಬದ ಹೆಣ್ಣುಮಗಳೇ ರಂಗದಾಸರ ಹೆಂಡತಿಯಾಗಿದ್ದವರು. ಶ್ರೀವೈಷ್ಣವ ಮತದ ಒಂದು ಸಮುದಾಯದ ಬಂಧು-ಬಾಂಧವರಲ್ಲೇ ಮೂವರು ಕೀರ್ತನಕಾರರು ಕಾಣಿಸಿಕೊಂಡಿರುವುದು ವಿಶಿಷ್ಟ ಸಂಗತಿಯಾಗಿದೆ. ನಾರಾಯಣಶರ್ಮ ಮತ್ತು ಶಾಮಶರ್ಮರ ಅಂಕಿತ ಒಂದೇ ಆಗಿದೆ. ಇದಕ್ಕೆ ಕಾರಣ ಇಬ್ಬರೂ ಒಂದೇ ಊರಿನವರಾಗಿದ್ದು ಒಂದೇ ದೇವರನ್ನು ಅರ್ಚಾಮೂರ್ತಿಯಾಗಿ ಸ್ವೀಕರಿಸಿರುವುದೇ ಆಗಿದೆ.

ವಿಶಿಷ್ಟಾದ್ವೈತ ಸಂಪ್ರದಾಯದ ಈ ಮೂವರು ಕೀರ್ತನಕಾರರು ದ್ವೈತ ಮತ್ತು ಅದ್ವೈತ ಕೀರ್ತನ ಸಂಪ್ರದಾಯಕ್ಕಿಂತ ಭಿನ್ನವಾದ ಒಂದು ಪ್ರತ್ಯೇಕ ಕೀರ್ತನ ಪರಂಪರೆಯನ್ನೇ ಕನ್ನಡ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ ಎಂದರೆ ತಪ್ಪಾಗಲಾರದು. ಈವರೆಗೂ ಅಜ್ಞಾತವಾಗಿದ್ದ ಶ್ರೀವೈಷ್ಣವ ಮತ ಲಕ್ಷಣಗಳು ಈ ಕೀರ್ತನೆಗಳಲ್ಲಿ ಅಭಿವ್ಯಕ್ತವಾಗಿರುವುದರಿಂದ ದ್ವೈತ-ಅದ್ವೈತಗಳ ಜೊತೆಗೆ ವಿಶಿಷ್ಟಾದ್ವೈತವೂ ಕನ್ನಡ ಕೀರ್ತನ ಪ್ರಕಾರದಲ್ಲಿ ನಿರಂತರವಾಗಿ ಹರಿದುಬಂದಿದೆ ಎಂದು ಹೇಳಬಹುದಾಗಿದೆ.

ಮಧ್ವೇತರ ಹರಿದಾಸರು ಗುರುಮುಖೇನ ದೀಕ್ಷಾಬದ್ಧರಾದ ಅಂಕಿತ ಸ್ವೀಕರಿಸಿದ (ಮಧ್ವ ಹರಿದಾಸರಂತೆ) ಉದಾಹರಣೆಗಳು ಕಂಡು ಬರುವುದಿಲ್ಲ ಎಂಬ ವಿದ್ವಾಂಸರ ಅಭಿಪ್ರಾಯಕ್ಕೆ ಈ ಕೀರ್ತನಕಾರರೂ ಒಳಗಾಗುತ್ತಾರೆ. ಈ ಮೂವರೂ ಶ್ರೀವೈಷ್ಣವ ಕೀರ್ತನಕಾರರು ಹರಿದಾಸ ವೃತ್ತಿಯನ್ನು 'ವೃತ್ತಿ'ಯನ್ನಾಗಿ ಸ್ವೀಕರಿಸಿದವರಲ್ಲ, ಪ್ರಪತ್ತಿ ಮಾರ್ಗವಾಗಿ ಕಂಡು ಕೊಂಡವರು. ಯಾವುದೇ ಗುರುವಿನ ಮೂಲಕ ಅಂಕಿತವನ್ನಾಗಲಿ, ದೀಕ್ಷೆಯನ್ನಾಗಲಿ ಪಡೆದಿಲ್ಲ. ಅರ್ಚಾಮೂರ್ತಿಯನ್ನೇ ಅಂಕಿತವಾಗಿಟ್ಟುಕೊಂಡು ಮೋಕ್ಷ ಸಾಧನೆಯ ರೂಪವಾದ ಭಗವನ್ನಾಮ ಸ್ಮರಣೆಯ ಆತ್ಮನಿವೇದನೆಯೇ ಗುರುವಿನ ರೂಪವನ್ನು ಪಡೆದು "ಆಂತರಿಕ ಭಕ್ತಿ" ಈ ಕೀರ್ತನೆಗಳಲ್ಲಿ ಹೊರಹೊಮ್ಮಿದೆ.

"ಹರಿದಾಸ ಸಾಹಿತ್ಯ ಪ್ರಧಾನವಾಗಿ ಭಕ್ತಿಪರವಾದದ್ದು. ಭಗವದ್ಭಕ್ತನು ತನ್ನ ಆತ್ಮಶೋಧನೆಯನ್ನು ಮಾಡಿಕೊಂಡು ಭಗವಂತನ ಅನುಗ್ರಹಕ್ಕಾಗಿ ಹಗಲಿರುಳೂ ಹಂಬಲಿಸುತ್ತ, ಇಷ್ಟಾರ್ಥಸಿದ್ಧಿಯಾದ ಮೇಲೆ ತನ್ನ ದಿವ್ಯಾನುಭವವನ್ನು ಇತರರಿಗೂ ತಿಳಿಯ ಹೇಳಿ ಸಮಸ್ತರನ್ನೂ ಪುನೀತರನ್ನಾಗಿ ಮಾಡುವುದೇ ಅವನ ಮುಖ್ಯ ಗುರಿ. ಆದ್ದರಿಂದ ಹರಿದಾಸ ಸಾಹಿತ್ಯವನ್ನು ಸಮಷ್ಟಿದೃಷ್ಟಿಯಿಂದ ಸಮೀಕ್ಷಿಸಿದಾಗ ಇಲ್ಲಿ ಆಯಾ ಹರಿದಾಸರ ಆತ್ಮಶೋಧನೆ, ಅಪರೋಕ್ಷಾನುಭಾವ, ಭಗವಂತನನ್ನು ಅವರು ಆರಾಧಿಸುವ ನಾನಾ ವಿಧಾನಗಳು ಮೊದಲು ನಮ್ಮ ಮನಸ್ಸನ್ನು ಸೆಳೆಯುತ್ತವೆ.[8] ಎಂಬ ಹರಿದಾಸ ಸಾಹಿತ್ಯದ ಬಗೆಗಿನ ಸಾಮಾನ್ಯವಾದ ಅಭಿಪ್ರಾಯಕ್ಕೆ ಈ ಕೀರ್ತನೆಗಳೂ ಸಹಜವಾಗಿ ಸ್ಪಂದಿಸುತ್ತವೆ. ಕೆಲವು ನಿದರ್ಶನಗಳ ಮೂಲಕ ಇದನ್ನು ಸ್ಪಷ್ಟಪಡಿಸಬಹುದು.

ತಂದೆ ನೀನೆ ದಯದಿ ಪಾಲಿಸೆಂದು ಬಂದೆನೋ
ಹಿಂದು ಮುಂದು ಗತಿಯುದಾರುಯಿಲ್ಲವೆಂಬೆನೊ (ರಂ)

x x

ನಾಮರೂಪ ಮರೆಸಿ ಸೋಹಂ-ಭಾವಮುದ್ರೆ ಧರಿಸಿ
ತಾಮಸ ಬುದ್ಧಿಯ ತರಿದೀಡಾಡಿಸಿ
ನೇಮದಿ ಜಗದೊಳು ಚರಿಸೆಂಪರಸಿದ ತಂದೆಯಹದು ನೀನೆ (ರಂ)

x x

8. ಜಿ. ವರದರಾಜರಾವ್, ಶ್ರೀಪಾದರಾಜರ ಕೃತಿಗಳು, ಪೀಠಿಕೆ, ಪುಟ. XX

ಹಸಿದು ನಾ ಬಳಲಲೇಕೆ ಈ ಸಮಯದಲ್ಲಿ
ಬಿಸಿಯೂಟ ಮಾಡುವೆನು ||ಪ||
ಹಸನಾದ ಶೇಷಶಯನ ನಾಮದಡುಗೆಯು
ವಸುಮತಿ ಭವನಾಮ ರಸಾಯನವಿದೆ ||ಅ-ಪ|| (ಶಾ)

x x

ಬಡತನವೆನ್ನನು ಬಾಧಿಪುದೈಹರಿ
ನುಡಿಯಲೆನಗೆ ನಾಲಗೆ ಬರದೀಪರಿ
ಅಡಿಯೊಳು ಕೆಡೆದಿಹೆ ತಡಿಗಾಣದೆಯೆ
ಕಡಲಣುಗಿಗೊರೆದು ಕಡೆ ಹಾಯಿಸೋದೊರೆಯೆ (ಶಾ)

x x

ಅವ್ವಕಷ್ಟವು ಬರಲು ಅವರಿವರು ಬಾರರು
ಆ ವಾಸುದೇವನಲ್ಲದೆ ಮತ್ತೊಬ್ಬರಾಗರು (ನಾ)

x x

ಕೇಶವ ಮಾಧವ ಎನಬಾರದೆ ಜೀವ
ಆಶೆಯ ಬಿಟ್ಟು ಕಿಂಚಿತ್ತು ಕಾಲ (ನಾ)

ಈ ಕೀರ್ತನೆಗಳಲ್ಲಿಯ ಆತ್ಮನಿವೇದನೆ, ಬದುಕಿನ ಬವಣೆ, ಭಕ್ತಿಯ ಭಾವನೆ ಬೇರೆಯಾದ ಕೀರ್ತನೆಗಳಿಗೂ ಕಡಿಮೆಯಿಲ್ಲದಂತೆ ಅಭಿವ್ಯಕ್ತವಾಗಿರುವುದನ್ನು ಕಾಣಬಹುದು.

ಭಗವಂತನ ಸ್ತುತಿಯ ವಿವಿಧ ರೂಪದಲ್ಲಿ ಅದರಲ್ಲೂ ವಿಶೇಷವಾಗಿ ದಶಾವತಾರ ರೂಪದಲ್ಲಿ ಭಕ್ತಿಪರವಶತೆಯಿಂದ ಮಾಡಿರುವುದು ಈ ಕೀರ್ತನಕಾರರ ವೈಶಿಷ್ಟ್ಯ. ಕೃಷ್ಣ ಮತ್ತು ನಾರಾಯಣ ಇವರಿಗೆ ಅತ್ಯಂತ ಪ್ರಿಯವಾದ ಭಗವನ್ನಾಮ. ಭಗವಂತನನ್ನು ಸದಾ ಧ್ಯಾನಿಸುತ್ತ, ಆರಾಧಿಸುತ್ತ ಗೀತೆ, ಸ್ಮೃತಿ ಪ್ರಬಂಧಗಳನ್ನು ಅಧ್ಯಯನ ಮಾಡುತ್ತ ಹಗಲಿರುಳೂ ಅವನ ನಾಮಸ್ಮರಣೆಯಲ್ಲೇ ತಲ್ಲೀನರಾಗಿರುವ ಈ ಕೀರ್ತನಕಾರರು ಒಂದಲ್ಲ ಹಲವು ಬಾರಿ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಂಡು ಧನ್ಯರಾಗಿದ್ದಾರೆ. ಆ ವಿಶೇಷ 'ದರ್ಶನ'ವನ್ನು ಕನಸನ್ನು ತಮ್ಮ ಕೀರ್ತನೆಗಳಲ್ಲಿ ಹಿಡಿದಿಟ್ಟಿದ್ದಾರೆ. 'ಸ್ವಪ್ನದಲಿ ಕಂಡ ಸುಂದರ ಮೂರ್ತಿ', 'ಆನಂದ, ಆನಂದ' (ನಾ) 'ಕನಸು ಕಂಡೆನು ಕೇಳಾ', ನೋಡೆಲೆ ಮಾನವ ಶ್ರೀಗುರು ಚರಣವ (ರಂ) 'ಕಂಡು ಕೊಂಡನೂ ಕೋದಂಡಧಾರಿಯ', 'ಕಂಡೇ ಕಡಗೋಲ ಪಿಡಿದವನ' (ಶಾ)

---

ರಂ: ರಂಗದಾಸರ ಕೀರ್ತನೆಗಳು

ಶಾ: ಶಾಮಶರ್ಮರ ಕೀರ್ತನೆಗಳು

ನಾ: ನಾರಾಯಣಶರ್ಮರ ಕೀರ್ತನೆಗಳು

ಸಾಮಾಜಿಕ ವಿಡಂಬನೆ, ಸಮಾಜ ವಿಶ್ಲೇಷಣೆ, ನೀತಿಬೋಧೆ, ಬದುಕಿನ ಮಾರ್ಗ ದರ್ಶನ ಇತ್ಯಾದಿ ಸಾಮಾಜಿಕ ಅಥವ ಉಪದೇಶಾತ್ಮಕ ದೃಷ್ಟಿ ಈ ಕೀರ್ತನಕಾರರಲ್ಲಿ ಅಷ್ಟಾಗಿ ಕಂಡುಬರುವುದಿಲ್ಲ. ಅಲ್ಲೊಂದು ಇಲ್ಲೊಂದು ಗೋಚರವಾದರೂ ಅದು ವೈಯಕ್ತಿಕ ಬದುಕಿನ ಬಿಡುಗಡೆಯ ಹಿನ್ನೆಲೆಯಲ್ಲಿ ಮಾತ್ರ. ಇದಕ್ಕೆ ಮುಖ್ಯ ಕಾರಣ ಈ ಕೀರ್ತನಕಾರರು ಭಗವನ್ನಾಮಸ್ಮರಣೆಗೆ ಮುಕ್ತಿ. ಸಾಧನೆಗೆ ಪೂರಕವಾಗಿ ಇವುಗಳನ್ನು ಬಳಸಿಕೊಂಡಿರುವುದು.

ಈ ಕೀರ್ತನಕಾರರ ಮುಖ್ಯ ವೈಶಿಷ್ಟ್ಯವಿರುವುದು ಶ್ರೀವೈಷ್ಣವ ತತ್ವಗಳನ್ನು ತಮ್ಮ ಕೀರ್ತನೆಗಳಲ್ಲಿ ಅಳವಡಿಸಿರುವುದರಲ್ಲಿ. ಇದು ಉಳಿದೆಲ್ಲ ಕೀರ್ತನಕಾರರಿಂದ ಇವರನ್ನು ಪ್ರತ್ಯೇಕಿಸುವ ಮತ್ತು ವಿಶೇಷೀಕರಿಸುವ ಲಕ್ಷಣವಾಗಿದೆ. ಕನ್ನಡ ಸಾಹಿತ್ಯದಲ್ಲಿ ಶ್ರೀವೈಷ್ಣವ ತತ್ವ ಅಷ್ಟಾಗಿ ಪ್ರತಿಪಾದಿತವಾಗಿಲ್ಲ ಎಂಬ ಅಪವಾದವನ್ನೂ ಈ ಕೀರ್ತನೆಗಳು ಸ್ವಲ್ಪಮಟ್ಟಿಗೆ ನೀಗಬಲ್ಲವಾಗಿವೆ. ವಿಶಿಷ್ಟಾದ್ವೈತದ ಮುಖ್ಯ ಲಕ್ಷಣಗಳಾದ ಹರಿ ಸರ್ವೋತ್ತಮತ್ವ, ಹರಸ್ತುತಿ ನಿಷೇಧ, ಅಷ್ಟಾಕ್ಷರಿ ಮತ್ತು ದ್ವಾದಶ ಮಂತ್ರ ಮಹಿಮೆ, ಆಳ್ವಾರರು ಮತ್ತು ಆಚಾರ್ಯರ ಸ್ತುತಿ, ಕೃಷ್ಣಪಾರಮ್ಯ, ಕೇಶವಾದಿ ನಾಮಸ್ಮರಣೆ, ದ್ರಾವಿಡ ಪ್ರಬಂಧಗಳಲ್ಲಿನ ವರ್ಣನೆ, ಘಟನೆಗಳ ನಿದರ್ಶನ ಇತ್ಯಾದಿಗಳು ಈ ಮೂವರ ಕೀರ್ತನೆಗಳಲ್ಲೂ ಹೇರಳವಾಗಿ ಮತ್ತು ಸಹಜವಾಗಿ ಕಾಣಿಸಿಕೊಂಡಿವೆ. ಹಾಗೆ ನೋಡಿದರೆ ಇವರುಗಳ ಪ್ರತಿಯೊಂದು ಕೀರ್ತನೆಯೂ ಈ ದೃಷ್ಟಿಯಿಂದಲೇ ಗುರುತಿಸಿ ಕೊಳಬಲ್ಲವು ಎನ್ನಬಹುದು.

(i) ಆಚಾರ್ಯ ಪ್ರಾಚಾರ್ಯ ಪರಮಾಚಾರ್ಯ
ನೀಚತೆ ನೀಗಿಸಿ ನಿನ್ನಂತೆ ಗೈದೇ ।
ಸರ್ವಗುರುವೇ ನಮಿಪೇ ಧ್ಯಾನಿಪೆ ಶ್ರೀನಿವಾಸ ॥ (ಶಾ)

(ii) ಶ್ರೀಪತಿ ಹಾಕಿದ ಶ್ರೀವೈಷ್ಣವಸುರ
ಭೂಜವು ನಿತ್ಯ ಶ್ರೀಕರವು ॥
ಭೂಪತಿಯಂದದಿ ಭೂಮಿಯಾಳುವುದು
ಕಾಪಾಡುತಿಹುದು ಲೋಕಿಗರ ॥
ಆಳುವಾಗರುಳು ಆಚಾರ್ಯರುಗಳು
ಪೇಳಿದರಿದರಾಂತರ್ಯವನು
ಕೇಳುತಬಾಳಿದ ಬಹುಭಾಗವತರ
ಪಾಳಯುವದು ತಾಂ ಪರಮಪದ ॥೧॥ (ಶಾ)

(iii) ತಿರುಮಣಿ ಧರಿಸಿದ ತೀರ್ಥರ ಕಂಡರೆ
ತಿರುವಡಿಗಳಿಗೇ ಮಣಿಯುವುದು ॥
ಗುರುತರ ಶ್ರೀಪಾದತೀರ್ಥಸೇವನ
ದುರಿತಹರವು ತಾ ಪಾವನವು ॥ (ಶಾ)

(iv) ಆಳ್ವಾರ್ ತಿರುವಡಿಗಳೆ ಶರಣೆನುತ
ಬಾಳ್ವರು ಭಜಿಪುದು ಭಕುತಿಯಲಿ
ಕೇಳ್ವರು ಕತೆಗಳ ಮಮತೆಯಿಂದಲಿ
ಮಾಳ್ಪರು ಮನೆ ವೈಕುಂಠದಲಿ ॥ (ಶಾ)

(v) ವಕುಳಾಭರಣನೆ ಶರಣೆಂಬೆ
ಸಕಲ ಬಂಧು ನೀ ಸಲಹಂಬೆ ॥
ನಿಖಿಲ ಲೋಕಿಗರ ಶಿಶುನಡೆ ನೂಕಿದೆ
ಅಕಳಂಕನೆ ಶಠಗೋಪ ನೀನಾದೆ ॥ (ಶಾ)
(ನಮ್ಮಾಳ್ವಾರರಸ್ತುತಿ)

(vi) ಶ್ರೀಗೋದಾದೇವಿ ಶ್ರೀಭೂನೀಳಾದೇವಿ ಆಂಡಾಳ್‌ದೇವಿ
ಭೋಗಿ ಶಯನನ ಭಾಗ್ಯದರಾಣಿ ॥ಪ॥
ಸರಿ ತುಳಸಿಯ ಮಾಲದಳುದಿಸಿದಳೆ
ಪೆರಿಯಾಳ್ವಾರರ ಪ್ರೇಮಕುಮಾರಿ
ಪರಮಾತ್ಮಗೆ ಹೂ ಮುಡಿದು ಮುಡಿಸಿದೆ
ಕರುಣ ತ್ರಯದೊಳಗವನೊಳು ಬೆರೆದೆ ॥೧॥ (ಶಾ)
(ಆಂಡಾಳ ಗೋದಾದೇವಿಸ್ತುತಿ)

(vii) ರಾಮಾನುಜಾಚಾರ್ಯ ಶ್ರೀಮುನಿವರ್ಯ
ನೇಮದಿಂದಲಿಗೈದೆ ನೀಂ ಸ್ವಾಮಿ ಕಾರ್ಯ ॥ (ಶಾ)
(ರಾಮಾನುಜ ಸ್ತುತಿ)

(viii) ತಿರುಪಣ್ಣಾಳ್ವ್ವಿಪ್ರರು ಕಲ್ಲಿನೊಳ್ಬೀರಲು ಮೌನವ ಧರಿಸಿರಲು
ಕವಮು ಲೋಕ ಸಾರಂಗ ಮುನಿಗಳಂ ಕಳುಹಿಸಿ ಕರುಣದಿ ಪೊರೆದಂತ । (ರಂ)

(ix) ವೇಶ್ಯೆಯ ವಚನಕೆ ಮೆಚ್ಚುತವರಗಳ
ಬೇಡಿಕೊ ಎನ್ನಲು ನಿನ್ನಂತ
ಕೂಸನು ಕೋರಿದ ಮಾತ್ರಕೆ ಆಕೆಯ
ಕುಕ್ಷಿಯೊಳ್ಪುಟ್ಟಿದೆ ಮನ್ನಿಸುತ ॥ (ರಂ)
(ತಿರುಪ್ಪಣ್ಣಾಳ್ವಾರ್ ಮತ್ತು ತೊಂಡರಡಿಪ್ಪೊಡಿಯಾಳ್ವಾರ್‌ಗಳ ಬದುಕಿನ ನಿದರ್ಶನಗಳು)

(x) ಚರಣಶ್ಲೋಕವನ್ನು ಅಷ್ಟಾಕ್ಷರ ಯುಗಮಂತ್ರವನ್ನು
ತಿರುಮಂತ್ರಾರ್ಥವ ತೀರ್ಥಪ್ರಸಾದವ
ತರಳನಿಗೀಯುತ ಮರವೆಯ ನೂಕಿದ ॥ (ರಂ)

(xi) ನಿಸ್ಫುರಿತಪಲ್ಲಿರ್ಪ ಸ್ಪೈಮರ್ಜಡಿ ತಿರುಮಣ್ಣು

ಸರ್ಪಶಯನಗರ್ಪಿಸಿದ ಗರುಡನೆ
ಶ್ರೀಲೋಲನಡಿಗಳ ಲೀಲಾಮೃತಗಳ
ಶೀಲರಾಗಿ ಕುಡಿವ ಶ್ರೇಷ್ಠ ಆಳ್ವಾರರಿಗೆ (ರಂ)

(xii) ಹರಿಯೇ ದೈವಶಿಖಾಮಣಿ
ಹರಿಯೇಸಪ್ಪೃಕ್ತ ಬಂಧು ಹರಿಯೇ ಪೂಜ್ಯಂ
ಹರಿ ಪೂಜೆಯೆ ಪಾಪಕ್ಷಯ
ಹರಿಪೂಜೆಯೆ ಪರಮಪುಣ್ಯದಾಲಯ ಮದರಿಂ ।
ತಿರುನಾರಾಯಣಸ್ವಾಮಿ ಯೆ ೀನಿಮ್ಮಡಿ
ಯೀಕ್ಷಿಸಿ ಹೃದಯದೊಳರ್ಚಿಸುವೆ
ಪರಮ ಸುಗತಿಯನು ಬೇಡುವೆಸಂತತ
ಮರೆಯದೆ ಪಾಲಿಸುವರಗಳನು (ರಂ)

(xiii) ಬೇಡಿಕೊಂಬುವೆ ನಿಮ್ಮ
ರಾಮಾನುಜರೆ ಬೇಡಿಕೊಂಬುವೆ ನಿಮ್ಮ (ರಂ)

(xiv) ಓಂ ನಮೋನಾರಾಯಣ
ಓಂ ನಮೋ ನಾರಾಯಣ
ಎಂಬುವ ನಾಮದ ಬೀಜವನು
ರಾಮಾನುಜ ಬೆಳೆದ ಧರೆಯೊಳಗೆ (ನಾ)

ಇದರ ಯಾವುದೇ ಕೀರ್ತನೆಯೂ ಕೀರ್ತನೆಗಳ ಸಾಮಾನ್ಯ ಲಕ್ಷಣಗಳಿಗೆ ಬದ್ಧವಾಗಿವೆ. ಪಲ್ಲವಿ, ಅನುಪಲ್ಲವಿ, ನುಡಿಗಳನ್ನು ಎಲ್ಲ ಕೀರ್ತನೆಗಳಲ್ಲೂ ಅನುಕ್ರಮವಾಗಿ ಗಮನಿಸಬಹುದು. ರಂಗದಾಸರ ಕೀರ್ತನೆಗಳಲ್ಲಿ ಕೆಲವಕ್ಕೆ ಆದಿಯಲ್ಲಿ ಕಂದಪದ್ಯಗಳಲ್ಲಿ ಆ ಕೀರ್ತನೆಗಳ ಸಾರವನ್ನು ಕೊಡಲಾಗಿದೆ. ಇದು ಒಟ್ಟು ಕೀರ್ತನ ಸಾಹಿತ್ಯದಲ್ಲಿಯೇ ಬೇರೆಲ್ಲೂ ಕಾಣಸಿಗದ ಅಂಶವಾಗಿದೆ. ಈ ಮೂವರೂ ಕೀರ್ತನಕಾರರಿಗೆ ಸಂಗೀತಜ್ಞಾನ ಇದ್ದುದು ಸುಸ್ಪಷ್ಟ. ಸಾಮಾನ್ಯವಾಗಿ ಎಲ್ಲ ಕೀರ್ತನೆಗಳಿಗೂ ರಾಗ, ತಾಳಗಳನ್ನು ನಿರ್ದೇಶಿಸಿದ್ದಾರೆ. ಅವುಗಳನ್ನು ಖಚಿತಪಡಿಸಿಕೊಳ್ಳಲು ಕೆಲವೊಂದಕ್ಕೆ ಪ್ರಾಜ್ಞರ ನೆರವನ್ನು ಪಡೆದಿದ್ದಾರೆ. ರಾಗ-ತಾಳಗಳನ್ನು ನಿರ್ದೇಶಿಸಿಲ್ಲದ ಕೀರ್ತನೆಗಳೂ ರಾಗ-ತಾಳಗಳಿಂದ ಕೂಡಿ ರಚನೆಯಾಗಿರುವುದನ್ನು ಯಾರಾದರೂ ಸುಲಭವಾಗಿ ಗುರುತಿಸಬಹುದು.

ಈ ಎಲ್ಲ ಕೀರ್ತನೆಗಳಲ್ಲೂ ಶ್ರೀವೈಷ್ಣವ ಪರಿಭಾಷೆ ದಟ್ಟವಾಗಿರುವುದನ್ನು ಕಾಣಬಹುದು. ಭಾಗವತ ದರ್ಶನ, ಸೇವೆ, ಆಚಾರ್ಯ ಸ್ತುತಿ, ಶರಣಾಗತಿಭಾವ (ಪ್ರಪತ್ತಿ ಮಾರ್ಗ) ಇತ್ಯಾದಿ. ಬೇರೆ ಕೀರ್ತನಕಾರರಲ್ಲಿ ಕಾಣಲಾಗದ ವಿಶಿಷ್ಟ ಲಕ್ಷಣಗಳನ್ನು ಈ ಕೀರ್ತನಕಾರರಲ್ಲಿ ಗಮನಿಸಬಹುದಾಗಿದೆ.

ಹೀಗೆ ಕನ್ನಡ ಸಾಹಿತ್ಯಕ್ಕೆ ಶ್ರೀವೈಷ್ಣವ ಸುಧಾರಸವನ್ನು ಕೀರ್ತನೆಗಳ ರೂಪದಲ್ಲಿ ಹರಿಸುವುದರ ಮೂಲಕ ದ್ವೈತ ಅದ್ವೈತಗಳಂತೆ ವಿಶಿಷ್ಟಾದ್ವೈತ ಪರಂಪರೆಯೂ ಕೀರ್ತನ ಸಾಹಿತ್ಯದಲ್ಲಿ ನಿರಂತರವಾಗಿ ಬೆಳೆದುಬರುತ್ತಿದೆ ಎಂಬುದನ್ನು ಈ ಮೂವರ ಕೀರ್ತನೆಗಳ ಮೂಲಕ ದೃಢಪಡಿಸಬಹುದಾಗಿದೆ.

———

# ಛಂದಸ್ಸಿನಾದ್ಯತೆ ಹಾಗೂ ನವವೃತ್ತಗಳಾವಿಷ್ಕರಣ

**- ಕುಮಾರನಿಜಗುಣ**

ಕಮನೀಯಕಂದಸರದಿಂ ಭವ್ಯಷಟ್ಪದೀಪದಕದಿಂ ಸುರಮ್ಯರಗಳೆಬುಲಾ
ಕಿಮುದಾತ್ತಚೌಪದಿವಿಶೇಷಾಗ್ರದೋಲೆಯಿಂ ವಚನನತ್ತಿನಿಂ ತ್ರಿಪದಿಬಳೆಯಿಂ
ಸಮಸಾಟಿಯಿಲ್ಲದಿಹ ಸಾಂಗತ್ಯನಾಗರಿಂ ಮೆರೆವ ಕನ್ನಡಾಂಬೆಯ ಚರಣಕಂ
ರಮಣೀಯಬಂಧುರನವೋತ್ಪಾದ್ಯವೃತ್ತಕಿಂಕಿಣಿಗಳಟ್ಟಿಲಂಕರಿಸಿ ಮಣಿವೆಂ ||

ಎಂದು ಭಾರತಾಂಬೆಯ ಭವ್ಯಪುತ್ರಿಯಾದ ಕನ್ನಡಾಂಬೆಯ ಚರಣಸರಸಿಜಕ್ಕೆ ಪ್ರಪ್ರಥಮವಾಗಿ ಪೊಡಮಟ್ಟು ಈ ವಿಶಿಷ್ಟಲೇಖನವನ್ನು ಪ್ರಾರಂಭಿಸುವೆ. ಮೇಲಣ ಈ ವೃತ್ತವು 26 ಅಕ್ಷರದ "ಉತ್ಕೃತಿ" ಸಂಜ್ಞೆಯಲ್ಲಿ ರಚಿಸಬಹುದಾದಂಥ 6, 71,08,864 ವೃತ್ತಗಳಲ್ಲಿ 3, 28, 88, 044ನೆಯ ಒಂದು ನವೋತ್ಪಾದ್ಯವೃತ್ತ. ಇದಕ್ಕೆ "ಕನ್ನಡಾಂಬೆ" ಎಂಬ ಹೆಸರಿಡಲಾಗಿದೆ. ಇದರ ಲಕ್ಷಣವು ಕೆಳಕಂಡಂತಿದೆ.

**ಸಜಸಂ ರಜಂ ಸಜನ ಲಂಗಂ** ಬರಲ್ಸುಶೋಭಿಸುತ ಕನ್ನಡಾಂಬೆ ಕರಮೆಸೆಗುಂ ||

ಸಾಧಾರಣವಾಗಿ ಶಾಸ್ತ್ರ ಬುದ್ಧಿಗಮ್ಯ, ಕಾವ್ಯ ಹೃದ್ಗಮ್ಯ; ಅಂದರೆ ಶಾಸ್ತ್ರವು ಬುದ್ಧಿಯನ್ನು ನಿಶಿತಗೊಳಿಸಿದರೆ, ಕಾವ್ಯವು ಹೃದಯವನ್ನು ಅರಳಿಸಿ ಆನಂದ ನೀಯುತ್ತದೆ. ಅಂತಹ ಕಾವ್ಯವು ಗೇಯತೆಯಿಂದ ಕೂಡಿದ್ದರೆ ಆಗ ಆನಂದಕ್ಕೆ ಪಾರವೇ ಇಲ್ಲ. ಆದರೆ ಗೇಯತೆಯುಳವಡಬೇಕಾದರೆ ಛಂದಸ್ಸಿನ ಲಯ ಬಹಳ ಮುಖ್ಯ. ಅದಕ್ಕಾಗಿ ಕನ್ನಡದಲ್ಲಿ ತ್ರಿಪದಿ, ಚೌಪದಿ, ಷಟ್ಪದಿ, ಕಂದ, ಸಾಂಗತ್ಯ, ಸೀಸಪದ್ಯ, ರಗಳೆ ಮುಂತಾದ ಹಲವಾರು ಛಂದಸ್ಸುಗಳು ಹೊರಬಂದವು. ಇವುಗಳ ಜೊತೆಗೆ ಬಹಳ ವೈವಿಧ್ಯಮಯವಾದ ವೃತ್ತಚ್ಛಂದಸ್ಸನ್ನು ಸಂಸ್ಕೃತದಿಂದ ಕನ್ನಡಕ್ಕೆ ಎರವಲಾಗಿ ಪಡೆಯಲಾಗಿದೆ. 1 ಅಕ್ಷರದಿಂದ 26 ಅಕ್ಷರಗಳವರೆಗೆ ರಚಿಸಬಹುದಾದ ಆ ವೃತ್ತಗಳನ್ನು 13, 42, 17, 726 ಸಂಖ್ಯೆಗಳಲ್ಲಿ ರಚಿಸಬಹುದೆಂದರು ಲಾಕ್ಷಣಿಕರು. ಅವುಗಳನ್ನೇ ಮುಂದುವರಿಸಿ 27 ಹಾಗೂ ಇನ್ನೂ ಹೆಚ್ಚಿನ ಅಕ್ಷರಗಳುಳ್ಳ ವೃತ್ತಗಳನ್ನು ರಚಿಸಿ, ಅವನ್ನು ಮಾಲಾವೃತ್ತಗಳು ಅಥವಾ ದಂಡಕಗಳೆಂದು ಕರೆದರು. ಈ ರೀತಿ ಅವುಗಳನ್ನು ರಚಿಸುತ್ತಾ ಹೋದರೆ ಅವುಗಳ ಸಂಖ್ಯೆ ಅಪಾರವಾಗಬಹುದು. ಆದರೆ ಈ ತನಕ ಭಾರತದ ಭಾಷೆಗಳೆಲ್ಲರಲ್ಲಿ 26 ಅಕ್ಷರಗಳವರೆಗೆ ಎಲ್ಲಾ ಕವಿಗಳ ಪ್ರಯೋಗಕ್ಕೆ ಒಳ ಪಟ್ಟಿರುವುದು ಕೇವಲ 641 ವೃತ್ತಗಳು ಮಾತ್ರವೆಂದು ಸಂಶೋಧನಕಾರರು ತಿಳಿಸುತ್ತಾರೆ. ಸಂಶೋಧನಾಚಕ್ಷುವಿಗೆ ಬೀಳದಿರುವ ಇನ್ನೂ ಕೆಲವಾರು ಸಿಕ್ಕಿ ಕೂಡಿಸಿದರೂ ಅವುಗಳ

ಸಂಜ್ಞೆ ರಚಿಸಬಹುದಾದ ಸಂಖ್ಯೆಯ ಕೊನೆಯ ಮೂರಂಕೆಯು 726ಅನ್ನು ಮೀರಿರಲಿಕ್ಕೆ ಸಾಧ್ಯವಿಲ್ಲವೇನೋ ಅನ್ನುತ್ತಾರೆ. ಮಾಡಬಹುದಾದ ಕೋಟಿಗಟ್ಟಲೆ ವೃತ್ತಗಳಿಗೆ ಮಾಡಿರುವ ಸುಮಾರು ಏಳ್ನೂರು ವೃತ್ತಗಳನ್ನು ಹೋಲಿಸಿದರೆ ಅಜಗಜಾಂತರ. ರಚಿಸಬಹುದಾದ ಕೋಟಿಗಟ್ಟಲೆ ವೃತ್ತಗಳಲ್ಲಿ ಒಂದೆರಡುನೂರುವೃತ್ತಗಳನ್ನಾದರೂ ಹೊಸತಾಗಿ ರಚಿಸಲು ಏಕೆ ಪ್ರಯತ್ನಿಸಬಾರದೆಂಬ ಕುತೂಹಲದಿಂದ ಪ್ರಯತ್ನಿಸಿ ನಾನು 230 ನವೋತ್ಪಾದ್ಯವೃತ್ತಗಳನ್ನೊಳಗೊಂಡ ನನ್ನ "ವೃತ್ತವಿಲಾಸವೈಭವ" ವನ್ನು 27.1.95 ರಂದು ಪ್ರಕಟಿಸಿರುವೆ ; ಇರಲಿ.

ಇಷ್ಟೆಲ್ಲಾ ವೈವಿಧ್ಯತೆಯಿದ್ದರೂ, ಗೇಯತೆಯ ಅವಶ್ಯಕತೆಯಿದ್ದರೂ ಈಚೀಚೆಗೆ ನಮ್ಮಲ್ಲಿ ಛಂದಸ್ಸೆಂದರೆ ಇದೊಂದು ಗೋಜಲುಗೋಜಲಾದ ಒಣಕಗ್ಗ, ಮಿದುಳಿಗೆ ಒಂದು ರೀತಿಯ ಹಿಂಸೆಯ ಬಂಧನ, ಸ್ವಚ್ಛಂದದ ನಮ್ಮ ಭಾವಕ್ಕೊಡ್ಡಿದ ಅಡ್ಡಗಟ್ಟೆ, ನೀರಸ ನಿಯಮಗಳ ನೀಳ್ಗಳ, ಸೂತ್ರರಾಶಿಯ ಸಿಕ್ಕುಸಿಕ್ಕಾದ ಸೀಗೆಮೆಳೆ, ಶುಷ್ಕಪಂಡಿತರು ಮುಂಡೆನೋವು ತರುವ ಸೀರುಂಡೆಯ ಕೂರ್ಕೊರೆತ ಎಂದೆಲ್ಲಾ ಅಪಖ್ಯಾತಿಹೊಂದಿರುವ ಈ ಕಾಲದಲ್ಲಿ ಪ್ರಾಸದ ತ್ರಾಸವೇಕೆ? ಯತಿಮಾತ್ರಾಗಣವೆಂದು ಮತಿಗೆಡಲೇಕೆ? ಛಂದಸ್ಸಿನ ಬಂಧನವೇಕೆ? ಎಂದೆಲ್ಲಾ ಛಂದಶ್ಶಾಸ್ತ್ರದ ಬಗ್ಗೆ ಹಗುರವಾಗಿ ಮಾತನಾಡಿ, ಕಾವ್ಯಮೀಮಾಂಸೆಯ ನೀತಿನಿಯಮಗಳನ್ನೆಲ್ಲಾ ಗಾಳಿಗೆ ತೂರಿ, ಕಾವ್ಯಕನ್ನಿಕೆಯ ಕಮನೀಯವಸ್ತ್ರಾಭರಣಗನ್ನೆಲ್ಲಾ ಕಿತ್ತುಬಿಸಾಡಿ, ಆಕೆಯನ್ನು "ನೈಟ್‌ಕ್ಲಬ್ಬೊಂದರ ನಗ್ನಾಂಗಿ" ಯನ್ನಾಗಿಸಿ ನೋಡಿ ಹಲ್ಲುಕಿರಿಯುತ್ತಿರುವವರ ಮನೋಭಾವವನ್ನು ಟೀಕಿಸಿ, ರಚಿತವಾಗಿರುವ ಕೆಳಕಂಡ ವೃತ್ತವನ್ನು ಪರಾಮರ್ಶಿಸಿ.

ಸಂಕೃತಿ ಸಂಜ್ಞೆ — ಛಂದೋಬಂಧ : 12, 65, 339/1. 67, 77, 216

**ರಂ ನರಂ ನತಭಮಂ ಯ**ಮ್ಮೈದೆ ವರಛಂದೋವಿದರ್ಘನಛಂದೋಬಂಧಮೆಂಬರ್
ಛಂಗಮೆಂದೊಡನದೊಂದು ಗೋಜಲೊಣಕಗ್ಗಂ ಮಿದುಳ್ಗದು ಹಿಂಸಾಬಂಧನಂ ಸ್ವ
ಚ್ಛಂದದಿಂ ಹರಿವ ಭಾವಕ್ಕೊಂಡುತೆರನೊಡ್ಡೈ ವಿಚಾರಿಸಿನೋಡಲ್ಸಿಕ್ಕುಸಿಕ್ಕಾ
ದೊಂದು ಸೀಗೆಮೆಳೆ ಶುಷ್ಕಪಂಡಿತಜನರ್ಮುಂಡೆ ನೋಯಿಪ ಪೇರ್ಸೀರುಂಡೆ ಚೀರ್ವಂ
ಥೊಂದು ಕೂರ್ಕೊರೆತಮೆಂದು ಪೇಳ್ವರು ಕೆಲರ್ಗೈದುನೋಡದೆ ಛಂದೋಬಂಧದೊಳ್ಪಂ

ಮತ್ತು ಕಂಪೆಸೆವ ಚಂಪಕದಂತಹ ಮೂಗಿದ್ದು ಅದಕ್ಕೊಪ್ಪವ ಮೂಗುತಿಯಿಲ್ಲದಿದ್ದರೆ, ಕರಮೆಸೆವ ಕಿವಿಯಿದ್ದು ಅದಕ್ಕೊಪ್ಪುವ ಬೆಂಡೋಲೆಯಿಲ್ಲದಿದ್ದರೆ, ಕಮನೀಯಕಪೋಲವಿದ್ದು ಅದಕ್ಕೊಪ್ಪುವಂತೆ ಹರಿದ್ರವನ್ನು ಲೇಪಿಸದಿದ್ದರೆ, ಅಂಗದ ಹಣೆಯಿದ್ದು ಅದರ ಸೌಂದರ್ಯವನ್ನು ವರ್ಧಿಸುವ ಸುಂದರತಿಲಕವಿಡದಿದ್ದರೆ, ತುಂಬಾ ರೂಪವತಿಯಾದರೂ ಮುತ್ತೈದೆ ಹೇಗೆ ಶೋಭಿಸುವುದಿಲ್ಲವೋ ಹಾಗೆ ಮಹೋನ್ನತವಸ್ತು, ಶೈಲಿ, ಭಾವ, ಬಂಧಗಳನ್ನೊಳಗೊಂಡಿದ್ದರೂ ಕಾವ್ಯವು

ಸೂಕ್ತಚ್ಛಂದಸ್ಸಿಲ್ಲದಿದ್ದರೆ ಒಂದಿಷ್ಟೂ ಶೋಭಿಸುವುದಿಲ್ಲವೆಂಬ ಭಾವದ ಈ ವೃತ್ತವನ್ನೋದಿ. ಇದು "ಗರತಿ" ಎಂಬ 29 ಅಕ್ಷರದ ನವೋತ್ಪಾದ್ಯವೃತ್ತ.

ಭಾಸ್ವತ್ಕೃತಿಸಂಜ್ಞೆ — ಗರತಿ : 17, 38, 94, 172/53, 68, 70, 912

**ಸಸವಂ ಜಭರಂ ನಂರಂ ರಂಲಗಂ** ಸಮಂಜಸಮಾಗಿರಲ್ಗರತಿಯೆಂಬರೈ ಛಾಂದ
ಸೋತ್ತಮರ್.

ಸಿರಿಚಂಪಕದೋಲ್ನೂಗಿರ್ದುಂ ಸುನಾಸಿಕಾಮಣಿಯಿಲ್ಲವೆಂದೊಡೆ
ವಿರಾಜಿಕುಂ ಶ್ರೋತ್ರಮಿರ್ದದ
ಕ್ಕುರೆಶೋಭಿಸುತಿರ್ಕುಂ ಜೆಂಡೋಲೆಯಿಲ್ಲವೆಂದೊಡೆ ತುಂಬುಗೆನ್ನೆಗೆ
ಹರಿದ್ರಮಂ ಲೇಪಿಸಿಲ್ಲವೆಂ
ದಿರೆಫಾಲದಿಬೊಟ್ಟೇ ತಾನಿಲ್ಲಮೆನ್ನೆ ರೂಪಸಿಯಾದೊಡಂ ಗರತಿಯೆಂತು ಶೋಭಿಪುದಿಲ್ಲವಂ
ತುರುವಸ್ತುರಸಾಲಂಕಾರಂಗಳಿರ್ದುಮಂದದ ಛಂದಮಿಲ್ಲದಿರೆ ಕಾವ್ಯಮೆಂತೋದೆ
ರಂಜಿಕುಂ ||

ವರ್ಣಚ್ಛಂದಶ್ಶಾಸ್ತ್ರದಲ್ಲಿ 20 ರಿಂದ 26 ಅಕ್ಷರಗಳವರೆಗೆ ಕ್ರಮವಾಗಿ ಕೃತಿ, ಪ್ರಕೃತಿ,ಆಕೃತಿ, ವಿಕೃತಿ, ಸಂಕೃತಿ, ಅಭಿಕೃತಿ, ಉತ್ಕೃತಿ ಎಂದು ಸಂಜ್ಞೆ ನೀಡಿ 27 ಅಕ್ಷರಗಳ ಮೇಲುಳ್ಳ ವೃತ್ತಗಳನ್ನು ಮಾಲಾವೃತ್ತಗಳು ಅಥವಾ ದಂಡಕಗಳೆಂದು ಕರೆದಿದ್ದಾರಷ್ಟೆ. ಆದರೆ ಜಯಕೀರ್ತಿ ಮಾತ್ರ ಅವುಗಳನ್ನೂ ಸಹ ಜಾತಿವೃತ್ತಗಳೆಂದೆ ಕರೆದಿದ್ದಾನೆ. ಅವನನ್ನು ಅನುಸರಿಸಿ ನಾನು 27, 28, 29 ಹಾಗೂ 30 ಅಕ್ಷರಗಳುಳ್ಳ ವೃತ್ತಗಳಿಗೆ ಕ್ರಮವಾಗಿ ಸತ್ಕೃತಿ, ಮಹತ್ಕೃತಿ, ಭಾಸ್ವತ್ಕೃತಿ, ವಿಲಸತ್ಕೃತಿ ಎಂದು ಸಂಜ್ಞೆ ನೀಡಿ ಮುಂದುವರಿಸಿದ್ದೇನೆ. 29 ಅಕ್ಷರದ ಈ ಭಾಸ್ವತ್ಕೃತಿಸಂಜ್ಞೆಯಲ್ಲಿ 53, 68, 70, 912 ವೃತ್ತಗಳನ್ನು ರಚಿಸಬಹುದು. ಅವುಗಳಲ್ಲಿ ಈ ಗರತಿ ವೃತ್ತವು 17, 38, 94, 172 ನೆಯದು. ಈ ಲೇಖನದಲ್ಲಿ ಮುಂದೆ ಆಯಾ ಸಂಜ್ಞೆಗೆ ಮೇಲೆ ಸೂಚಿಸಿರುವಂತೆ ಅಕ್ಷರಗಳ ಸಂಖ್ಯೆ, ವೃತ್ತದ ಸಂಖ್ಯೆ ಹಾಗೂ ಆ ಛಂದಸ್ಸಂಜ್ಞೆಯಲ್ಲಿ ರಚಿಸಬಹುದಾದ ವೃತ್ತಗಳ ಸಂಖ್ಯೆಗಳನ್ನು ಅಂತೆಯೇ ಪರಿಭಾವಿಸತಕ್ಕದ್ದು.

ಅಂತೆಯೇ ಸೂಕ್ತಚ್ಛಂದಸ್ಸಿನಲ್ಲಿ ರಚನೆಗೊಂಡಿರುವ ಸತ್ಕಾವ್ಯಕ್ಕೂ ಮಾತ್ರೆಗಣ ಲೆಕ್ಕವಿಲ್ಲದ ಮುಕ್ತಚ್ಛಂದಸ್ಸಿನಲ್ಲಿ ಬರೆದಿರುವ ಶುಷ್ಕಕವನಕ್ಕೂ ಇರುವ ಮಹದಂತರವನ್ನು ಕೆಲವು ದೃಷ್ಟಾಂತಗಳ ಮೂಲಕ ವೈಭವೀಕರಿಸಿರುವ ಈ ಕೆಳಕಂಡ ವೃತ್ತದ ವಿಲಾಸವನ್ನೀಕ್ಷಿಸಿ. ಇದು 28 ಅಕ್ಷರದ "ಭರತನಾಟ್ಯ" ಎಂಬ ನವೋತ್ಪಾದ್ಯವೃತ್ತ.

ಮಹತ್ಕೃತಿ–ಭರತನಾಟ್ಯ : 18, 42, 53, 871/26, 84, 35, 456

**ಭಂ ಜಭಭನಂ ಭಭಂ ನರಲಂ** ಕ್ರಮದಿ ಬರೆ ಶೋಭಿಪುದೇ ನುತಭರತನಾಟ್ಯಮೈಸೆ

ರಾತ್ರಿಯ ವಿಹಾರಸಂಘದ ಚಿತ್ರಲಿಕುಣಿತವೆತ್ತ ರಸೋಜ್ವಲಭರತನಾಟ್ಯವೆತ್ತ
ಜಾತ್ರೆಜನ ಗೈವ ತಂಬಟೆಸದ್ದಿನ ರಭಸವೆತ್ತ ಮೃದಂಗದ ಮಧುರನಾದವೆತ್ತ
ಸೂತ್ರಕೊಳಗಾದ ಚರ್ಮದಗೊಂಬೆಯನಟನೆಯೆತ್ತ ವಿದಗ್ಧನಭಿನಯಭಂಗಿಯೆತ್ತ
ಮಾತ್ರೆಗಣಲೆಕ್ಕವಿಲ್ಲದ ಶುಷ್ಕಕವನಗಳೆತ್ತ ಸುವೃತ್ತಕೆ ಬರೆದ ಕಾವ್ಯವೆತ್ತ ||

ಹಾಗೆಯೇ ಮಕ್ಕಳಿಲ್ಲದವನಾಸ್ತಿ, ಪ್ರೀತಿಸುವ ಬಂಧುಬಾಂಧವರಿಲ್ಲದ ಪುರ, ಕೈಹಿಡಿದ ಗೃಹಿಣಿಯೇ ಇಲ್ಲದ ಮನೆ, ಮತಿಯೇ ಇಲ್ಲದವನ ಮಾತು, ಬಾಯಿಗೆ ರುಚಿಸದ ಹಾಗೂ ಆರೋಗ್ಯದಾಯಕವಲ್ಲದ ಭೋಜನ, ಸದಾಚಾರವಿಲ್ಲದ ಮಗನು, ಲಯವೇ ಇಲ್ಲದ ಭರತನಾಟ್ಯ, ಅನುರೂಪವಿಲ್ಲದ ಪ್ರಿಯೆ, ದಂತವೇ ಇಲ್ಲದ ಆನೆ ಮುಂತಾದವು ಎಂತೆಂತೋ ಮೆರೆದರೂ ಹೇಗೆ ರಾಮಣೀಯಕವಲ್ಲವೋ ಹಾಗೆ ಸೂಕ್ತ ಛಂದಸ್ಸಿರದ ಕಾವ್ಯವದು ಎಂತಿದ್ದರೂ ಹೇಗೆ ತಾನೇ ರಮಣೀಯವಪ್ಪುದು ಎಂಬ ಭಾವನೆಯುಳ್ಳ ಕೆಳಕಂಡ ವೃತ್ತದ ನೋಡಿ ನೋಡಿ. ಇದು 24 ಅಕ್ಷರದ "ಪ್ರಿಯ ಬಂಧು" ಎಂಬ 'ನವೋತ್ಪಾದ್ಯವೃತ್ತ.

ಸಂಕೃತಿ–ಪ್ರಿಯಬಂಧು : 77,95,596/1,67,77, 216

**ಸನಭಂ ಜಭಜಜಂ ಸಗಣವ್ಮೈದೆ ಛಾಂದಸರಿದಂ ಪ್ರಿಯಬಂಧುವೆನುವರ್**

ಸುತನಿಲ್ಲದವನಾಸ್ತಿ ಪ್ರಿಯಬಂಧುವಿಲ್ಲದ ಪುರಂ ಸತಿಯಿಲ್ಲದ ಗೃಹಂ
ಮತಿಯಿಲ್ಲದನ ಮಾತು ಹಿತಸೌಖ್ಯವಿಲ್ಲದಶನಂ ನಡೆಯಿಲ್ಲದ ಸುತಂ
ಗತಿಯಿಲ್ಲದಿಹ ನೃತ್ಯಮನುರೂಪವಿಲ್ಲದಿನಿವಳ್ರದಮಿಲ್ಲದಿಭಮೂ
ರ್ಜಿತವೃತ್ತಮಿರದಂಥ ನವಕಾವ್ಯಮೆಂತಿರಲದೇಂ ರಮಣೀಯಮಹುದೇಂ ||

ಇವಲ್ಲದೆ ಹಿಡಿದರೆ ಬಿಡದ ವ್ಯಾಕರಣವೆಂಬ ಅಷ್ಟಪದಿಗಳಿಂದಲೂ; ಸಿಕ್ಕಿದರೆ ಸಾಕು ನುಂಗಿಬಿಡುವ ನೂರೆಂಟಲಂಕಾರಗಳೆಂಬ ತಿಮಿಂಗಿಲಗಳಿಂದಲೂ; ಸಂಕೀರ್ಣವಾದ ಶಾಸ್ತ್ರಾರ್ಥವಿಚಾರಗಳೆಂಬ ಜಲಚರಪ್ರಾಣಿಗಳಿಂದಲೂ; ಸಂಪ್ರದಾಯಬದ್ಧ ಗುಣ, ಶೈಲಿ, ರಸತತ್ತ್ವಾದಿಗಳೆಂಬ ಮೊಸಳೆಗಳ ಸಮೂಹದಿಂದಲೂ ತುಂಬಿ, ಈಜಿ ದಾಟಲತಿದುಸ್ತರವಾದ ಕಾವ್ಯವೆಂಬ ಸಮುದ್ರವನ್ನು ದಾಟಲು ಛಂದಸ್ಸೆಂಬ ನೌಕೆಯಿರದೆ ಅದೆಂತು ತಾನೇ ಸಾಧ್ಯವೆಂಬ ಭಾವನೆಯ ಈ ಕೆಳಕಂಡ ವೃತ್ತದ ಸೊಬಗನ್ನು ನೋಡಿ. ಇದು 25 ಅಕ್ಷರದ "ಅಲಂಕಾರ" ಎಂಬ ನವೋತ್ಪಾದ್ಯವೃತ್ತ.

ಅಭಿಕೃತಿ–ಅಲಂಕಾರ: 1,56,49, 015/3,35,54, 432

**ಭಂಭಸ ತಂತಜ ಸನಗಂ** ಕೂಡಲ್ಕಂಕಾರಮಿದೆಂದೊರೆವರ್ಕೈ ಬುಧಜನರ್.

ವ್ಯಾಕರಣಾಷ್ಟಪದಿಗಳಿಂ ನೂರೆಂಟಲಂಕಾರತಿಮಿಂಗಿಲಗಳಿಂ ವಿಷಮಶಾ
ಸ್ತ್ರೀಕವಿಚಾರಸಲಿಲತಿರ್ಯಗ್ಜಾತಿವ್ರಂದಂಗಳಮಾರ್ಗಗುಣಶೈಲಿಸುರಸಾ

ನೇಕನಿಬಂಧವುಕರಸಂತಾನಂಗಳಿಂ ತುಂಬಿರಲೀಜಲಧಿಸುಸ್ತರದ ಸ
ದ್ಧೀಕರಕಾವ್ಯಜಲಧಿಯಂ ದಾಂಟಲ್ಕೆ ಛಂದಃಪ್ಲವವಿಲ್ಲದಿರದೆಂತು ಸುಲಭಂ

ಇವೆಲ್ಲಕ್ಕೂ ಮಿಗಿಲಾಗಿ ಕಾವ್ಯತತ್ತ್ವ. ಅಲಂಕಾರ, ಛಂದಸ್ಸು ಮುಂತಾದವುಗಳನ್ನು ಗಾಳಿಗೆ ತೂರಿ ಯಾರಾದರೊಬ್ಬ ಕಾವ್ಯವನ್ನು ರಚಿಸುತ್ತಾನೆಂದರೆ, ಕಾಲುಗಳಿಲ್ಲದ ಒಬ್ಬಾನೊಬ್ಬ ಕುಂಟನು ಇಟ್ಟಿಮರವನ್ನೇರಿ ಅಲ್ಲಿ ರಸಭರಿತ ಮಾವಿನ ಹಣ್ಣುಗಳನ್ನು ಕಿತ್ತು ಸದ್ದೇಯಿಲ್ಲದೊಂದು ಸಂತೆಗೆ ಹೋಗಿ ಅವುಗಳನ್ನು ಕುರುಡನೋರ್ವಂಗೆ ಮಾರಲು. ಆತನು ಅವುಗಳನ್ನು ನಾಲಿಗೆಯೇ ಇಲ್ಲದೋರ್ವಂಗೆ ಕೊಡಲಾತನವುಗಳನ್ನು ಚಪ್ಪರಿಸಿ. ಸವಿದನೆಂಬುದು ಎಷ್ಟು ಅಸಂಭವವೋ ಅಷ್ಟೇ ಅಸಂಭವನೆಂಬ ಅಸಂಭಾವ್ಯಾಲಂಕಾರದ ಈ ಕೆಳಕಂಡ ವೃತ್ತವನ್ನು ಸವಿದಾನುವಿಸಿ.

ಇದು 25 ಅಕ್ಷರದ " ತತ್ತ್ವ " ಎಂಬ ನವೋತ್ಪಾದ್ಯವೃತ್ತ.

ಅಭಿಕೃತಿ–ತತ್ತ್ವ ; 93.44,148/3.35.54.432

•

**ಸರರಂ ರಂ ಯಜಂ ಸಂತಗಂ** ಸೇರೆ ಸಾರತತ್ತ್ವಂ ವಿರಾಜಿಪುದು ಛಂದಶ್ಶಾಸ್ತ್ರದೊಳ್ .
ವರವೃತ್ತಂ ಸ್ವಲಂಕಾರ ಮುಂತಾದ ಕಾವ್ಯತತ್ತ್ವಂಗಳಿಂ ತೀಯದಾತಂ ಕಾವ್ಯವ
ನ್ನೊರೆವಂ ಕೇಳಿರೆನ್ನಲ್ಲನಂ ಕುಂಟನೋರ್ವನೇರುತ್ತಲಿಟ್ಟಿಮರಮಂ ಮಾಂಪಣ್ಗಳಂ
ಪರಿಯುತ್ತಂ ಮುದಂಗೊಂಡು ಸದ್ದಿಲ್ಲದೆಂದು ಪೇರ್ಸಂತೆಯೊಳ್ಕುರುಡನೋರ್ವಂಗೀಯಲಾ
ಕುರುಡಂ ಜಿಹ್ವೆಯೇಯಿಲ್ಲದೋರ್ವಂಗದಂ ಕೊಡಲ್ಕಾತ ಚಪ್ಪರಿಪನೆಂಬಂತವೃದ್ಧೈ ||

ಛಂದಸ್ಸಿನಾದ್ಯತೆಯ ಬಗ್ಗೆ ಇಷ್ಟನ್ನು ಹೇಳಿ ಇನ್ನು ಮುಂದೆ ಕೆಲವು ನೂತನ ವೃತ್ತಗಳಾವಿಷ್ಕರಣದ ಸಾಧ್ಯತೆಯನ್ನು ಪರಿಭಾವಿಸೋಣ. ಸಂಗೀತಶಾಸ್ತ್ರದಲ್ಲಿ ರಾಗ, ತಾನ, ಪಲ್ಲವಿಗಳಿಗೆ ಪ್ರಮುಖಸ್ಥಾನವಿದೆ. ಅವುಗಳಲ್ಲಿ ಪಲ್ಲವಿಗೆ ಅಗ್ರಪಟ್ಟ. ಈ ಪಲ್ಲವಿಯಲ್ಲಿ ಸಾಕಷ್ಟು ಪ್ರಭೇದಗಳಿವೆ ಎಂಬುದು ಸಂಗೀತಜ್ಞರ ನಿಲುವು. ಅಂತಹ ಪ್ರಭೇದಗಳಲ್ಲಿ "ಸ್ವರಾಕ್ಷರಪಲ್ಲವಿ" ಎಂಬುದು 'ಚಿತ್ರಕವಿತ್ವ' ದಂತೆ ಅಪೂರ್ವವಾದದ್ದು ಎಂಬುದವರ ಅಭಿಮತ. ಸರಿಗಮಪದನಿ ಹಾಗೂ ಇವುಗಳ ದೀರ್ಘಾಕ್ಷರಗಳಾದ ಸಾ ರೀ ಗಾ ಮಾ ಪಾ ದಾ ನೀ ಎಂಬ ಈ 14 ಅಕ್ಷರಗಳೇ ಬರಬೇಕು. ಸಾಹಿತ್ಯ ಅರ್ಥವತ್ತಾಗಿರಬೇಕೆಂಬುದೇ ಇದರ ವಿಶಿಷ್ಟಲಕ್ಷಣ. ಪಲ್ಲವಿಗೆ ಹೆಸರಾಂತಿದ್ದ ಕೈ || ಪಲ್ಲವಿ ಚಂದ್ರಪ್ಪನವರು ಇದಕ್ಕೆ ಉದಾಹರಣೆಯಾಗಿ 'ಸಾಮಗಾನಲೋಲಿ' ಎಂಬುದನ್ನು ಒಂದು ಲೇಖನದಲ್ಲಿ ಕೊಟ್ಟಿದ್ದರು. ಈ ಉದಾಹರಣೆಯಲ್ಲಿ "ಸಾಮಗಾ" ಸ್ವರಾಕ್ಷರಗಳಾದರೆ "ನಲೋಲಿ" ಸ್ವರಾಕ್ಷರಗಳಲ್ಲವಲ್ಲಾ. ಸೂತ್ರಕ್ಕೆ ಅನ್ವಯವಾಗುವುದಿಲ್ಲವಲ್ಲಾ ಎಂದು ಶಂಕಿಸಿ ಸೂತ್ರಕ್ಕೆ ತಕ್ಕಂತೆ ಸ್ವರಾಕ್ಷರಪಲ್ಲವಿಯನ್ನು ರಚಿಸಬಹುದೇ ಎಂದು ಹನ್ನೆರಡು ವರ್ಷಗಳ ಹಿಂದೆ ಪ್ರಯತ್ನಿಸಿದುದರ ಫಲವಾಗಿ

1. ಸಾಮನಿಗಮದ ದಾರಿ ಗಮನಿಸದ ನೀ ಮಾರಿ
2. ಸಾಮನಿಗಮದ ದಾನಿ ನಿಸದ ಮಾನಿಸಮಾನಿ
3. ದಾಸಪದಸಮಾಗಮ ಸಾಮನಿಗಮಸರಿಸಮ
4. ಪಾಪ ದಮನಿಸದ ನೀ ಮಾರಿಮಾನಿನಿದಾಸ

ಈ ನಾಲ್ಕು ಸ್ವರಾಕ್ಷರಪಲ್ಲವಿಗಳ ಸಾಹಿತ್ಯವನ್ನು ರಚಿಸಿದ್ದೆ ; ಅದಂತಿರಲಿ.

ಈಗ ಅದೇ ರೀತಿ "ಗಣಾಕ್ಷರವೃತ್ತ" ಗಳನ್ನು ಅಂದರೆ ವೃತ್ತದ ಹೆಸರಿನಲ್ಲಿಯೇ ಅದರ ಲಕ್ಷಣವಿದ್ದು, ಅದೆಂತೆಂದರೆ ಆ ಹೆಸರಿನಲ್ಲಿ ಬರುವ ವರ್ಣಗಣ (ತ್ರಿಕ) ಹಾಗೂ "ಲಗ"ಗಳಿದ್ದು ಹೆಸರು ಅರ್ಥವತ್ತಾಗಿರುವಂತೆ ರಚಿಸಬಹುದೇ ಎಂಬುದು ಈ ಆವಿಷ್ಕರಣದ ವಿಷಯ. ಉದಾಹರಣೆಗೆ 15 ಅಕ್ಷರದ ಅತಿಶಕ್ವರಿಸಂಜ್ಞೆಯಲ್ಲಿ ರಚಿಸಬಹುದಾದ 32,768 ವೃತ್ತಗಳಲ್ಲಿ 29,696ನೆಯ ವೃತ್ತವನ್ನು ತ್ರಿನಯನ (ನನನಯನ) ಎಂದು ಹೆಸರಿಸಿ ಮುಕ್ಕಣ್ಣನ ಸ್ತೋತ್ರವನ್ನು ಕೆಳಕಂಡಂತೆ ಮಾಡಬಹುದೆಂಬುದನ್ನು ಪರಾಂಬರಿಸಿ

ಅತಿಶಕ್ವರಿ – ತ್ರಿನಯನ : 29,696/32,768

ತಳೆದಿಜೆ ತೆರನ ತ್ರಿನಯನಂ ತನ್ನೊಳಗೆ
ಶಮನಮದನಮದಹರಮಾನಂದಘನ
ಮಮರಧನದಸಖಮನಘಂ ಸೋಮಧರ
ಮಮಲಮಚಲಮಧಿಕಮನಂತಂ ತ್ರಿನಯ
ನಮನುಪಮಮಿಳೆಯನನಿಶಂ ಪಾಲಿಸುಗೆ ||

ಇದೇ ರೀತಿ ರಸಸಮರ, ನರಯಮ, ರಜತನಗ ಮುಂತಾದ ಹಲವಾರು ಗಣಾಕ್ಷರ ವೃತ್ತಗಳನ್ನು ರತಿಕ್ರೀಡೆಯ ವರ್ಣನೆಗೆ, ಬಹುದುಷ್ಪಮಾನವನ ವರ್ಣನೆಗೆ, ಕೈಲಾಸ, ಪರ್ವತದ ವರ್ಣನೆಗೆ ಕ್ರಮವಾಗಿ ಹೊಂದಿಸಿಕೊಳ್ಳಬಹುದು. ಅಂತೆಯೇ ಸಮರಸ. ಪರಸಮಯ ಎಂದೂ ಬಹಳವಾಗಿ ಮುಂದುವರಿಸಬಹುದು.

ಇದಕ್ಕೂ ಮಿಗಿಲಾಗಿ ಸಂಗೀತಶಾಸ್ತ್ರದಲ್ಲಿ ಕೆಲವು ಕಡೆ 'ಸಸ' ಬಂದಾಗ "ಸಾ" ಎಂದೂ "ಮಮ" ಬಂದಾಗ "ಮಾ" ಎಂದೂ ದೀರ್ಘೀಕರಿಸಿ ಹಾಡುವ ಪರಿಪಾಠವಿದೆ. ಇದೇ ರೀತಿಯಲ್ಲಿ ವರ್ಣಚ್ಛಂದಶ್ಶಾಸ್ತ್ರದಲ್ಲಿಯ 'ಮಯರಸತಜಭನ' ಗಣಗಳ ಹಾಗೂ "ಲಗ"ಗಳ ಎರಡೆರಡಕ್ಕೆ "ಮಾಯಾರಾಸಾತಾಜಾಭಾನಾಲಾಗಾ" ಎಂದು ಹೊಂದಿಸಿಕೊಂಡು ಮತ್ತು ಈಗ ಪ್ರಚಲಿತದಲ್ಲಿರುವ ವೃತ್ತಲಕ್ಷಣಗಳಲ್ಲಿ "ಲಗ"ಗಳು ಕೊನೆಯಲ್ಲಿ ಬರುತ್ತಿರುವುದರ ಜೊತೆಗೆ "ಮಯರಸತಜಭನ"ಗಳ ಮಧ್ಯದಲ್ಲಿ ಬರುವಂತೆಯೂ ಹೊಂದಿಸಿಕೊಂಡರೆ ಸಹಸ್ರಾರು ಗಣಾಕ್ಷರವೃತ್ತಗಳನ್ನು ರಚಿಸಬಹುದು ಉದಾಹರಣೆಗೆ 22 ಅಕ್ಷರದ ಆಕೃತಿಸಂಜ್ಞೆಯಲ್ಲಿ ರಚಿಸಬಹುದಾದ 41, 94, 304 ವೃತ್ತಗಳಲ್ಲಿ 11, 60, 412ನೆಯ ವೃತ್ತಕ್ಕೆ "ಸಂಸಾರಸಾಗರ" ಎಂದು ಹೆಸರಿಟ್ಟು ಒಂದು ಗಣಾಕ್ಷರ ವೃತ್ತವನ್ನು ರಚಿಸಿ, ಸಂಸಾರವೆಂಬ ಘೋರಸಾಗರವನ್ನು ದಾಟುವ ಪರಿಯಾವುದೆಂದರೆ

ತಾನಾರೆಂದರಿವ ಜ್ಞಾನವೆಂಬುದನ್ನು ವರ್ಣಿಸಬಹುದು. ಸಾಂಪ್ರದಾಯಿಕವಾಗಿ ರಚಿಸಿದರೆ **ಸಸಸಂ ರಸಸಂಗರ** ಸಂಸಾರಸಾಗರವೆಂಬರಹೋ ಛಂದೋವಿದರ್ ಎಂಬುದಮ್ಮ ಮೇಲೊರೆದ ಗಣಾಕ್ಷರವೃತ್ತಲಕ್ಷಣದಂತೆ ರಚಿಸಿದರೆ ಇದನ್ನು "ಸಂಸಾರ ಸಾಗರ" ವೃತ್ತವೆನ್ನಬಹುದು.

ಸಂ ಸಾ ರ ಸಾ ಗ ರ

ಸ ಸ ಸ ರ ಸ ಸ ಗ ರ

ᴗᴗ_ · ᴗᴗ_ · ᴗᴗ_ · _ᴗ_ · ᴗᴗ_ · ᴗᴗ_ · _ · _ᴗ_

ಇದರ ಲಕ್ಷ್ಯಪದ್ಯ ಕೆಳಕಂಡಂತಾಗಬಹುದು.

ಘನಬುದ್ಧ್ಯಹಮಾನಹುದಲ್ಲಂ ವ ನಸ್ಸಯಿದಿಂದ್ರಿಯಗಳ್ಕೇಣ್ಭೂತಗ
ಳ್ತನವುಂ ಪವನಾದಿಗಳುಂ ನಾನೆನಲ್ದಿಟವಲ್ಲಮುದನ್ನಾರಯ್ದು ನೋ
ಳ್ಪನೆ ದಾಂಟಲಸಾಧ್ಯದ ಸಂಸಾರಸಾಗರವನ್ನುರೆ ದಾಂಟಲ್ಸಾಧ್ಯಮಾ
ತನ ಜನ್ಮಮೆ ಸಾರ್ಥಕಮಾರಯ್ಯೆ ಮಾನವಜನ್ಮದ ಲಾಭಂ ಜ್ಞಾನವೈ ॥

ಅಂತೆಯೇ 22 ಅಕ್ಷರದ ಆಕೃತಿಸಂಜ್ಞೆಯಲ್ಲಿ 6, 35, 4೨7 ನೆಯ ವೃತ್ತಕ್ಕೆ "ಮಾಯಾಸಾರಂಗ" ಎಂದು ಹೆಸರಿಸಿ ಕೆಳಕಂಡಂತೆ ಸೂತ್ರೀಕರಿಸಿ, ಚಿನ್ನದ ಮಾಯಾ ಸಾರಂಗವನ್ನು ನೋಡಿಯದನ್ನು ತರಲೇಬೇಕೆಂದು ಪತಿಯನ್ನು ಕಾಡಿ ಸೀತೆ ಹಟ ಹಿಡಿದಾಗ ರಾಮನದನ್ನು ಜೀವಂತ ಹಿಡಿಯಲು ಹೋಗಿ, ಆಗದಿರೆ ಕೊನೆಗೆ ಕೊಂದಾದರೂ ತರೋಣವೆಂದು ಬಾಣಬಿಟ್ಟಾಗಲದು ಲಕ್ಷ್ಮಣಾಲಕ್ಷ್ಮಣಯೆಂದು ರಾಮಧ್ವನಿಯಲ್ಲಿ ಚೀರಿದಾಗ ಸೀತೆ ಲಕ್ಷ್ಮಣನನ್ನು ಕಾಡಿಗಟ್ಟಿ ರಾವಣನಿಗೆ ವಶವಾಗಬೇಕಾಯಿತದರಿಂದ ಹಟ ತುಂಬಾ ಕೆಟ್ಟದೆಂದೊರೆಯುವ ನೀತಿವಿಷಯವನ್ನೊಳಗೊಂಡ ಕೆಳಕಂಡ ವೃತ್ತವನ್ನು ಹೀಗೆ ರಚಿಸಬಹುದು.

ಮಾ ಯಾ ಸಾ ರಂ ಗ

ಮ ಮ ಯ ಯ ಸ ಸ ರ ಗ

_ _ _ · _ _ _ · ᴗ _ _ · ᴗ _ _ · ᴗᴗ_ · ᴗᴗ_ · _ᴗ_ · _

**ಮಾಯಾಸಾರಂಗಂ** ಛಂದಮುಂ ತನ್ನೊಳಾಂತಿರ್ಕುಮದಂ ನಿಗದಿಂ ನೋಡೆ ವೇದ್ಯಂ

ಮುನ್ನಂ ಮಾಯಾಸಾರಂಗಮಂ ಕಂಡದಂ ತನ್ನಿರೆನುತ್ತ ಹಟಂಗೈಯೆ ರಾಮಂ
ಬೆನ್ನಟ್ಟುತ್ತಂ ಬಾಣಂ ಬಿಡಲ್ಲಕ್ಷ್ಮಣಾಲಕ್ಷ್ಮಣಯೆಂದದು ಚೀರುತ್ತ ಸಾಯ
ಲ್ತನ್ನಾಣ್ಮಂ ಕೂಗುತಿರ್ಪನೋಡೋಡುಯೆನ್ನುತ್ತವನೀಸುತೆ ಸೌಮಿತ್ರಿಯಂ ಪೋ
ಗೆನ್ನಲ್ಕಾತಂ ಬೇಡೆಂದೊಡಂ ಕೇಳದಟ್ಟಲ್ಕವಳಂ ದನುಜಂ ಕದ್ದನಲ್ತೆ॥

ಮತ್ತು 18 ಅಕ್ಷರದ ಧೃತಿಸಂಜ್ಞೆಯಲ್ಲಿ 41,537 ನೆಯ ವೃತ್ತಕ್ಕೆ "ಮಾಯಾಮಯ" ವೃತ್ತವೆಂದು ಹೆಸರಿಸಿ ಕೆಳಕಂಡಂತೆ ಸೂತ್ರೀಕರಿಸಿ, ಅನಂತವಾದ ಕಾಲಕ್ಕೊಳಗಾಗುತ್ತಿರುವ ಈ ಲೋಕವು ಮಿಥ್ಯೆ, ಶಾಶ್ವತವಲ್ಲ ; ಯಾರೂ ಏನನ್ನೂ ಶಾಶ್ವತವಾಗಿ ಭೋಗಿಸಲಿಕ್ಕೆ ಸಾಧ್ಯವಿಲ್ಲ, ಈ ಲೋಕ ವಿಚಾರಿಸಿ ನೋಡಿದರೆ ಮಾಯಾಮಯವೇ ಎಂಬರ್ಥ ಕೊಡುವ ವೇದಾಂತಿಯ ಸಿದ್ಧಾಂತವನ್ನು ಹೀಗೆ ನಿರೂಪಿಸಬಹುದು.

ಮಾ ಯಾ ಮ ಯ

ಮ ಮ ಯ ಯ ಮ ಯ

— — — · — — —· ∪ — —· ∪— — ·— — — ·∪— —

ತನ್ನಲ್ಲೇ ತಾನಾಂತಿರ್ಪುದೈ ಛಂದಮುಂ ಚೋದ್ಯಂ **ಮಾಯಾಮಯಂ** ಪಾರ್.

ಈ ಲೋಕಂ ನೋಡಲ್ಯಾರಿಗುಂ ಶಾಶ್ವತಂ ತಾನಲ್ಲಂ ಯಾರು ತಾನೀ
ಭೂಲೋಕಕ್ಕೈತಂದೇನ ತಾಂ ಭೋಗಿಪರ್ದೇಹಂ ತಾಳ್ದಿಲ್ಲಿಗೈದ
ಲ್ಕಾಲಕ್ಕೆಂದೆಂದುಂ ತನ್ನ ತಾನರ್ಪಣಂಗೈಯಲ್ವೇಳ್ಕುಂ ವಿಚಾರಂ
ಗೈ ಲೋಕಂ ಮಿಥ್ಯಂ ಮಾನವಾ ಸತ್ಯಮಲ್ಲಂ ದುರ್ಮಾಯಾಮಯಂ ಪಾರ್||

ಇದೇ ಧೃತಿಸಂಜ್ಞೆಯಲ್ಲಿ 32, 275ನೆಯ ವೃತ್ತಕ್ಕೆ "ರಾಮನಾಮ" ವೃತ್ತವೆಂದು ಹೆಸರಿಸಿ, ರಾವಣನು ಸೀತೆಯನ್ನು ಲಂಕೆಗೆ ಕದ್ದೊಯ್ದಾಗ, ಸಮುದ್ರವನ್ನು ದಾಟಲಾರದೆ ರಾಮನು ಪರಿತಪಿಸುತ್ತಿರುವಾಗ ರಾಮಭಂಟನಾದ ಹನುಮಂತನು ರಾಮನಾಮವನ್ನುಚ್ಚರಿಸುತ್ತಾ ಉಚ್ಚರಿಸುತ್ತಾ ಸಮುದ್ರವನ್ನು ದಾಟಿದನೆಂದ ಮೇಲೆ ರಾಮನಾಮವು ರಾಮನಿಗಿಂತಲೂ ಮಿಗಿಲೆಂದೂ, ಇದು ತುಂಬಾ ಚೋದ್ಯವೆಂದೂ ಬಣ್ಣಿಸುವ ವೃತ್ತವನ್ನು ಕೆಳಕಂಡಂತೆ ರೂಪಿಸಬಹುದು.

ರಾ ಮ ನಾ ಮ

ರ ರ ಮ ನ ನ ಮ

—∪ —· — ∪ —· — — — ·∪∪∪· ∪∪∪· — — —

**ರಾಮನಾಮಂ** ವಿರಾಜಿಕ್ಕುಂ ಛಂದಮನೊಡಲೊಳಗಾನುತ್ತಂ

ಜಾಯೆಯುಂ ಕದ್ದು ಲಂಕೇಶಂ ಸಾಗೆ ರಘುಜನುದಮುಂ ದಾಂಟ
ಲ್ಗೈಯೆ ಯತ್ನಂಗಳಂ ಮಾರ್ಗಂಗಾಣದಿರೆ ಪವನಪುತ್ರಂಗ
ಲ್ಪಾಯಸಂಗೊಳ್ಳದೋಂ ರಾಮಾರಾಮಯೆನುತುದಧಿಯಂ ದಾಂಟ
ಲ್ಕಾಯಿತ್ತೈ ರಾಮನಾಮಂ ರಾಮಂಗೆ ಮಿಗಿಲಿರಲದೇಂ ಚೋದ್ಯಂ ||

ಈ ಪ್ರಯೋಗವನ್ನೇ ಇನ್ನೂ ಸ್ವಲ್ಪ ವಿಸ್ತರಿಸುವುದಾದರೆ ಅಂದರೆ "ಮಯರಸತಜ ಭನಲಗ" ಗಳಲ್ಲಿ ಅಲ್ಪಪ್ರಾಣಗಳಾದ "ತಜಗ" ಗಳಿಗೆ ಮಹಾಪ್ರಾಣಗಳಾದ "ಥಝಘ" ಗಳನ್ನೂ, ಮಹಾಪ್ರಾಣವಾದ "ಭ" ಕ್ಕೆ ಅಲ್ಪಪ್ರಾಣವಾದ "ಬ"ವನ್ನು ಕೂಡ ತೆಗೆದು ಕೊಳ್ಳಬಹುದೆಂದೂ, ಮತ್ತು ದ್ವಿತ್ವಾಕ್ಷರಗಳನ್ನು ಅವುಗಳ ಉಚ್ಚಾರಕ್ರಮದಂತೆ ಬಿಡಿಸಿ ಕೊಳ್ಳಬಹುದೆಂದೂ, ಅಂದರೆ ಉದಾಹರಣೆಗೆ "ಜ್ಜ" ಬಂದಾಗ "ಜಜ" ಎಂದೂ "ಜ್ಯ" ಬಂದಾಗ "ಬಂದಾಗ" "ಜಯ" ಎಂದೂ "ನ್ಮ" ಬಂದಾಗ "ನಮ" ಎಂದೂ ಪರಿಗಣಿಸಿ ಕೊಳ್ಳುವುದಾದರೆ ಸಹಸ್ರಗಟ್ಟಲೆ ಗಣಾಕ್ಷರವೃತ್ತಗಳನ್ನು ರಚಿಸಬಹುದು. ಉದಾಹರಣೆಗೆ:

ಅಷ್ಟಿಸಂಜ್ಞೆ–ಘನಸಜ್ಜನ : 63,167/65,536.

ಘ ನ ಸ ಜ್ಜ ನ

ಗ ನ ಸ ಜ ಜ ನ

_· ∪∪∪· ∪∪ _· ∪_ ∪· ∪ _∪· ∪∪∪

**ತನ್ನೊಳಗೆ ಘನಸಜ್ಜನಂ ತೆರನಾಂತಿಹುದಲೆ.**

ಕಳ್ಳನೆನಿಸದೆ ಸುಳ್ಳನಾಡದೆ ಮಾನ್ಯನೆನಿಸು
ತೆಲ್ಲರ ಸುಖಕೆ ತನ್ನದೆಲ್ಲವನರ್ಪಿಸಿ ಜಗ
ಕೊಳ್ಳತನೆಸಗೆ ತಾಳ್ಮೆಯಿಂ ದುಡಿವಂಥ ಸುಗುಣ
ಮುಳ್ಳವನೆ ಘನಸಜ್ಜನಂ ಧರೆಗಾತನೆ ಗುರು ||

ಅಂತೆಯೇ ಪ್ರಕೃತಿಸಂಜ್ಞೆಯಲ್ಲಿ ರಾಮರಾಜ್ಯವೃತ್ತವನ್ನು ರಚಿಸಬಹುದು.

**ಪ್ರಕೃತಿಸಂಜ್ಞೆ– ರಾಮರಾಜ್ಯ** : 4, 35, 219/20, 97, 152

ರಾ ಮ ರಾ ಜ್ಯ

ರ ರ ಮ ರ ರ ಜ ಯ

— ∪ _· — ∪ _· — — — · _ ∪_ · _∪ _· ∪_ ∪· ∪_ _

ತನ್ನೊಳಾಂತರ್ಯದೊಳ್ಛಂದಸ್ಸಂ ತಾಳ್ದ ರಾಮರಾಜ್ಯಮೆಲ್ಲರೊಳಾದ್ಯಂ
ಪಾಪಿಗಳ್ಭ್ರಷ್ಟದುಷ್ಟದುರ್ವ್ಯಾಪಾರಿಗಳ್ಕ್ಯಾತ್ಯಚೋರರಿಲ್ಲದ ನಾಡೊ
ಳ್ತಾಪಮುಂ ನಷ್ಟಮುಂ ಕಷ್ಟಂಕಾರ್ಪಣ್ಯಮುಂ ಮೇಲುಕೀಳುಮಿಲ್ಲದೆ ಧರ್ಮಂ
ವ್ಯಾಪಿಸೆಲ್ಲೆಲ್ಲುಮಾನಂದಂ ಸೂಸಲ್ಕದೇ ರಾಮರಾಜ್ಯಮಂತಹುದಂ ಸಂ
ಸ್ಥಾಪಿಸಲ್ಗಾಂಧಿ ಯತ್ನಂಗೈದರ್ನಾವದಂ ದೈತ್ಯರಾಜ್ಯಗೈದಿಹೆವಲ್ತೇಂ ||

ಮತ್ತೊಂದು ರೀತಿಯ ಪ್ರಯೋಗವನ್ನೂ ಸಹ ನಾವು ಕೈಕೊಳ್ಳಬಹುದು. ಅದೇನೆಂದರೆ ಪದ್ಯ ರಚಿಸುವಾಗ ಪ್ರಾಸಾಭಾಸದಡಿಯಲ್ಲಿ ಪ್ರಾಸಾಕ್ಷರ ಹೊಂದಿಸಲು "ಸ" ಕ್ಕೆ "ಶ" ಮತ್ತು "ಷ" ಗಳನ್ನು ಹೊಂದಿಸಿ "ಸಮೀಪಪ್ರಾಸ" ವೆಂದೂ "ನ" ಕ್ಕೆ

"ಣ" ಹೊಂದಿಸಿ "ಲ" ಕ್ಕೆ "ಳ" ಹೊಂದಿಸಿ "ಅಭೇದಪ್ರಾಸ" ವೆಂದೂ"ಬ" ಮುಂತಾದ ಅಲ್ಪಪ್ರಾಣಾಕ್ಷರಗಳಿಗೆ "ಭ" ಮುಂತಾದ ಮಹಾಪ್ರಾಣಾಕ್ಷರಗಳನ್ನು ಹೊಂದಿಸಿ "ಮಿತ್ರಪ್ರಾಸ" ವೆಂದೂ ಕರೆದು ಪ್ರಾಸಾಕ್ಷರ ಜೋಡಿಸುವ ಪದ್ಧತಿಯಿದೆ. ಆ ಪ್ರಯೋಗವನ್ನೇ ವರ್ಣಚ್ಛಂದಶ್ಶಾಸ್ತ್ರದಲ್ಲಿಯೂ ಪ್ರಯೋಗಿಸಿ "ಮಯರಸತಜಭನಲಗ" ಗಳಲ್ಲಿ "ಸ" ಕ್ಕೆ "ಶ" ಮತ್ತು "ಷ" ಗಳನ್ನೂ, "ನ"ಕ್ಕೆ "ಣ"ವನ್ನೂ, "ಲ"ಕ್ಕೆ "ಳ" ವನ್ನೂ "ಭ" ಕ್ಕೆ "ಬ" ವನ್ನೂ ಪಲ್ಲಟಿಸುವುದಾದರೆ ಇನ್ನೂ ಸಹಸ್ರಗಟ್ಟಲೆ ಗಣಾಕ್ಷರ ವೃತ್ತಗಳನ್ನು ರಚಿಸಬಹುದು.

"ಸ"ಕ್ಕೆ "ಶ" ಪಲ್ಲಟದ ಹಾಗೂ "ನ" ಕ್ಕೆ "ಣ" ಪಲ್ಲಟದ ಉದಾಹರಣೆಗೆ :

**ಸಂಕೃತಿ — ನಾರಾಯಣಶರ** : 52, 15, 424/1, 67, 77, 216

ನಾ ರಾ ಯ ಣ ಶ ರ

ನ ನ ರ ರ ಯ ನ ಸ ರ

∪∪∪· ∪∪∪· —∪—· —∪—· ∪——· ∪∪∪· ∪∪—· —∪—

ಧರೆಯೆ ರಥಮಿನೇಂದುಗಳ್ಗಾಲಿಗಳ್ಚತುರ್ವೇದಗಳುರುತರಾಶ್ವಂ ವಸುಂ
ಧರೆಯ ತಳೆದ ಮೇರುಶೈಲಂ ಧನುಸ್ಸು ನಾಗೇಂದ್ರನುರುಪೆದೆ ವಾರ್ಣಿಧವಂ
ಸುರಥಿಕನಿವನಾಂತು ತಾನೊಂದೆಬಾಣದಿಂದೆಚ್ಚಿ ತ್ರಿಪುರಗಳಂ ಸುಟ್ಟು ಶಿ
ಷ್ಟರನುಳುಹಿದ ಭಕ್ತಸಂರಕ್ಷಲೋಲ ನಾರಾಯಣಶರನಿಗಾಂ ವಂದಿಪೆಂ ॥

"ಸ" ಕ್ಕೆ "ಷ" ಪಲ್ಲಟದ ಹಾಗೂ "ನ" ಕ್ಕೆ "ಣ" ಪಲ್ಲಟದ ಉದಾಹರಣೆಗೆ :

**ಪ್ರಕೃತಿ — ಸರಸಭಾಷಣ** : 19, 61, 172/20, 97, 152

ಸ ರ ಸ ಭಾ ಷ ಣ

ಸ ರ ಸ ಭ ಭ ಸ ನ

∪∪— · — ∪ —· ∪∪— · — ∪∪· —∪∪· ∪∪ — · ∪∪∪

ನಿಗದಿಂ ವೈರಿಯಾಡುವ ಮಾತಂ ತವೆತಾಳ್ಮೆಯಿನುರೆಕೇಳ್ದದಕೆ
ಜಗ ಸ್ಸೈಯೆಂಬವ್ರೋಲ್ಬಡಲಂ ಪೇಳ್ದು ಸದಾ ನಗುನಗುತಂ ಹಿತನು
ಡಿಗಳನ್ನಾಡಿ ಸೋವನಿನಿತ್ತುಂ ಕೊಡದಂತೆ ಸರಸಭಾಷಣವೆ
ಸಗಲಾತಂ ನಿಜಾಪ್ತನೆನಿಪ್ಪಂ ದಿಟವೆಂಬರು ನುಡಿಬಲ್ಲಿದರು ॥

"ಲ" ಕ್ಕೆ "ಳ"ಪಲ್ಲಟದ ಹಾಗೂ "ಭ" ಕ್ಕೆ "ಬ" ಪಲ್ಲಟದ ಉದಾಹರಣೆಗೆ :

**ಅತ್ಯಷ್ಟಿ — ಬಾಲಮರಾಳ** : 84, 087/1, 31, 072

ಬಾ ಲ ಮ ರಾ ಳ

ಭ ಭ ಲ ಮ ರ ರ ಲ

_ UU· _UU· U· _ _ _ · _U_ · _ U_ · U

ಬಾಲಮರಾಳನಡೆಯಿಂ ಪದ್ಮಾಕ್ಷಂಗಳಿಂ ಕಾಳಸರ್ಪ
ದೋಲಿಹ ನೀಳಜಡೆಯಿಂ ಬಿಂಬೋಷ್ಠಂಗಳಿಂ ನುಣ್ಕಪೋಲ
ಫಾಲಗಳಿಂ ಸರಸವಾಕ್ಸಂಪತ್ತಿಂ ಸದಾ ಮಂದಹಾಸ
ಲೋಲಲೆನಿಪ್ಪ ಗುಣಸಂಪನ್ನಳ್ಸಿಕ್ಕೆ ಬೇಕಂತೆ ಪುಣ್ಯ ||

"ಭ" ಕ್ಕೆ "ಬ" ಪಲ್ಲಟದ ಉದಾಹರಣೆಗೆ :

**ಪ್ರಕೃತಿ — ಬಜ್ಜರಾಸನ :** 19, 42, 895/20, 97, 152

ಬ ಜ್ಜ ರಾ ಸ ನ

ಭ ಜ ಜ ರ ರ ಸ ನ

_UU· U _U· U_ U· _U _· _U_ ·UU_ · UUU

ನೀತಿಯೊಳು ರಾಜ್ಯಮನಾಳ್ದು ನ್ಯಾಯಧರ್ಮಂಗಳಂ ಪರಿಪಾಲಿಸುತ
ಖ್ಯಾತನೆನಿಸರ್ದ ಮಹಂತವಿಕ್ರಮಾದಿತ್ಯರಾಯನನಂತರದಿ
ಹೂತಡಗಿದಂತಹ ಬಜ್ಜರಾಸನಂ ತನ್ನ ಮೇಲ್ಕುಳಿತಾತನಿಗೆ
ನೀತಿ ಪರಿಪಾಲಿಪ ಬುದ್ಧಿ ನೀಡುತಿತ್ತೆಂದು ಪೇಳುವರ್ಪೈ ಬುಧರು ||

ಈ ರೀತಿ ಸಂಪ್ರದಾಯವನ್ನು ಸ್ವಲ್ಪ ವಿಸ್ತೃತಗೊಳಿಸಿದರೆ ಗಗನಸಾರಸ, ಜಲಸಮರ, ಸಾರಸನಯನ, ರಸರಾಜ, ನಾಗರಾಜ, ಗಾನರಸ, ಜಲಗಾರ, ಮಂಗಳಾರಮಣ ನಲ್ಲರಸ, ಶ್ಮಶಾನ, ರಾಜಮಾತಾ, ಸಾಮ್ರಾಜ್ಯ, ಭ್ರಮರಗಾನ, ಸಮಗ್ರಸಾರ, ಮರಣಭಯನಾಶ ಸಂಸ್ಮರಣ, ನರನಾರಾಯಣ, ಮಂಗಳಾಭರಣ, ಸಜ್ಜನಮಾನ್ಯ, ಮಜ್ಜನಜಲ, ಜಲಜನಾಭ, ರಾಜಶಾಸನ ಮುಂತಾದ ಲಕ್ಷಗಟ್ಟಲೆ ಗಣಾಕ್ಷರವೃತ್ತಗಳ ಆವಿಷ್ಕರಣವಾಗಬಹುದು. ಹೀಗೆ ರಚಿಸುವುದರಿಂದ ಸೂತ್ರಗಳನ್ನು ಸ್ಮರಣೆಯಲ್ಲಿಟ್ಟುಕೊಳ್ಳುವ ಭಾರ ತಪ್ಪುತ್ತದೆ. ಈ ನೂತನಾವಿಷ್ಕರಣವು ಸಂಪ್ರದಾಯಕ್ಕೆ ಹೆಚ್ಚಿನ ಕುಂದು ತರುವುದಿಲ್ಲವೆಂದು ನನ್ನ ಭಾವನೆ. ಒಂದು ವೇಳೆ ಮೇಲಿನ ಜಿಜ್ಞಾಸೆ ಛಂದಶ್ಶಾಸ್ತ್ರ ನಿಯಮಕ್ಕೆ ಸಮಂಜಸವಲ್ಲ ಎಂದು ಅನಿಸಿದರೆ, ದಯವಿಟ್ಟು ಸಹೃದಯ ವಿದ್ವಾಂಸರು ಶಾಸ್ತ್ರೋಕ್ತವಾಗಿ ತಿಳಿಸಿದರೆ ಇದನ್ನು ಕೈಬಿಡೋಣ*.

# ಟೀಕೆ-ಟಿಪ್ಪಣಿಗಳು

---

## 1. ಬೌದ್ಧಾವತಾರ–ಒಂದು ಟಿಪ್ಪಣಿ

"ದಾಸ ಸಾಹಿತ್ಯದಲ್ಲಿ ಬೌದ್ಧಾವತಾರ" ಎಂಬ ಶೀರ್ಷಿಕೆಯ ಲೇಖನವೊಂದು ಜೂನ್, ೧೯೯೫ರ ಸಂಚಿಕೆಯಲ್ಲಿ ಬಂದುದು ಈ ಕೆಳಗಿನ ಟಿಪ್ಪಣಿಗೆ ಕಾರಣವಾಯಿತು.

ಮಹಾವಿಷ್ಣುವಿನ ದಶಾವತಾರಗಳಲ್ಲಿ ಮೊದಲಿನ ಎಂಟನ್ನು ಕುರಿತು ಬಹಳ ವಿವಾದವಿಲ್ಲವೆ ? ಉಂಟು. ಆದರೆ, ಒಂಬತ್ತನೆಯದಾದ **ಬೌದ್ಧಾವತಾರದಲ್ಲಿ ಮಿತಿ** ಮೀರಿದ ಗೊಂದಲವುಂಟು. ಹತ್ತನೆಯ ಅವತಾರವಾದ **ಕಲ್ಕಿ** ಇನ್ನೂ ಆವಿರ್ಭವಿಸದಿರುವುದರಿಂದ ಏನೂ ಹೇಳುವಂತಿಲ್ಲ. ಬೌದ್ಧಾವತಾರದಲ್ಲಿ ಬರುವ ಬುದ್ಧನೂ ಗೌತಮ ಬುದ್ಧನೂ ಬೇರೆ ಬೇರೆ ಎಂದು ಹೇಳುವುದು ತೀರ ಅಸಮಂಜಸ. ಏಕೆಂದರೆ, ಬುದ್ಧನ ಹಿಂದಿನ ಕೃಷ್ಣಾದ್ಯವತಾರಗಳ ವಿವರ ಹೇರಳವಾಗಿರುವಾಗ, ತದನಂತರದ ಬುದ್ಧನ ಬಗೆಗೆ ಸಾಕಷ್ಟು ತಿಳಿವಳಿಕೆ ಇರಲೇ ಬೇಕು; ಮಾತ್ರವಲ್ಲ, ಆದು ಇದ್ದೇ ಇದೆ. ಆದರೆ, ಅನ್ಯಥಾ ಗ್ರಹಣದಿಂದ ಆವೃತವಾಗಿ ಸುಲಭಗೋಚರವಲ್ಲದಿದೆ.

ವಾಸ್ತವಾಂಶವೇನೆಂದರೆ–ಗೌತಮಬುದ್ಧನೇ ವಿಷ್ಣುವಿನ ಒಂಬತ್ತನೆಯ ಅವತಾರ. ಅವನು ಶಿವನೊಂದಿಗೆ ಸಹಕರಿಸಿ, ತ್ರಿಪುರ ಸಂಹಾರಕ್ಕೆ ಕಾರಣನಾದುದೂ ಹೌದು. ಇಲ್ಲಿ ಹೇಳಿದ ತ್ರಿಪುರರು ಯಾರು ? ಇವರನ್ನು ಏಕಕಾಲದಲ್ಲಿ ಒಂದೇ ಬಾಣದಿಂದ ಸಂಹರಿಸದಿದ್ದರೆ, ಅವರ ನಾಶವಾಗುವುದಿಲ್ಲ. ಇದೆಂತಹ ವೈಚಿತ್ರ್ಯ ! ಇದರಲ್ಲೇನೋ ಒಗಟಿರಬೇಕೆಂದು ಅನ್ನಿಸದೆ ? ಪುರಾಣಗಳಲ್ಲಿ ಬರುವ ಹೆಚ್ಚಿನ ಎಲ್ಲ ಕತೆಗಳೂ ಇಂಥವೇ. ಇವು ಬಹಳ ಮಾರ್ಮಿಕವಾಗಿವೆ. ಈ ಮರ್ಮವನ್ನರಿಯದೆ ಬರಿಯ ಕತೆಯಲ್ಲಿ ತೃಪ್ತಿಪಟ್ಟು ಕುಳಿತರೆ ನಾವು ದಡ್ಡರೇ ಸರಿ.

ಜೀವಾತ್ಮನು ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರಗಳನ್ನು ಹೊಂದಿರುವನಷ್ಟೇ; ಈ ಮೂರು ಶರೀರಗಳೇ ತ್ರಿಪುರಗಳು. ಇವುಗಳಲ್ಲಿ ಮೊದಲನೆಯದಾದ ಸ್ಥೂಲ ಶರೀರವನ್ನು ಕಳೆದುಕೊಂಡವನಿಗೆ ಮೋಕ್ಷವಿಲ್ಲ ; ಬದಲಾಗಿ, ಪುನರ್ಜನ್ಮವುಂಟು. ಅಂದರೆ–ಸ್ಥೂಲ ಶರೀರವು ತನ್ನ ಸಂಚಿತ ಕರ್ಮದಿಂದ ಒದಗಿಬರುತ್ತದೆ. ಹಾಗೆಯೇ ಸ್ಥೂಲ ಸೂಕ್ಷ್ಮವೆಂಬ ಎರಡು ಶರೀರಗಳು ನಾಶವಾದರೂ ಉಳಿದಿರುವ ಮೂರನೆಯ ಕಾರಣ ಶರೀರದ ನಿಮಿತ್ತವಾಗಿ, ಸಂಕಲ್ಪ ಪ್ರಭವಗಳಾದ ಕರ್ಮವು ಉತ್ಪತ್ತಿಯಾಗುತ್ತದೆ. ಈ ಕರ್ಮವೇ ಪುನರಪಿ ಸ್ಥೂಲ ಕಾಯಕ್ಕೆ ಕಾರಣವಾಗುತ್ತದೆ. ಅತ ಏವ ಈ ಮೂರೂ ದೇಹಗಳು ನಷ್ಟವಾದಾಗ ಮಾತ್ರ ಮುಕ್ತಿ.

ಈ ತ್ರಿಪುರ ಸಂಹಾರಕ್ಕೆ ಶಿವನನ್ನೇ ಆರಿಸಿಕೊಂಡುದೂ ಔಚಿತ್ಯಪೂರ್ಣವಾಗಿದೆ. ದೇವರ್ಕಳಲ್ಲಿ ಶಿವನು ಮಾತ್ರ ನಿಷ್ಕಾಮನಾಗಿ ತಪಸ್ಸು ಮಾಡುತ್ತಲೇ ಇರುವವನು. ಆದರೆ ಇವನ ತಪಸ್ಸಿನಿಂದ ಏನು ಫಲ ? ತ್ರಿಮೂರ್ತಿಗಳಲ್ಲಿ ವಿಷ್ಣುವು ಸಮಸ್ತ ಜಂತು ವರ್ಗದ ಹೃದಯದಲ್ಲಿದ್ದು ಜೀವಾತ್ಮನೆನಿಸಿಕೊಂಡು (ಭೋಕ್ತಾ ಚ ಪ್ರಭುರೇವ ಚ) ಜಂತು ಜಾಲದ ಸ್ಥಿತಿಗೆ ಕಾರಣನಾಗುತ್ತಾನೆ. ಪರಾತ್ಪರತತ್ತ್ವವನ್ನು ಹೀಗೆ ಜಂತು ಜಾಲದಲ್ಲಿ ಇರಗೊಳಿಸಿದಾಗ ಸೃಷ್ಟಿ ; ಇದಕ್ಕೆ ಕಾರಣನು ಬ್ರಹ್ಮ. ಜಂತುಜಾಲದ ವಿಮೋಚನೆಯಲ್ಲಿ ತನ್ನನ್ನು ತೊಡಗಿಸಿ ಕೊಂಡವನು ಮಹೇಶ್ವರ. ಅವನು ಪರತತ್ತ್ವ ವನ್ನು ಧ್ಯಾನಿಸುತ್ತ ಜಂತುಜಾಲದ ಮಿಥ್ಯೆಯನ್ನು ಬಯಲುಗೊಳಿಸುತ್ತಾನೆ. ಅಂದರೆ, ಅವನ ತಪಸ್ಸಿನ ಫಲವಾಗಿ ಜಂತುಗಳು ಹಂತ ಹಂತವಾಗಿ ಮುಂಬರಿದು ಜ್ಞಾನಗಳಿಸಿ ಮೋಕ್ಷಕ್ಕೆ ಅಣಿಯಾಗುತ್ತವೆ. ಮತ್ತು ಮೋಕ್ಷವಾದರೋ ಸ್ಥೂಲದೇಹದಲ್ಲಿದ್ದುಕೊಂಡು ಕರ್ಮಭೂಮಿಯಾದ ಈ ಭೂಲೋಕದಲ್ಲೇ ಆಗತಕ್ಕುದು. ಅಂದರೆ–ಈ ಮೂರು ದೇಹ ದಲ್ಲಿದ್ದುಕೊಂಡು ಅವು ಒದಗಿಸಬಹುದಾದ ಯಾವ ಸುಖದುಃಖಾದಿಗಳ ಅಪೇಕ್ಷೆಯೂ ಇಲ್ಲದಿದ್ದಾಗ ಮಾತ್ರ ಮೋಕ್ಷ. ಅತ ಏವ ಈ ದೃಷ್ಟಿಯಿಂದ ಶಿವನೇ ಮೋಕ್ಷದಾಯಕನು ಮತ್ತು ತ್ರಿಪುರಾರಿ. (ಕಾರಣ ದೇಹವಿಲ್ಲದೆ ಸ್ಥೂಲ ಸೂಕ್ಷ್ಮದೇಹಗಳನ್ನು ಧರಿಸಲಾಗು ವುದಿಲ್ಲ; ಹಾಗೆಯೇ ಕಾರಣ ಸೂಕ್ಷ್ಮದೇಹಗಳಿಲ್ಲದೆ ಸ್ಥೂಲ ದೇಹವನ್ನು ಧರಿಸಲೂ ಬರುವುದಿಲ್ಲ.)

ಇನ್ನು ಬೌದ್ಧಾವತಾರದ ಕಾಲಕ್ಕೆ ಬರೋಣ. ಆಗ ವೇದ ಭೂಯಿಷ್ಠವಾದ ಅನೇಕ ಯಜ್ಞಯಾಗಾದಿಗಳೂ ಅಂತಹ ಯಜ್ಞಗಳಿಗಾಗಿ ಪ್ರಾಣಿ ಹಿಂಸೆಯೂ ನಡೆಯು ತ್ತಿದ್ದಿತು. ಪರಿಣಾಮವಾಗಿ ಕೆಲವರು ಅದ್ಭುತ ಶಕ್ತಿಗಳನ್ನು ವಶಮಾಡಿ ಐಹಿಕ ಸುಖ ಭೋಗಗಳಲ್ಲಿ ಮುಳುಗಿರುತ್ತಿದ್ದರು ಮತ್ತು ಅಭಿಚಾರಾದಿ ಮಾಂತ್ರೀಕರಣದಿಂದ ಪರರಿಗೆ ದ್ರೋಹ ಬಗೆಯುತ್ತಿದ್ದರು. ಇದನ್ನು ನಿಲ್ಲಿಸುವುದಕ್ಕಾಗಿ ಬುದ್ಧನು ಅಂತಹ ಕರ್ಮಕಾಂಡ ವನ್ನು ಹೀಗಳೆದು, ಅದರ ಪರವಾದ ನಿಷ್ಠೆಯನ್ನು ಕೆಡಿಸಿ (ಇದೇ ದೈತ್ಯ ಸ್ತ್ರೀಯರ ಪಾತಿವ್ರತ್ಯ ಭಂಗ), ಸದಾಚಾರದ ನಿರಾಡಂಬರದ ನಡತೆಯನ್ನು ಬೋಧಿಸಿದನು. (ಇದ ರಿಂದಾಗಿ ಅವನನ್ನು ನಿರೀಶ್ವರವಾದಿಯೆಂದು ಕರೆದರು. ಇಂಥವರೇ ಕಪಿಲಮಹರ್ಷಿ ಯಲ್ಲಿಯೂ ಇತ್ತೀಚೆಯ ರಮಣ ಮಹರ್ಷಿಯಲ್ಲಿಯೂ ನಿರೀಶ್ವರ ವಾದವನ್ನು ಕಂಡ ವರು). ನಿಜಕ್ಕೂ ಬುದ್ಧನಿಗೆ ಪರವಶರಾದ ಸ್ತ್ರೀಯರೆಂದರೆ, ಶ್ರೀಕೃಷ್ಣಪರಾಯಣೆಯರಾದ ಗೋಪಿಯರಂತೆ ಪುನೀತೆಯರೇ ಆಗಿರುತ್ತಾರೆ. ಏನಿದ್ದರೂ ಆಭಿಚಾರಿಕ, ಮಾಂತ್ರಿಕ ಕ್ಷುದ್ರಕರ್ಮಗಳಿಂದ ಜನರನ್ನು ಬಿಡುಗಡೆ ಮಾಡಿದವನು ಬುದ್ಧನೇ. ಮುಂದೆ ಬುದ್ಧನ. ಮತವು ನಿರೀಶ್ವರವಾದಕ್ಕೆ ಆದಿಯಾದಾಗ, ಶಂಕರ ಭಗವತ್ಪಾದರು ಆವಿರ್ಭವಿಸಿದರು

**—ಸೋಮಂಜೆ ಮಹಾಲಿಂಗ ಭಟ್ಟ**

## 2. ದೇವುಡು ಕೃತಿಗಳು ಎಷ್ಟು ? ಒಂದು ಟಿಪ್ಪಣಿ

1994ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅವರು ಮರೆಯಲಾಗದ ಬರಹಗಾರರು ಮಾಲೆಯಲ್ಲಿ "ದೇವುಡು ನರಸಿಂಹಶಾಸ್ತ್ರಿ ಸಾಹಿತ್ಯ ವಾಚಿಕೆ" ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಇದರ ಸಂಪಾದಕರು ಕುಮಾರಚಲ್ಯ. ಇವರು ದೇವುಡು ಅವರ ಜೀವನ ಕೃತಿಗಳ ಬಗ್ಗೆ ಪಿ. ಎಚ್‌ಡಿ. ಗಾಗಿ ಅಧ್ಯಯನ ಮಾಡಿದ್ದಾರೆ. ಇವರು ಸಂಪಾದಿಸಿರುವ ವಾಚಿಕೆಯಲ್ಲಿ ಸುಮಾರು 80ಕ್ಕೂ ಹೆಚ್ಚು ಕೃತಿಗಳು ದೇವುಡು ಅವರ ಸಾಹಿತ್ಯ ಸಂಪದವೆಂದು ಹೇಳಿ, ಪುಸ್ತಕದ ಕೊನೆಯಲ್ಲಿ ಅನುಬಂಧ-2ರಲ್ಲಿ ಅವರ ಕೃತಿಗಳ ಪಟ್ಟಿಯೊಂದನ್ನು ಕೊಟ್ಟಿದ್ದಾರೆ. ಪತ್ರಿಕೆಗಳಲ್ಲಿ ಮತ್ತು ಇತರ ಗ್ರಂಥಗಳಲ್ಲಿ ಪ್ರಕಟವಾದ ಲೇಖನಗಳ ಪಟ್ಟಿ ಇಲ್ಲದಿರುವುದೊಂದು ಕೊರತೆ. ದೇವುಡು ಅವರು ತಮ್ಮ ಕಾಲದಲ್ಲಿ ಪ್ರಕಟವಾಗುತ್ತಿದ್ದ ಎಲ್ಲ ಪತ್ರಿಕೆಗಳಿಗೂ ಲೇಖನಗಳನ್ನು ಬರೆದಿದ್ದಾರೆ ಎನ್ನಬಹುದು. ಈ ಬಗ್ಗೆ ಸಂಶೋಧನೆ ಆಗಬೇಕಾಗಿದೆ. ಪ್ರಸ್ತುತದಲ್ಲಿ ಕುಮಾರಚಲ್ಯ ಅವರು ಕೊಟ್ಟಿರುವ ದೇವುಡು ಕೃತಿಗಳ ಪಟ್ಟಿಗೆ ಮತ್ತೆ ಕೆಲವನ್ನು ಸೇರಿಸುವುದು ಮತ್ತು ಈ ಬಗ್ಗೆ ಕೆಲವು ಅಪ್ರಕಟಿತ ಸಂಗತಿಗಳನ್ನು ದೇವುಡುಅವರೇ ಬರೆದಿಟ್ಟ 'ದಿನಚರಿಯ ಟಿಪ್ಪಣಿ' ಪುಸ್ತಕದಿಂದ ಉಲ್ಲೇಖಿಸುವುದು ಉದ್ದೇಶವಾಗಿದೆ. (ಈ ದಿನಚರಿಯನ್ನು ನೋಡಲು ಮತ್ತು ಬಳಸಿಕೊಳ್ಳಲು ಕೃಪೆಯಿಟ್ಟು ಕೊಟ್ಟ ದೇವುಡು ಅವರ ಪುತ್ರ ಗಂಗಾಧರ್ ಅವರಿಗೆ ಕೃತಜ್ಞನಾಗಿದ್ದೇನೆ) ದೇವುಡು ಸಾಹಿತ್ಯ ಇದುವರೆಗೆ ಎಷ್ಟು ಎಂಬುದು ಖಚಿತವಾಗಿ ತಿಳಿದು ಬಂದಿಲ್ಲ. ಏಕೆಂದರೆ ಎಲ್ಲವೂ ಅಚ್ಚಾಗಿಲ್ಲ. ಉದಾಹರಣೆಗೆ-ಅವರ ಮಹಾಬ್ರಾಹ್ಮಣ ಕಾದಂಬರಿಯನ್ನು ದೇವುಡು ಅವರೇ ಇಂಗ್ಲಿಷಿಗೆ ಅನುವಾದಿಸಿದ್ದು, ಅದಿನ್ನೂ ಪ್ರಕಟವಾಗಿಲ್ಲ. ಹೀಗೆ ಇನ್ನೂ ಕೆಲವು ಗ್ರಂಥಗಳ ಹಸ್ತಪ್ರತಿ ಇರಲು ಸಾಧ್ಯವಿದೆ.

### ಕಾದಂಬರಿಗಳು

ಕುಮಾರಚಲ್ಯ ಅವರು ವಾಚಿಕೆಯಲ್ಲಿ 15 ಕಾದಂಬರಿಗಳನ್ನು ಪಟ್ಟಿ ಮಾಡಿದ್ದಾರೆ. ಇದರಲ್ಲಿ 1912ರಲ್ಲಿ ರಚಿಸಿದ ಸಾಹಸವರ್ಮ ಉಪಲಬ್ಧವಿಲ್ಲ, ಪರಿಪೂರ್ಣ (ಅಪೂರ್ಣ, ಅಪ್ರಕಟಿತ) ಎಂದಿದ್ದಾರೆ. ಈ ಪಟ್ಟಿಗೆ ಸೇರಬೇಕಾದ ಆದರೆ ದೇವುಡು ಅವರು ರಚಿಸಿದ್ದ (ಅಪೂರ್ಣವಾಗಿ) ಕಾದಂಬರಿ ಎಂದರೆ 'ಪೋಲಿಪಟಾಲಂ' ದಿ|| ಅನಕೃ ಅವರು ನಗ್ನ ಸತ್ಯ ಬರೆದಾಗ ಅದನ್ನು ಪ್ರಕಟಿಸಲು ಶಾರದಾ ಪ್ರಕಾಶನದ ಬಸವರಾಜ್ ಅವರಿಗೆ ಕೊಟ್ಟರು. ಆಗ ಅದನ್ನು ಇಂಥ ಕೃತಿ ಪ್ರಕಟಿಸಬಾರದು ಎಂದು ಪ್ರಕಟಿಸಲಿಲ್ಲ. ಈ ಸಂಗತಿಯನ್ನು ದೇವುಡು ಅವರಿಗೆ ಹೇಳಿ ಆ ಬಗ್ಗೆ ಚರ್ಚಿಸುತ್ತಿದ್ದಾಗ 'ಈ ಬಗೆಯ ಕಾದಂಬರಿ ಬರೆಯುವುದು ಸುಲಭವಲ್ಲ 'ಎಂಬ ಮಾತು ಬಂದಾಗ ದೇವುಡು ಅವರು "ಅದೇನು ಮಹಾಕಷ್ಟ? ಅದರಷ್ಟನಂಥ ಕಾದಂಬರಿ ಬರೆಯಬಹುದು!"

ಎಂದರಂತೆ." "ಬರೆದು ಕೊಡಿ ನೋಡೋಣ", ಎಂದರು. ಕೆಲವೇ ದಿನಗಳಲ್ಲಿ ಒಂದು ಭಾಗ ಬರೆದು ತಂದರು. ಬಸವರಾಜ್ ಅವರು ಅದನ್ನು ಓದಿನೋಡಿ "ಛೀ ಛೀ ಎಲ್ಲಾದರೂ ಉಂಟೆ! ಹೀಗೆ ನಿಮ್ಮಂಥವರಿಂದ ಇಂಥ ಕೃತಿ ರಚನೆ!" ಎಂದು ಅದನ್ನು ಕೂಡಲೇ ಪರಪರನೆ ಹಸ್ತಪ್ರತಿಯನ್ನು ಹರಿದು ಹಾಕಿದರು. ದೇವುಡು "ಹೋಗಲಿಬಿಡಿ" ಎಂದು ಸುಮ್ಮನಾದರು. ಹೀಗಾಗಿ ಅದು ಹೆಸರು ಪ್ರಕಟವಾದರೂ ಭಾಗಶಃ ರಚನೆ ಆಗಿದ್ದರೂ ಪ್ರಕಟವಾಗಲಿಲ್ಲ. ಇದಕ್ಕೆ ಆಧಾರವಾಗಿ ದೇವುಡು ಅವರು ತಮ್ಮ ಪುಸ್ತಕಗಳ ಪಟ್ಟಿ ಮಾಡಿರುವುದರಲ್ಲಿ 'ಪೋಲಿಪಟಿಂಗ' ಎಂದು ಕಾದಂಬರಿಗಳ ಪಟ್ಟಿಯಲ್ಲಿ ಬರೆದು ಹೊಡೆದು ಹಾಕಿದ್ದಾರೆ. (ಈ ಸಂಗತಿಯನ್ನು ಸ್ವತಃ ಶಾರದಾ ಪ್ರಕಾಶನದ ಬಸವರಾಜ್ ಅವರು ನಿಧನಕ್ಕೆ ಕೆಲವು ತಿಂಗಳ ಮುಂಚೆ ನನಗೆ ಹೇಳಿದರು) ದೇವುಡು ಪಟ್ಟಿಯಲ್ಲಿ 'ಪುರುಷೋತ್ತಮ' ಎಂಬ ಕೃತಿಯ ಉಲ್ಲೇಖ ಇದೆ. ಇದು ಪ್ರಕಟಿತ ಕೃತಿ. ಮಹಾಕ್ಷತ್ರಿಯಕ್ಕೆ ಮೊದಲು 'ಧರ್ಮಧ್ವಜ' ಎಂಬ ಹೆಸರನ್ನೂ ಮಹಾದರ್ಶನಕ್ಕೆ ಯಾಜ್ಞವಲ್ಕ್ಯ' ಎಂಬ ಹೆಸರನ್ನೂ ಕೊಟ್ಟಿದ್ದರು. ಮಹಾಕ್ಷತ್ರಿಯ ಪ್ರಕಟವಾಗುವ ಮೊದಲು ಧರ್ಮಧ್ವಜ ಎಂಬ ಹೆಸರಿನಲ್ಲೇ ಪ್ರಕಟನೆ ಬಂದಿದೆ. ಇನ್ನು ವಾಚಿಕೆ ಪಟ್ಟಿಯಲ್ಲಿ ನಾಲ್ಕು ಕಥಾ ಸಂಗ್ರಹಗಳ ಹೆಸರುಗಳಿವೆ. ಸೋಲೋ ಗೆಲುವೋ (1936), ದೇವುಡು ಕಥೆಗಳು (1937), ಘಾಟಿ ಮುದುಕ ಮತ್ತು ಇತರ ಕಥೆಗಳು (1944), ಮೂರು ಕನಸು (1972) ಎಂದಿದೆ. ಮೂರು ಕನಸು ಸಂಗ್ರಹದ ಇಸವಿ ತಪ್ಪಾಗಿದೆ ಅನ್ನಿಸುತ್ತಿದೆ. ಈ ಪಟ್ಟಿಗೆ ಸೇರಬೇಕಾದ ಇನ್ನೊಂದು ಪುಸ್ತಕ "ರಾಜಸನ್ಯಾಸಿ ಮತ್ತು ಇತರ ಕಥೆಗಳು"

## ನಾಟಕಗಳು

ಇನ್ನು ನಾಟಕಗಳಲ್ಲಿ 4 ಕೃತಿಗಳ ಪ್ರಸ್ತಾವವಿದೆ. ಸಾವಿತ್ರಿ (1926), ದುರ್ಮಂತ್ರಿ (1942), ಮಯೂರ (1952), ಯಾಜ್ಞವಲ್ಕ್ಯ (1961) ಇವಲ್ಲದೆ, ದೇವುಡು ಅವರೇ ಮಾಡಿದ ಪಟ್ಟಿಯಲ್ಲಿ ಇರುವ ನಾಟಕಗಳಿವು–ಚಿರಂಜೀವಿ, ಬಸವಣ್ಣ, ಪಂಚತಂತ್ರ, ಘೋರಸಿಂಹ, ಕೃಷ್ಣಲೀಲಾ, ಅಮರಸಿಂಗ ಇವು ಮಕ್ಕಳ ನಾಟಕಗಳು. ರೇಡಿಯೋಗಾಗಿ ಬರೆದ ನಾಟಕಗಳು. ಯಾಜ್ಞವಲ್ಕ್ಯ, ಮಯೂರ–ಇವು ಗ್ರಾಮಸ್ಥರಿಗಾಗಿ ರಚಿಸಿದವು. ಮಯೂರ, ಶಾರದಾಪೀಠ, ದೀಪಾವಳಿ ಈ ಪಟ್ಟಿಯಲ್ಲಿ ಮಯೂರ ಕಾದಂಬರಿ ಆಧರಿಸಿದ ನಾಟಕ, ಹಿರಿಯರಿಗಾಗಿ ಮಕ್ಕಳಿಗಾಗಿ ಗ್ರಾಮಸ್ಥರಿಗಾಗಿ ರಚಿತವಾಗಿರುವುದು ಗಮನಿಸುವ ಅಂಶವಾಗಿದೆ. ಮಯೂರದ ಸಂಗ್ರಹ ರೂಪವೂ ಪ್ರಕಟವಾಗಿದೆ. ವಿಚಾರಣೆ ನಾಟಕವನ್ನು 1932ರಲ್ಲಿ ಇಂಗ್ಲಿಷಿನಿಂದ ಕನ್ನಡಕ್ಕೆ ಅನುವಾದಿಸಿದ ದೇವುಡು ಅವರು ಅದಕ್ಕೆ ಪೀಠಿಕೆಯಾಗಿ 'ಯೇಸು' ಎಂಬ ನಾಟಕವನ್ನು ಸ್ವತಂತ್ರವಾಗಿ ರಚಿಸಿದ್ದಾರೆ. ಇದು ಅನೇಕರಿಗೆ ತಿಳಿದಿರಲಿಲ್ಲ. ಈಚೆಗೆ ಇವೆರಡು ನಾಟಕಗಳನ್ನು ಒಟ್ಟಿಗೆ ಸುವಿದ್ಯಾ ಪ್ರಕಾಶನ, ಬೆಂಗಳೂರು ಇವರು ದೇವುಡು ಪ್ರತಿಷ್ಠಾನದ ಪರವಾಗಿ ಪ್ರಕಟಿಸಿದ್ದಾರೆ. ಇದು ದೇವುಡು ಅವರ ಗ್ರಂಥಪಟ್ಟಿಯಲ್ಲಿಲ್ಲ. ಅವರ ಪಟ್ಟಿಯಲ್ಲಿ ಕಂಡು ಬರುವ

ಇನ್ನೊಂದು ಅನುವಾದಿತ ನಾಟಕ (?) ಆಂಟೊನಿ ಮತ್ತೂ ಕ್ಲಿಯೋಪಾತ್ರ. ನಾಟಕ ರಂಗದಲ್ಲಿ ವಿಶೇಷ ಆಸಕ್ತಿ ಇದ್ದ ದೇವುಡು ಅವರಿಂದ ರಚಿತವಾದ ನಾಟಕಗಳು ಇನ್ನೂ ಹಲವಾರು (ಹಸ್ತಪ್ರತಿ ರೂಪದಲ್ಲಿ) ಇರಬೇಕೆನ್ನಿಸುತ್ತದೆ. ಜಯಚಾಮರಾಜೇಂದ್ರ ಗ್ರಂಥಮಾಲೆಗಾಗಿ 21 ಸಂಪುಟಗಳಲ್ಲಿ (1946-52) ವರೆಗೆ ಯೋಗವಾಶಿಷ್ಠ ಅನುವಾದಿಸಿದ್ದಾರೆ. ಸಾ. ಶಿ. ಮರುಳಯ್ಯನವರು 24 ಸಂಪುಟಗಳು ಎಂದಿದ್ದಾರೆ. ಇದು ತಪ್ಪು ಕಾಳಿದಾಸನ ಮೇಘಸಂದೇಶ ಗದ್ಯ ಅನುವಾದ ಮತ್ತು ಟೀಕೆಯನ್ನು 1932 ರಲ್ಲಿ ಪ್ರಕಟಿಸಿದ್ದಾರೆ. ಸ್ವಂತ ವ್ಯಾಖ್ಯಾನ ಮಾಡಿದ್ದಾರೆ. 1945ರಲ್ಲಿ ಅಮೆರಿಕದ ಕಥೆ ಅನುವಾದಿಸಿದ್ದಾರೆ. ಇವು ಕುಮಾರಚಲ್ಯರ ಪಟ್ಟಿಯಲ್ಲಿಲ್ಲ. ರಾಮಾಯಣವೂ ಭಗವದ್ಗೀತೆಯೂ (ಪ್ರಕಟಿತ) ಗ್ರಂಥ ಬಿಟ್ಟುಹೋಗಿದೆ.

**ಮಕ್ಕಳ ಕಥೆಗಳು**

ಸುಮಾರು 14 ಪುಸ್ತಕಗಳ ಪಟ್ಟಿ ಇಲ್ಲಿದೆ. ಇದರಲ್ಲಿ ಬುದ್ಧಿಯ ಕತೆಗಳು ಭಾಗ-1 ಮತ್ತು 2 ಇದೆ. ಈ ಅಂಶ ನಮೂದಿತವಾಗಿಲ್ಲ. ಪಂಚಾಮೃತ ಮತ್ತು ಇತರ ಕಥೆಗಳು ಬಿಟ್ಟುಹೋಗಿದೆ. ಅಲ್ಲಿ ಇಲ್ಲಿಯ ಕಥೆಗಳು ಈ ಮಾಲಿಕೆಯಲ್ಲಿ 5 ಪುಸ್ತಕ ಪ್ರಕಟವಾಗಿದೆ. (ಅರಸಿನ ಮಗಳು, ಭೀಮಸೇನ ಜೆಕ್ಕು. ಕನ್ನಡಿಯ ಕಥೆ, ದೇವದೂತರು ಅಂದಿನ ಕಥೆಗಳು). ದೇಶಾಂತರ ಕಥೆಗಳು ಮಾಲಿಕೆಯಲ್ಲಿ 5 ಪುಸ್ತಕಗಳು (ರೂಪವತಿ, ನೀಲಿಯ ಬೆಳಕು, ದೇವರು ದೊಡ್ಡವನು ಒಂದೇ ಸಲ, ಮನಸ್ಸಿದ್ದರೆ ಮಹಾದೇವ) ಯವನ ಪುರಾಣ 5 ಪುಸ್ತಕಗಳು (ದೇವರ ದಯೆ. ಮಾತಿಗೆ ತಪ್ಪಿದ ದೊರೆ, ಗ್ರೀಕರ ಭೀಮಸೇನ, ಹೊಟ್ಟೆಯ ಕಿಚ್ಚು, ಆರ್ಗೋನಾವಿಕರು). ಮೊದಲು ಪ್ರಕಟಿಸಿದ ಕಥೆಗಳನ್ನು ಒಳಗೊಂಡು ಕೆಲವು ಹೊಸಕಥೆಗಳನ್ನು ಸೇರಿಸಿ ಈ 3 ಮಾಲಿಕೆಯಲ್ಲಿ 15 ಪುಸ್ತಕಗಳನ್ನು ಸಿದ್ಧಪಡಿಸಿದ್ದಾರೆ ಎಂದು ಕಾಣುತ್ತದೆ. ಏಕೆಂದರೆ ಉಳಿದ ಸಂಗ್ರಹಗಳ ಹಲವಾರು ಕಥೆಗಳು ಈ ಮಾಲಿಕೆ ಗ್ರಂಥಗಳಲ್ಲಿವೆ. ಇವುಗಳ ವಿವರ ಅನುಬಂಧ–2ರಲ್ಲಿಲ್ಲ. ದೇವುಡು ಜೀವನ ಮತ್ತು ಕೃತಿಗಳನ್ನು ಕುರಿತ ಪುಸ್ತಕ ಲೇಖನ ಪಟ್ಟಿಯೂ ಇದುವರೆಗೆ ಪ್ರಕಟವಾಗಿಲ್ಲ.

ಈ ಎಲ್ಲ ಹಿನ್ನೆಲೆಯಲ್ಲಿ "ದೇವುಡು ಅವರಿಂದ ರಚಿತವಾದ/ಸಂಪಾದಿತವಾದ ಅನುವಾದಿತವಾದ/ಗ್ರಂಥಗಳು ಮತ್ತು ಲೇಖನಗಳು ಯಾವುವು. ಎಷ್ಟು ? ಎಂಬುದರ ಪಟ್ಟಿಯನ್ನು ಸಂಶೋಧಕರು ಸಿದ್ಧಪಡಿಸಬೇಕಾಗಿದೆ. ಅಪ್ರಕಟಿತ ಹಸ್ತಪ್ರತಿ –ಲೇಖನಗಳೂ ಪತ್ತೆಹಚ್ಚಬೇಕಾಗಿದೆ. ಈಗ ಪ್ರಕಟವಾಗಿರುವ ಪಟ್ಟಿಗಳು ಅಪೂರ್ಣವಾಗಿವೆ.

— ಪ್ರೊ|| ಜಿ. ಅಶ್ವತ್ಥ ನಾರಾಯಣ

–o–

# ಗ್ರಂಥಾವಲೋಕನ

---

## (1) ಗಾಢವಾದ ಮುದ್ರೆಗಳು :

ಇದರಲ್ಲಿ ಒಟ್ಟು 79 ಕವಿತೆಗಳಿವೆ, ಬಹುತೇಕವು ಹನಿಗವನಗಳು. ಭಾಷೆಯ ಮೇಲಿನ ಹಿಡಿತ ಚೆನ್ನಾಗಿದೆ. ಸತ್ಯ, ಯವ್ವನ, ನುಡಿಸು ಬಾ, ಹುಡುಗೀ ಮೊದಲಾದವು ಸರಳವಾಗಿ, ಮನಸ್ಸಿಗೆ ಹಿತವಾಗುತ್ತವೆ. ಹನಿಗವನಗಳ ಗತಿ ಇನ್ನೂ ಚುರುಕಾಗ ಬೇಕು.

ಒಟ್ಟಿನಲ್ಲಿ ಪುಷ್ಪಾನಂದ ಉಳ್ಳಾಲ್ ಅವರ ಈ ಕವನ ಸಂಕಲನ ಅವರು ಒಳ್ಳೆಯ ಕವಿಯಾಗುವ ಲಕ್ಷಣಗಳನ್ನು ಹೊಂದಿದೆ.

## (2) ವೀರಶೈವ ಧರ್ಮದರ್ಶನ

'ವೀರಶೈವ ಧರ್ಮದರ್ಶನ' ಕೃತಿಯು ಈಗಾಗಲೇ ಬಹಳಷ್ಟು ಚರ್ಚಿತವಾಗಿರುವ ವಿಷಯಗಳನ್ನೇ ಕುರಿತದ್ದಾಗಿದೆ. ಸಂಸ್ಕೃತ ಸಾಹಿತ್ಯದಲ್ಲಿ ವೀರಶೈವ ಧರ್ಮ ಎಂಬ ಲೇಖನ. ಉತ್ತಮ ಮಾಹಿತಿಗಳನ್ನೊಳಗೊಂಡಿದೆ. 'ವೀರಶೈವ ಮಠಗಳ ಪರಂಪರೆ-ಶಿಕ್ಷಣ ಕ್ಷೇತ್ರಕ್ಕೆ ಅವುಗಳ ಕೊಡುಗೆ' ಲೇಖನ ಪರಿಚಯಾತ್ಮಕವಾಗಿದೆ. ಕೋಡಿ ಮಠದ ಶಾಸನದ ಬಗೆಗೆ ಇನ್ನೂ ಹೆಚ್ಚು ಚರ್ಚಿಸಬಹುದಿತ್ತು. ಒಟ್ಟಿನಲ್ಲಿ ಈ ಕೃತಿಯು ವೀರಶೈವ ಧರ್ಮದ ಹಲವು ವಿಷಯಗಳನ್ನು ಸರಳವಾಗಿ, ಉತ್ತಮ ರೀತಿಯಲ್ಲಿ ನಿರೂಪಿಸುತ್ತದೆ. ಈ ಕಾರ್ಯದ ಬಗೆಗೆ ಪ್ರೀತಿಯಿರುವವರು ಇದನ್ನು ಆಗತ್ಯವಾಗಿ ವ್ಯಾಸಂಗ ಮಾಡಬಹುದು.

## (3) ಹತ್ತರೊಳಗೊಂದು ಮುತ್ತಾಗು (ದೇಶಭಕ್ತಿ ಗೀತೆಗಳು)

'ಹತ್ತರೊಳಗೊಂದು ಮುತ್ತಾಗು' ಕೃತಿಯಲ್ಲಿ ದೇಶಭಕ್ತಿ ಗೀತೆಗಳ ಸಂಗ್ರಹ ಬಂದಿದೆ. ಆದರೆ ಇಲ್ಲಿರುವ ಬಹುತೇಕ ಕವಿತೆಗಳು ದೇಶಭಕ್ತಿ ಗೀತೆಗಳಲ್ಲ. ದೇಶಭಕ್ತಿ

---

1. ವಿದ್ವಾನ್ ಪುಷ್ಪಾನಂದ ಉಳ್ಳಾಲ್
ಪುಷ್ಪಾವತಿ ಪ್ರಕಾಶನ. ಶ್ರೀ ಕಲಾಭಾರತಿ ಸಂಗೀತ ವಿದ್ಯಾಲಯ, ಟೀನಾ ಜೇಕರಿ ಬಿಲ್ಡಿಂಗ್, ಎರಡನೆಯ ಮಹಡಿ, ಮುಖ್ಯರಸ್ತೆ, ಉಳ್ಳಾಲ 574159 ಪ್ರ.ವ. 1995 ಬೆಲೆ.20/-

2. ವಿದ್ವಾನ್ ಶ್ರೀ ಜಿ. ವಿ ಶಿವಸ್ವಾಮಿ. ಶಿವ ಪ್ರಕಾಶನ, ಜ್ಞಾನಸದನ, 2306, 3ನೇ 'ಬಿ'ಮುಖ್ಯರಸ್ತೆ, ವಿಜಯನಗರ. 2ನೇ ಮಹಡಿ. ಬೆಂಗಳೂರು - 40 1994, ಬೆಲೆ. 20/-

ಗೀತೆಗಳ ಉದಾರತೆ, ನೆಲದ ಪ್ರೇಮ, ಇಲ್ಲಿನ ಕವಿತೆಗಳಲ್ಲಿಲ್ಲ. ಆದರೂ, ಬಾಳ್ಗಿಯ ಪಣ, ಸಮತೆ, ಅಡಿಪಾಯ, ವಿಶ್ವಮಾನವ–ಕವನಗಳು ಚೆನ್ನಾಗಿವೆ. ಲೇಖಕರು ಇನ್ನೂ ಒಳ್ಳೆಯ ಕೃತಿಗಳನ್ನು ತರಲೆಂದು ಹಾರೈಸುತ್ತೇವೆ.

## (4) ಹೃದಯ ಮೃದಂಗ (ಭಾವಗೀತೆಗಳು)

ಶ್ರೀ ಆನೇಕಲ್ ಕೃಷ್ಣಮೂರ್ತಿ ಕಾಟಿಯವರು ಇತ್ತೀಚಿಗೆ ಚುರುಕಿನಿಂದ ಓಡಾಡುತ್ತಿರುವ ಕವಿಗಳು. ಸುಂದರ ಮುಖಪುಟದೊಂದಿಗೆ ಬಂದಿರುವ 'ಹೃದಯ ಮೃದಂಗ' ಪುಸ್ತಕವು 31 ಕವಿತೆಗಳನ್ನು ಒಳಗೊಂಡಿದೆ. ಹೋರಾಟ, ಮಣ್ಣಿನ ಮಕ್ಕಳು, ದೊಡ್ಡಗೌಡ ಮೊದಲಾದ ಕವನಗಳ ವಸ್ತು ಚೆನ್ನಾಗಿದೆ. ಇಲ್ಲಿನ ಹಲವು ಕವನಗಳು ಇತ್ತೀಚಿಗೆ ಯುವಕರನ್ನು ದಾರಿ ತಪ್ಪಿಸುತ್ತಿರುವ ದುಶ್ಚಟಗಳ ಬಗೆಗೆ ಹೇಳುತ್ತವೆ. ಕವಿಗಳ ಆಶಯ ಉತ್ತಮವಾಗಿದೆ; ಭಾಷೆ ಇನ್ನೂ ಪಳಗಬೇಕು, ಸಹಜ ಲಯ ಬರಬೇಕು. ಮುಂದಿನ ಕೃತಿಗಳಲ್ಲಿ ಅವನ್ನು ನಿರೀಕ್ಷಿಸಬಹುದಾಗಿದೆ.

## (5) ನೂರು ಸರ್ವಜ್ಞ ವಚನಗಳು (ತಿರುಕ್ಕುರಳ್ ಸಂವಾದಿ ಪದ್ಯಗಳೊಡನೆ)

ಕನ್ನಡಿಗರಿಗೂ ತಮಿಳರಿಗೂ ಬಾಂಧವ್ಯ ಉತ್ತಮಗೊಳ್ಳುವ ವಾತಾವರಣ ಮೂಡಿಸುವ ಪ್ರಯತ್ನ ಇದು. ಎಂ. ಗೋವಿಂದರಾಜು ಅವರು ಸರ್ವಜ್ಞವಚನಗಳೊಂದಿಗೆ ತಿರುಕ್ಕುರುಳ್ ಸಂವಾದಿ ಪದ್ಯಗಳನ್ನು ಪ್ರಕಟಿಸಿ, ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ. ಅನುವಾದ ಉತ್ತಮವಾಗಿದೆ. ತಮಿಳು ಲಿಪಿಯಲ್ಲಿಯೂ ಇರುವುದು ಈ ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಿದೆ. ಇಂತಹ ಕೆಲಸಗಳು ಇವರಿಂದ ಹೆಚ್ಚು ಹೆಚ್ಚು ನಡೆಯಲಿ ಎಂದು ಶುಭ ಕೋರುತ್ತೇವೆ.

## (6) ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ ವಿರಚಿತ ದ್ರವ್ಯ ಸಂಗ್ರಹ (ಜೈನ ಸಿದ್ಧಾಂತ ಸಂಗ್ರಹ)

ಪಂಡಿತ ಶಾಂತಿರಾಜ ಶಾಸ್ತ್ರಿಗಳು ದೊಡ್ಡ ವಿದ್ವಾಂಸರು. ಇವರ ವಿದ್ವತ್ತಿನ ಪರಿಚಯ ಇವರ ಪೂಜಾ ಸಾರಸಮುಚ್ಚಯ , ದ್ರವ್ಯ ಸಂಗ್ರಹ, ಸಮ್ಯಕ್ತ್ವ

---

(3) ಆನೇಕಲ್ ಕೃಷ್ಣ ಮೂರ್ತಿ ಕಾಟಿ ಅವರು ಪ್ರತಿಭಾ ಗಂಗೋತ್ರಿ ಪ್ರಕಾಶನ, ಆನೇಕಲ್-562 009· 1993ರ ಪ್ರಕಟಣೆ - ಬೆಲೆ. 15/-

(4) ಆನೇಕಲ್ ಕೃಷ್ಣಮೂರ್ತಿ ಕಾಟಿ ಅವರು. ಪ್ರ-ಭಾ ಗಂಗೋತ್ರಿ ಪ್ರಕಾಶನ, ಆನೇಕಲ್ -592109. 1992ನೆ ಪ್ರಕಟಣೆ - ಬೆಲೆ. 15/-

(5) ಅನುವಾದಕರು : ಶ್ರೀ ಎಂ. ಗೋವಿಂದರಾಜು. ಪ್ರಕಾಶಕರು:- ಎ. ಎಂ. ವೇಣು ಗೋಪಾಲನ್. ನಂ. 2. 80 ಅಡಿ ರಸ್ತೆ, ಡಾ. ರಾಜಕುಮಾರ್ ರಸ್ತೆ, ಪ್ರಕಾಶ್ ನಗರ, ಬೆಂಗಳೂರು – 21 ಎಪ್ರಿಲ್ 1995ರ ಪ್ರಕಟಣೆ - ಬೆಲೆ. 20/-

ಕೌಮುದಿ, ಶತಕತ್ರಯ ಕೃತಿಗಳಿಂದ ಪ್ರಕಟವಾಗುತ್ತದೆ. ಟ್ರಸ್ಟ್‌ನವರ ಕೆಲಸ ಸ್ತುತ್ಯರ್ಹವಾಗಿದೆ.

ಜೈನ ಧರ್ಮದ ಪ್ರಕಟನೆಗಳ ಇತಿಹಾಸದಲ್ಲಿ ಶಾಂತಿ ರಾಜ ಶಾಸ್ತ್ರಿ ಟ್ರಸ್ಟ್‌ನವರ ಹೆಸರು ಶಾಶ್ವತವಾಗುಳ್ಳ ಕೆಲಸ ನಡೆಸುತ್ತಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ. *

—o—

(6) ಸಂ : ಪಂಡಿರತ್ನ .ಎ. ಶಾಂತಿರಾಜ ಶಾಸ್ತ್ರಿ. ಪ್ರಕಾಶಕರು : ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್ ಸಂ. 369, 42 ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, ಬೆಂಗಳೂರು–11. 1994 ರ ಪ್ರಕಟಣೆ. ಬೆಲೆ. 14/–

# ಪ್ರತಿಷ್ಠಾನ ವಾರ್ತೆ

---

**೧ ಕುವೆಂಪು ಸ್ಮರಣೆ :**

ಈ ಉಪನ್ಯಾಸ ಮಾಲೆಯ 8ನೆಯ ಕಾರ್ಯಕ್ರಮವು 10–7–95 ರಂದು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಪ್ರತಿಷ್ಠಾನ ಹಾಗು ಕುವೆಂಪು ಅಧ್ಯಯನ ಕೇಂದ್ರಗಳ ಸಹಯೋಗದೊಂದಿಗೆ ನಡೆಯಿತು. ಪ್ರೊ || ಜಿ. ಕೆ. ಗೋವಿಂದ ರಾವ್ ಅವರು "ಕುವೆಂಪು ವಿಚಾರವಾದಿ,–ಪ್ರಕೃತಿ ಕವಿ" ಎಂಬ ವಿಷಯವನ್ನು ಕುರಿತು ವಿಚಾರಪೂರಿತವಾಗಿ ಮಾತನಾಡಿದರು.

10–8–95 ರಂದು ಗೋಖಲೆ ಸಂಸ್ಥೆಯಲ್ಲಿ ನಡೆದ 9ನೆಯ ಕಾರ್ಯಕ್ರಮದಲ್ಲಿ ಶ್ರೀ ಎಚ್. ಎಸ್. ಪ್ರಕಾಶ್‌ಅವರು "ಕುವೆಂಪು ನಾಟಕಕಾರರಾಗಿ" ಎಂಬ ವಿಷಯದ ಮೇಲೆ ಭಾಷಣ ಮಾಡಿದರು. ಈ ಮಾಲೆಯ 10ನೆಯ ಕಾರ್ಯಕ್ರಮವು 10–9–95 ರಂದು ನಡೆಯಿತು. ಡಾ || ಎಂ. ಎ. ಜಯಚಂದ್ರ ಅವರು ಉತ್ತಮ ಉಪನ್ಯಾಸ ನೀಡಿದರು.

ಈ ಮಾಲೆಯ 11ನೆಯ ಕಾರ್ಯಕ್ರಮವು 10-10–95 ರಂದು ನಡೆಯಿತು. ಬೆಂಗಳೂರು ಮಹಾರಾಣಿ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಎಂ.ಎಚ್. ಕೃಷ್ಣಯ್ಯನವರು, ಕುವೆಂಪು ಅವರ ಕವನಗಳನೇಕವನ್ನು ವಿವರವಾಗಿ ತಿಳಿಸಿ, ಅವುಗಳಲ್ಲಿನ ಪ್ರತಿಮಾಸ್ವಾರಸ್ಯವನ್ನು ಮನದಟ್ಟು ಮಾಡಿಕೊಟ್ಟರು.

ಈ ಮಾಲೆಯ 12ನೆಯ ಕಾರ್ಯಕ್ರಮವೇ ಸಮಾರೋಪ ಸಮಾರಂಭವಾಗಿ ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಶ್ರೀ ನಿಟ್ಟೂರು ಶ್ರೀನಿವಾಸ ರಾವ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. "ಕುವೆಂಪು ನಾನು ಕಂಡಂತೆ" ಎಂಬ ವಿಷಯದ ಮೇಲೆ ಮೈಸೂರಿನ ಡಾ || ಪ್ರಭುಶಂಕರ ಅವರು ಭಾಷಣ ಮಾಡಿ ಕುವೆಂಪು ಅವರ ಭವ್ಯ ವ್ಯಕ್ತಿತ್ವವನ್ನು ಚಿತ್ರಿಸಿದರು. ಈ ಕಾರ್ಯಕ್ರಮವು ಮಲ್ಲೇಶ್ವರದ ಗಾಂಧೀ ಸಾಹಿತ್ಯಸಂಘದಲ್ಲಿ ನೆರವೇರಿತು.

**೨ ದತ್ತಿ ಉಪನ್ಯಾಸಗಳು :–**

29.7.95 ರಂದು ಜಿ. ಪಿ. ರಾಜರತ್ನಂ ಮತ್ತು ವೆಂಕಟಪ್ಪ ದತ್ತಿ ಉಪನ್ಯಾಸಗಳು ಪ್ರೊ || ಎಂ. ರಾಮಚಂದ್ರ ಅವರಿಂದ. ವಿ. ಸೀ. ಸಂಪದ ಅವರ ಸಹಕಾರದೊಂದಿಗೆ ಗೋಖಲೆ ಸಂಸ್ಥೆಯಲ್ಲಿ ನಡೆದುವು.

ಶಂ. ಬಾ. ವಿಚಾರ ವೇದಿಕೆಯವರ ಸಹಕಾರದೊಂದಿಗೆ ಶಂಬಾ ಜೋಶಿ ದತ್ತಿ ಉಪನ್ಯಾಸವು 5-8-95 ರಂದು ಎಂ. ಇ. ಎಸ್. ಕಾಲೇಜಿನ ಸಸ್ಕೃತ ವಿಭಾಗದ ಶ್ರೀ ಜೆ. ಶ್ರೀನಿವಾಸ ಮೂರ್ತಿಯವರಿಂದ "ಕನ್ನಡ ಸಂಸ್ಕೃತಿ ಮತ್ತು ಋಗ್ವೇದ" ಎಂಬ ವಿಷಯದ ಮೇಲೆ ನಡೆಯಿತು.

10-9-95ರಂದು ಕನ್ನಡ ಶಕ್ತಿಕೇಂದ್ರ ಹಾಗೂ ಪ್ರತಿಷ್ಠಾನಗಳು ಸಂಯುಕ್ತವಾಗಿ ಎಂ.ವಿ.ಸೀ ದತ್ತಿ ಕಾರ್ಯಕ್ರಮವನ್ನು ನಡೆಸಿದುವು. "ಪ್ರೌಢಶಾಲಾ ಶಿಕ್ಷಣದಲ್ಲಿ ಕನ್ನಡ" ಒಂದು ಚಿಂತನೆ ಕಾರ್ಯಕ್ರಮದ ಮುಖ್ಯ ವಿಷಯವಾಗಿದ್ದು (1) ಡಾ|| ಜೆ. ಶ್ರೀನಿವಾಸಮೂರ್ತಿ ಅವರು 'ಭಾಷಾ ಪಠ್ಯಗಳಲ್ಲಿ ಏಕತೆ' ಎಂಬ ವಿಷಯದ ಮೇಲೆ (2) ಡಾ|| ಪಿ. ವಿ. ನಾರಾಯಣ ಅವರು "ಮಾಧ್ಯಮವಾಗಿ ಕನ್ನಡ" ಎಂಬ ವಿಷಯವನ್ನು ಕುರಿತು "ಭಾಷಾ ಬೋಧಕರ ನೇಮಕದಲ್ಲಿ ಕನ್ನಡಕ್ಕಿರುವ ಕೊರತೆ" ಎಂಬ ವಿಷಯದ ಮೇಲೆ ವಿದ್ವಾಂಸರಾದ ಶ್ರೀ. ಜಿ. ಚನ್ನವೀರ ಸ್ವಾಮಿಯವರು ಮಾತನಾಡಿ ತಮ್ಮ ಚಿಂತನೆಗಳನ್ನು ಸಭಿಕರಿಗೆ ವಿವರಿಸಿದರು. ಡಾ|| ಎಂ.ಚಿದಾನಂದಮೂರ್ತಿಯವರು ಪ್ರಸ್ತಾವನಾ ಭಾಷಣ ಮಾಡಿದರು.

ಇದೇ ಸಂದರ್ಭದಲ್ಲಿ ಸಾವಿತ್ರಮ್ಮ ದತ್ತಿನಿಧಿಯ ಸಾಹಿತ್ಯ ಪ್ರಶಸ್ತಿ ವಿತರಣೆ ಕಾರ್ಯಕ್ರಮವನ್ನು ಡಾ|| ಎಲ್. ಎಸ್. ಶೇಷಗಿರಿ ರಾವ್ ಅವರು ನೆರವೇರಿಸಿ ಕೊಟ್ಟರು 1993 ನೇ ಸಾಲಿನ ಪ್ರಶಸ್ತಿ ವಿಜೇತ ಶ್ರೀ. ಶಂ ಗು. ಬಿರಾದಾರ ಹಾಗೂ 1994ನೇ ಸಾಲಿನ ಪ್ರಶಸ್ತಿ ವಿಜೇತರಾದ ಡಾ || ಚನ್ನಕ್ಕ ಎಲಿಗಾರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಕಾರ್ಯಕ್ರಮ ವುಗವೀಪುರದ ಜಂಗಮ ಮಠದ ಸಭಾಂಗಣದಲ್ಲಿ ನಡೆಯಿತು.

20-11-95 ರಂದು. ಇತಿಹಾಸ ಸಂಶೋಧನ ವಿಚಕ್ಷಣರೆಂದು ಪ್ರಸಿದ್ಧಿ ಪಡೆದ ಎಸ್. ಶ್ರೀಕಂಠಯ್ಯ ದತ್ತಿ ಉಪನ್ಯಾಸವು ಗೋಖಲೆ ಸಂಸ್ಥೆಯಲ್ಲಿ ನಡೆಯಿತು. "ನಾಲ್ವಡಿ ಕೃಷ್ಣರಾಜ ಒಡೆಯರು" ಎಂಬ ವಿಷಯವನ್ನು ಕುರಿತು ಮೈಸೂರಿನ ನಿವೃತ್ತ ಇತಿಹಾಸ ಪ್ರಾಧ್ಯಾಪಕ ಡಾ|| ಎಂ. ವಿ. ಶ್ರೀನಿವಾಸ್ ಅವರು ವಿಚಾರ ಪೂರ್ಣ ಭಾಷಣ ಮಾಡಿ ನಾಲ್ವಡಿಯವರ ಬಹುಮುಖ ವ್ಯಕ್ತಿತ್ವವನ್ನು ಚಿತ್ರಿಸಿದರು.

ಚಂದ್ರಶೇಖರ ಶರ್ಮ ದತ್ತಿ ಉಪನ್ಯಾಸವನ್ನು 29-11-95 ರಂದು ಗೋಖಲೆ ಸಂಸ್ಥೆಯಲ್ಲಿ ನಡೆಸಲಾಯಿತು. ದತ್ತಿಯ ಸ್ಥಾಪಕರು ಪ್ರಸಿದ್ಧ ಸಾಹಿತಿಗಳಾದ ಪ್ರೊ. ಬಿ ಸಿ ರಾಮಚಂದ್ರಶರ್ಮ ಅವರು ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಪ್ರಾಧ್ಯಾಪಕರಾದ ಡಾ|| ವಿಜಯ ದಬ್ಬೆ ಅವರು "ನವ್ಯೋದಯದಲ್ಲಿ ಅನನ್ಯತೆ" ಎಂಬ ವಿಷಯವನ್ನು ಕುರಿತು ಭಾಷಣ ಮಾಡಿದರು.

೩ ಸಾಹಿತ್ಯೋಪಾಸಕರು ಉಪನ್ಯಾಸ ಮಾಲಿಕೆ.

ಈ ಮಾಲೆಯ 15ನೆಯ ಕಾರ್ಯಕ್ರಮವು 31-7-85 ರಲ್ಲಿ ಬಿ ಎಂ.ಶ್ರೀ.

ಪ್ರತಿಷ್ಠಾನದಲ್ಲಿ ನಡೆಯಿತು. ಪ್ರೊ|| ಜಿ. ಅಶ್ವತ್ಥನಾರಾಯಣ ಅವರು "ದೊಡ್ಡಬೆಲೆ ನಾರಾಯಣ ಶಾಸ್ತ್ರಿ" ಗಳನ್ನು ಕುರಿತು ಭಾಷಣ ಮಾಡಿದರು.

16ನೆಯ ಕಾರ್ಯಕ್ರಮವಾಗಿ, 13-8-95 ರಂದು "ಎಂ. ಎಸ್. ಪುಟ್ಟಣ್ಣ ಅವರ ಸಾಹಿತ್ಯ" ಎಂಬ ವಿಷಯವನ್ನು ಕುರಿತು ವಿಚಾರಗೋಷ್ಠಿ ನಡೆಸಲಾಯಿತು. ಪ್ರತಿಷ್ಠಾನ ಗೌರವಾಧ್ಯಕ್ಷರಾದ ಶ್ರೀಯುತ ನಿಟ್ಟೂರು ಶ್ರೀನಿವಾಸ್‌ರಾವ್ ಅವರು ಅಧ್ಯಕ್ಷತೆ ವಹಿಸಿದ್ದು ಕಾರ್ಯಕ್ರಮವನ್ನು ಚಂದಗಾಣಿಸಿದರು. ಗುಲಬರ್ಗಾ ವಿಶ್ವ ವಿದ್ಯಾಲಯದ ನಿವೃತ್ತ ಕುಲಪತಿಗಳೂ ಹಿರಿಯ ಸಾಹಿತಿಗಳೂ ಆದ ಡಾ|| ಹಾ. ಮಾ. ನಾಯಕರು ಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದರು. ವಿಚಾರ ಗೋಷ್ಠಿಯಲ್ಲಿ (1) ಡಾ|| ಎಚ್. ಎಸ್. ಸುಜಾತ ಅವರು (ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳ) "ಜೀವನವ್ಯಕ್ತಿತ್ವ" ಎಂಬ ವಿಷಯದ ಮೇಲೆ (2) ಡಾ || ಡಿ.ವಿ. ಪರಮಶಿವ ಮೂರ್ತಿ ಅವರು "ಪಾಳೆಯಗಾರರು" ಎಂಬ ವಿಷಯವನ್ನು ಕುರಿತು ಹಾಗೂ (3) ಡಾ||ಮಂಗಳಾ ಪ್ರಿಯದರ್ಶಿನಿಯವರು (ಶಾಸ್ತ್ರಿಗಳ) "ಅನುವಾದಿತ ಮತ್ತು ಇತರ ಕೃತಿಗಳು" ಎಂಬ ವಿಷಯದ ಮೇಲೆ ಮಾತನಾಡಿ ತಮ್ಮ ವಿದ್ವತ್ಪೂರ್ಣ ಹಾಗೂ ವಿಚಾರಪೂರಿತ ಲೇಖನಗಳನ್ನು ಮಂಡಿಸಿದರು.

ಇದೇ ಸಂದರ್ಭದಲ್ಲಿ ಶ್ರೀ. ವ. ರಾ. ಕುಲಕರ್ಣಿ, ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಉಪಸ್ಥಿತರಿದ್ದು ಪ್ರತಿಷ್ಠಾನವು ನಡೆಸುತ್ತಿರುವ ಹಸ್ತಪ್ರತಿ ಶಾಸ್ತ್ರದ ತರಗತಿಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಅರ್ಹತಾ ಪತ್ರಗಳನ್ನು ವಿತರಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಸೆಲಮನೆ ದೇವೇಗೌಡರು ಪ್ರತಿಷ್ಠಾನದ ಪ್ರಕಟನೆಗಳಾದ (1) ಮಾಸ್ತಿ ವೆಂಕಟೇಶ ಅಯ್ಯಂಗಾರ್ (2) ಬಸವಪ್ಪ ಶಾಸ್ತ್ರಿಗಳು ಮತ್ತು (3) ನವ್ಯಸ್ಫೂರ್ತಿ ಪುಸ್ತಕಗಳನ್ನು ಬಿಡುಗಡೆ ಮಾಡಿದರು.

ಈ ಮಾಲೆಯ 17 ನೆಯ ಕಾರ್ಯಕ್ರಮವು "ಸೋಸಲೆ ಅಯ್ಯಾ ಶಾಸ್ತ್ರಿಗಳ ಜೀವನ-ಸಾಧನೆ" ಕುರಿತದ್ದು, ಗೋಖಲೆ ಸಂಸ್ಥೆಯಲ್ಲಿ 29-9-95ರಂದು ನಡೆಯಿತು. ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಅಧ್ಯಕ್ಷತೆ ವಹಿಸಿದ್ದರು ಡಾ || ಟಿ.ವಿ. ವೆಂಕಟಾಚಲ ಶಾಸ್ತ್ರಿಗಳು ಹಾಗೂ ಪ್ರೊ || ಗರ್ಣೇಶ್ವರಿ ವೆಂಕಟ ಸುಬ್ಬಯ್ಯನವರುಗಳು ಅಯ್ಯಾಶಾಸ್ತ್ರಿಗಳ ಜೀವನ ಸಾಧನೆಗಳನ್ನು ಕುರಿತು ಮಾತನಾಡಿದರು. ಮೂವರು ಮಹನೀಯರೂ ಆಡಿದ ಮಾತುಗಳು ಶಾಸ್ತ್ರಿಗಳ ವ್ಯಕ್ತಿತ್ವ ವನ್ನು ಸಭಿಕರಿಗೆ ಪರಿಚಯ ಮಾಡಿ ಕೊಟ್ಟವು.

27-11-95ರಲ್ಲಿ ನಡೆದ ಈ ಮಾಲೆಯ 18ನೆಯ ಕಾರ್ಯಕ್ರಮ "ಶಾಂತ ಕವಿಗಳ ಜೀವನ ಸಾದನೆ" ಕುರಿತದ್ದು. ಆ ವಿಷಯವನ್ನು ಕುರಿತು ಬಾಷಣ ಮಾಡಿ

ದವರು ಕುಣಿಗಲ್ ಸರ್ಕಾರಿ ಕಾಲೇಜು ಕನ್ನಡ ಅಧ್ಯಾಪಕರಾದ ಶ್ರೀಯುತ ಶ್ಯಾಮ ಸುಂದರ ಕೋಚಿ ಅವರು.

**೪ ಸಹೃದಯ ಗೋಷ್ಠಿ :**

ದಿನಾಂಕ 23-11-95ರಂದು ಪ್ರತಿಷ್ಠಾನದ ಕಾರ್ಯಾಲಯದಲ್ಲಿ ನಡೆದ ಸಹೃದಯ ಗೋಷ್ಠಿ ಕಾರ್ಯಕ್ರಮದಲ್ಲಿ ಶ್ರೀ. ಜಿ. ಮಹದೇವ ಪ್ರಕಾಶ್ ಅವರು ಸ್ವರಚಿತ ಕವನಗಳ ವಾಚನ ಮಾಡಿದರು.

**೫. ದಾನದತ್ತಿಗಳ ಕೊಡುಗೆ :**

೧. **ಹಸ್ತಪ್ರತಿದಾನ** : ಶ್ರೀ ರಾಜಗೋಪಾಲ್ ಅವರು ಎರಡು ಓಲೆಯ ಗರಿ ಕಟ್ಟುಗಳನ್ನು ಪ್ರತಿಷ್ಠಾನಕ್ಕೆ ದಾನವಾಗಿ ನೀಡಿದ್ದಾರೆ.

೨. **ಗ್ರಂಥದಾನ**:– ಪ್ರೊ|| ಎಲ್. ಎಸ್. ಶೇಷಗಿರಿ ರಾವ್ ಅವರು 28 ಕೃತಿಗಳನ್ನೂ ಶ್ರೀ ಟಿ. ವಿ. ವೆಂಕಟರಮಣಯ್ಯನವರು 3 ಕೃತಿಗಳನ್ನೂ ಡಾ|| ಎಂ. ಎ. ಜಯಚಂದ್ರ ಅವರು 4 ಕೃತಿಗಳನ್ನೂ ಶ್ರೀ ಸಿ. ಎಸ್. ಗೋವಿಂದ ರಾವ್ ಅವರ 5 ಗ್ರಂಥಗಳನ್ನೂ ಪ್ರೊ. ಡಿ. ಲಿಂಗಯ್ಯ ಅವರು 21 ಕೃತಿಗಳನ್ನೂ ಶ್ರೀ. ಎನ್. ಎಸ್. ರಾಮಸ್ವಾಮಿ ಅಯ್ಯರ್ ಅವರು 31 ಪುಸ್ತಕಗಳನ್ನೂ ಪ್ರತಿಷ್ಠಾನದ ಗ್ರಂಥಾಲಯಕ್ಕೆ ದಾನವಾಗಿ ನೀಡಿದ್ದಾರೆ.

ಬೆಳ್ಳೂರು ಬಿ. ಎಂ. ಶ್ರೀ. ಗ್ರಂಥಾಲಯಕ್ಕೆ ಈ ಕೆಳಕಂಡ ಸಂಸ್ಥೆಗಳು ಹಾಗೂ ಮಹನೀಯರು ಉದಾರವಾಗಿ ಇತ್ತಿರುವ ಗ್ರಂಥಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿದೆ.

1. ಪ್ರಜಾವಾಣಿ ಪತ್ರಿಕಾ ಕಾರ್ಯಾಲಯದವರು - 368 ಗ್ರಂಥಗಳು.
2. ಶ್ರೀ. ಬಿ. ನಂ. ಚಂದ್ರಯ್ಯನವರು, ಮೈಸೂರು – 160 ಕೃತಿಗಳು.
3. ಡಾ|| ಆರ್. ಎಲ್. ಅನಂತ ರಾಮಯ್ಯನವರು, ಮೈಸೂರು - 339 ಗ್ರಂಥಗಳು.
4. ಪ್ರೊ. ಜಿ. ಕೆ. ಗೋವಿಂದರಾವ್‌ನವರು, ಬೆಂಗಳೂರು – 8 ಕೃತಿಗಳು.
5. ಶ್ರೀ. ಎನ್. ಆರ್. ರಾವ್ ಅವರು, ಬೆಂಗಳೂರು – 19 ಕೃತಿಗಳು
6. ಡಾ|| ಪ್ರಧಾನ ಗುರುದತ್ ಅವರು, ಮೈಸೂರು – 26 ಕೃತಿಗಳು ಹಾಗೂ
7. ಶ್ರೀ. ಡಿ. ವಿ. ಕೆ. ಮೂರ್ತಿ ಅವರು, ಮೈಸೂರು – 78 ಕೃತಿಗಳು.

**೬. ಕಟ್ಟಡ ನಿಧಿಗೆ ಡಾ|| ಕೆ.ಶಿವರಾಮ ಕಾರಂತರ ಕೊಡುಗೆ :**

ಬಿ. ಎಂ. ಶ್ರೀ. ಪ್ರತಿಷ್ಠಾನಕ್ಕೆ ಬೆಂಗಳೂರು ಮಹಾನಗರ ಪಾಲಿಕೆಯು ಉಚಿತವಾಗಿ ನೀಡಿರುವ ನಿವೇಶನದಲ್ಲಿ ಬಿ. ಎಂ. ಶ್ರೀ ಭವನವನ್ನು ನಿರ್ಮಿಸುವ ಯೋಜನೆಗೆ ಪ್ರಸಿದ್ಧ ಸಾಹಿತಿಗಳೂ, ಜ್ಞಾನಪೀಠ ಪ್ರಶಸ್ತಿ ವಿಜೇತರೂ, ಆದ ಡಾ|| ಕೆ. ಶಿವರಾಮ ಕಾರಂತರು 20,000–00 ರೂಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಪ್ರತಿಷ್ಠಾನವು ಡಾ|| ಕಾರಂತರಿಗೆ ಚಿರಋಣಿಯಾಗಿರುತ್ತದೆ.

**ಆಸ್ಥಾನ ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ ಸ್ಮಾರಕ:–**

೪. **ದತ್ತಿ ಸ್ಥಾಪನೆ :–** ಮಹಾ ಪಂಡಿತರೂ, ಗ್ರಂಥಕರ್ತರೂ, ಸಾಹಿತ್ಯ ಪ್ರೇಮಿಗಳೂ ಆಗಿದ್ದ ಎಂ ಜಿ. ನಂಜುಂಡಾರಾಧ್ಯ ಅವರ ಹೆಸರಿನಲ್ಲಿ ; ಶ್ರೀ. ಎಂ. ಜಿ ನಂಜುಂಡಾರಾಧ್ಯ ಸ್ಮಾರಕ ಸಮಿತಿಯ ಪದಾಧಿಕಾರಿಗಳು ಬಿ. ಎಂ. ಶ್ರೀ. ಪ್ರತಿಷ್ಠಾನಕ್ಕೆ 10,000 ರೂಗಳನ್ನು ನೀಡಿ, ಶ್ರೀ. ಎಂ. ಜಿ. ನಂಜುಂಡಾರಾಧ್ಯ ಸ್ಮಾರಕ ದತ್ತಿ ನಿಧಿಯನ್ನು ಸ್ಥಾಪಿಸಿರುತ್ತಾರೆ.

೫. **ದಾಸ ಸಾಹಿತ್ಯ ದತ್ತೆ ನಿಧಿ :–** ಮೈಸೂರಿನ ಪ್ರಸಿದ್ಧ ಕಾದಂಬರಿಕಾರರಾದ ಶ್ರೀ ಸಮೇತನಹಳ್ಳಿ ರಾಮರಾವ್ ಅವರು ತಮ್ಮ ಪ್ರಕಾಶನ ಸಂಸ್ಥೆಯಾದ ದಾಸ ಸಾಹಿತ್ಯ ವೇದಿಕೆಯ ಹೆಸರಿನಲ್ಲಿ 5000.00ರೂ ಗಳು ಒಂದು ದತ್ತಿ ನಿಧಿಯನ್ನು ಪ್ರತಿಷ್ಠಾನದಲ್ಲಿ ಸ್ಥಾಪಿಸಿದ್ದಾರೆ.

೬. **ಪ್ರತಿಷ್ಠಾನಕ್ಕೆ ದಾನ :–** ಪ್ರತಿಷ್ಠಾನಕ್ಕೆ ಈ ಕೆಳಕಂಡ ದಾನಿಗಳು ವಿವಿಧ ದಾನಗಳನ್ನು ನೀಡಿದ್ದಾರೆ.

| | |
|---|---|
| 1. ಶ್ರೀ. ಎಂ. ಎಸ್. ರಾಮಪ್ರಸಾದ್ ಅವರು : ಪ್ರತಿಷ್ಠಾನಕ್ಕೆ | 1,500–00 |
| ಹಾಗೂ ಶಾಶ್ವತ ನಿಧಿಗೆ | 1,500–00 |
| 2. ಶ್ರೀ ಹೆಚ್. ಎನ್. ದಯಾನಂದ ಅವರು ಬೆಳ್ಳೂರು ಭವನಕ್ಕೆ | 500–00 |
| 3. ಡಾ॥ ಡಿ. ವಿ. ಪರಮ ಶಿವಮೂರ್ತಿ ಅವರು ಶಾಶ್ವತ ನಿಧಿಗೆ | 300–00 |
| 4. ಶ್ರೀಮತಿ ಶಾರದ ಆರ್.ರಾವ್ ಅವರು ಸಾಹಿತ್ಯೋಪಾಸಕರು ಕಾರ್ಯಕ್ರಮ ನಿಧಿಗೆ | 50–00 |

**ಮಹಾನಗರ ಪಾಲಿಕೆಯ ಅನುದಾನ:–** ಬೆಂಗಳೂರು ಮಹಾನಗರ ಪಾಲಿಕೆಯು ಪ್ರತಿಷ್ಠಾನಕ್ಕೆ 2000–00 ರೂಗಳ ವಾರ್ಷಿಕ ಅನುದಾನವನ್ನು ಮಂಜೂರು ಮಾಡಿದೆ. ಈ ಎಲ್ಲ ಮಹನೀಯರಿಗೂ ಪ್ರತಿಷ್ಠಾನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸುತ್ತದೆ.

೭. **ಹಸ್ತಪ್ರತಿ ಶಾಸ್ತ್ರ ತರಗತಿ :–** ಪ್ರತಿಷ್ಠಾನವು ನಡೆಸುತ್ತ ಬಂದಿರುವ ಹಸ್ತಪ್ರತಿ ಶಾಸ್ತ್ರ ತರಗತಿಗಳ 1995ನೆಯ ಸಾಲಿನ ತರಗತಿಗಳನ್ನು ಪ್ರಸಿದ್ಧ ಸಾಹಿತಿಗಳೂ, ವಿಮರ್ಶಕರೂ ಆದ ಡಾ॥ ಟಿ. ವಿ. ವೆಂಕಟಾಚಲ ಶಾಸ್ತ್ರಿಗಳು ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ಹಿತವಚನಗಳನ್ನಿತ್ತು, ಶುಭ ಹಾರೈಸಿ. ಪ್ರತಿಷ್ಠಾನದ ಈ ಅಮೂಲ್ಯ ಸೇವೆಯನ್ನು ಶ್ಲಾಘಿಸಿದರು. ಪ್ರತಿಷ್ಠಾನದ ಅಧ್ಯಕ್ಷರಾದ ಪ್ರೊ॥ ಎಸ್. ಬಸವಾರಾಧ್ಯರು ಪ್ರಾಸ್ತಾವಿಕ ಭಾಷಣ ಮಾಡಿದರು.

## ೮. ಬೆಳ್ಳೂರು ಬಿ. ಎಂ. ಶ್ರೀ ಭವನದಲ್ಲಿ ಸಮಾರಂಭ

ದಿನಾಂಕ 26–9–95ರಂದು ಬಿ. ಎಂ. ಶ್ರೀ ಪ್ರತಿಷ್ಠಾನ, ಬಿ. ಎಂ. ಶ್ರೀ ಭವನ, ಬೆಳ್ಳೂರು. ಇಲ್ಲಿ ಮನವಿ ಪತ್ರ ಬಿಡುಗಡೆ ಮತ್ತು ಸಂಪನ್ಮೂಲ ಸಂಗ್ರಹ ಸಮಾರಂಭವು ಶ್ರೀಶ್ರೀಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿತು. ಪ್ರೊ. ಅ. ರಾ. ಮಿತ್ರ ಅವರು ಮನವಿ ಪತ್ರವನ್ನು ಬಿಡುಗಡೆ ಮಾಡಿದರು.

ಸಂಪನ್ಮೂಲ ಸಂಗ್ರಹದ ನೇತೃತ್ವವನ್ನು ಮಂಡ್ಯ ಜಿಲ್ಲಾ ಪರಿಷತ್ತಿನ ಮಾಜಿ ಅಧ್ಯಕ್ಷ ಶ್ರೀ. ಕೆ. ಸಿಂಗಾರಿ ಗೌಡರು ಮತ್ತು ಮಂಡ್ಯದ ಪ್ರಸಿದ್ಧ ಪತ್ರಿಕೋದ್ಯಮಿ ಶ್ರೀ. ಪಿ. ಎನ್. ಜವರಪ್ಪ ಗೌಡರು ವಹಿಸಿದ್ದರು. ಶ್ರೀ. ಸಿ. ಅಣ್ಣೇಗೌಡ (ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಮಂಡ್ಯ) ಇವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದರು. ಮುಧೋಳ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಡಾ|| ಎಚ್. ಎಲ್. ನಾಗೇಗೌಡರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದು ಕಾರ್ಯಕ್ರಮವನ್ನು ನೆರವೇರಿಸಿ ಕೊಟ್ಟರು.

ಬೆಳ್ಳೂರಿನ ಬಿ. ಎಂ. ಶ್ರೀ. ಭವನವನ್ನು ಮಾದರಿ ಕವಿ ಸ್ಮಾರಕವಾಗಿ. ಪ್ರೇಕ್ಷಣೀಯ ಕೇಂದ್ರವನ್ನಾಗಿಸುವಲ್ಲಿ ಪ್ರತಿಷ್ಠಾನ ಹೊರತಂದಿರುವ ಮನವಿ ಪತ್ರದಲ್ಲಿರುವ ಬಿ.ಎಂ.ಶ್ರೀ ಜೀವನ ಸಾಧನೆ ಕುರಿತ 'ವಸ್ತು ಸಂಗ್ರಹಾಲಯ', 'ಗ್ರಂಥಾಲಯ'. ಬಿ. ಎಂ. ಶ್ರೀ 'ಸಭಾಂಗಣ'ದಲ್ಲಿ ಪ್ರತಿ ತಿಂಗಳೂ ಕಾರ್ಯಕ್ರಮಗಳು ನಿರಂತರವಾಗಿ ನಡೆಯುವಂತಾಗುವುದು – ಇದಕ್ಕೆಲ್ಲ ಮಂಡ್ಯ ಜಿಲ್ಲೆಯ ಅಭಿಮಾನಿಗಳು ಆಸಕ್ತಿವಹಿಸಿ ಹಣ ಸಂಗ್ರಹಿಸಬೇಕು. ಕನಿಷ್ಟ 5 ಲಕ್ಷ ರೂಗಳ 'ಅಭಿವೃದ್ಧಿ ನಿಧಿ'ಯನ್ನು ಕೂಡಿಸಬೇಕೆಂಬ ನಿರ್ಣಯವನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

ಸ್ಥಳದಲ್ಲಿಯೇ ಹಲವು ಮಹನೀಯರು ಸಹಾಯ ಧನವನ್ನು ನೀಡಿದರು ಬೆಂಗಳೂರಿನ ಲಕ್ಷ್ಮೀ ಪ್ರಿಂಟರ್ಸ್‌ನವರು ಉದಾರ ಕೊಡುಗೆಯಾಗಿ ಮನವಿ ಪತ್ರಗಳನ್ನು ಮುದ್ರಿಸಿಕೊಟ್ಟಿರುವುದನ್ನು ಸಭೆ ಕೃತಜ್ಞತೆಯಿಂದ ಸ್ಮರಿಸಿತು. ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಎನ್. ಬಸವಾರಾಧ್ಯರು ಸ್ವಾಗತ ಮಾಡಿದರು. ಸ್ಥಾನಿಕ ಸಮಿತಿ ಕಾರ್ಯಾಧ್ಯಕ್ಷರಾದ ಶ್ರೀ ಎಸ್. ಕೃಷ್ಣಮೂರ್ತಿ ಹಾಗೂ ಕಾರ್ಯದರ್ಶಿ ಶ್ರೀ ಎಚ್.ಕೆ. ಸುರೇಶ್ ಅವರು ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಿದ್ದರು. *

# ಅಭಿನಂದನೆ

---

## ಪ್ರಶಸ್ತಿಗಳು, ಸನ್ಮಾನಗಳು.

### ಮನುಶ್ರೀ ಪ್ರಶಸ್ತಿ

ದಾನ ಚಿಂತಾಮಣಿ ಅತ್ತಿಮಬ್ಬೆ ಸ್ಮಾರಕ ೧೯೯೫ನೆಯ ವರ್ಷದ ರಾಷ್ಟ್ರೀಯ ಪ್ರಶಸ್ತಿಯನ್ನು ಕನ್ನಡ ಸಾಹಿತ್ಯಪರಿಷತ್ತಿನ ಅಧ್ಯಕ್ಷರಾದ ಡಾ|| ಸಾ. ಶಿ. ಮರುಳಯ್ಯನವರು ಪಡೆದಿರುತ್ತಾರೆ. ಅತ್ತಿಮಬ್ಬೆ ಪ್ರತಿಷ್ಠಾನ ಟ್ರಸ್ಟಿನ ಈ ಪ್ರಶಸ್ತಿಯು ಸಾಹಿತ್ಯ ಲೋಕಕ್ಕೆ ಸಲ್ಲಿಸಿರುವ ವಿಶೇಷ ಸೇವೆಯ ಉಪಲಕ್ಷ್ಯವಾಗಿರುತ್ತದೆ. ಈ ಪ್ರಶಸ್ತಿ ಪ್ರದಾನ ಸಮಾರಂಭ ೨೩-೭-೧೯೯೫ ರಂದು ಎನ್.ಎಂ.ಕೆ.ಆರ್.ವಿ. ಕಾಲೇಜಿನಲ್ಲಿ ನೆರವೇರಿತು. ಸಚಿವರಾದ ಶ್ರೀ ಎಂ.ಪಿ. ಪ್ರಕಾಶ್ ಅವರು, ಡಾ || ಸಾ. ಶಿ. ಮರುಳಯ್ಯನವರಿಗೆ ಪ್ರಶಸ್ತಿನೀಡಿ, ಶಾಲು ಹೊದಿಸಿ, ಕಾಣಿಕೆಯೊಂದಿಗೆ ಗೌರವಿಸಿದರು. ಹಿಂದೆ, ಪ್ರಥಮವಾಗಿ ಈ ಮನುಶ್ರೀ ಪ್ರಶಸ್ತಿಯನ್ನು ಲೇಖಕಿ ಶ್ರೀಮತಿ ಉಷಾನವರತ್ನರಾಂ ಅವರಿಗೆ ನೀಡಲಾಗಿದ್ದಿತು.

ಡಾ || ಮರುಳಯ್ಯನವರು ಖ್ಯಾತ ಕವಿ, ವಿಮರ್ಶಕರು, ವಾಗ್ಮಿ ಹಾಗೂ ಸಮರ್ಥ ಪ್ರಾಧ್ಯಾಪಕರಾಗಿ ನಿವೃತ್ತರಾದವರು. ಸುಮಾರು ೭೦ ಕೃತಿಗಳನ್ನು ರಚಿಸಿರುವ ಇವರ 'ಕೆಂಗನ ಕಲ್ಲು' ಕವನ ಸಂಕಲನಕ್ಕೆ ೧೯೭೨ ರಲ್ಲಿ ರಾಜ್ಯಪ್ರಶಸ್ತಿ, 'ಭಾಸನ ಮಕ್ಕಳು' (೧೯೭೨) ವಿಮರ್ಶೆಗೆ ದೇವರಾಜ ಬಹದ್ದೂರ್ ಪ್ರಶಸ್ತಿ ಬಂದಿವೆ.

### ರಾಷ್ಟ್ರಪತಿ ಸನ್ಮಾನ

ರಾಷ್ಟ್ರಪತಿ ಶಂಕರ ದಯಾಳ ಶರ್ಮಾ ಅವರು ೨೨-೮-೧೯೯೫ ರಂದು ೧೫ ಮಂದಿ ವಿದ್ವಾಂಸರನ್ನು, ಮೂವರು ಅರಬ್ಬಿ ಭಾಷಾ ಮೌಲ್ವಿಗಳನ್ನು ಮತ್ತು ಮೂವರ್ ಪರ್ಷಿಯನ್ ಭಾಷಾ ಪಂಡಿತರನ್ನು ಸನ್ಮಾನಿಸಿದರು. ಸಂಸ್ಕೃತ ವಿದ್ವಾಂಸರಲ್ಲಿ ನಮ್ಮ ಕರ್ನಾಟಕದ ವಿದ್ವಾನ್ ಎನ್. ರಂಗನಾಥ ಶರ್ಮರೂ ಒಬ್ಬರಾಗಿದ್ದಾರೆ. ೧೯೯೪ನೆಯ ವರ್ಷದ ಈ ಪ್ರಶಸ್ತಿಯಲ್ಲಿ ಪ್ರತಿಯೊಂದೂ ಇಪ್ಪತ್ತು ಸಾವಿರ ರೂ. ನಗದು, ಒಂದು ಪ್ರಮಾಣ ಪತ್ರ, ಹಾಗೂ ಶಾಲು ಒಳಗೊಂಡಿದ್ದುವು.

### ಮುದ್ದಣ ಪ್ರಶಸ್ತಿ

೧೯೯೫ ನೆಯ ವರ್ಷದ ಮುದ್ದಣ ಸ್ಮಾರಕ ಪ್ರಶಸ್ತಿಗೆ ಕನ್ನಡದ ಖ್ಯಾತ ನವ್ಯ ಕವಿ, ವಿಮರ್ಶಕ ಹಾಗೂ ಲೇಖಕರಾದ ಶ್ರೀ ಸುಬ್ರಾಯ ಚೊಕ್ಕಾಡಿ ಅವರನ್ನು ಆಯ್ಕೆ

ಮಾಡಲಾಗಿದೆ. ಚೊಕ್ಕಾಡಿಯವರ "ಇದರಲ್ಲಿ ಅದು" ಎಂಬ ಕವನ ಸಂಕಲನಕ್ಕೆ ಈ ಪ್ರಶಸ್ತಿ ಬಂದಿರುತ್ತದೆ. ದಿ. ಪಟೀಲ್ ಪುನರೂರು ವಾಸುದೇವ್‌ರಾವ್ ಪ್ರತಿಷ್ಠಾನದ ವತಿಯಿಂದ ಕೊಡಲಾಗುವ ಈ ಪ್ರಶಸ್ತಿ ಮೂರುಸಾವಿರ ರೂ. ನಗದನ್ನು ಮತ್ತು ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

### ಬೇಂದ್ರೆ-ಅಡಿಗ ಪ್ರಶಸ್ತಿ

ಬೆಂಗಳೂರು ನಗರದ ಪ್ರತಿಭಾ ಯುವ ವೇದಿಕೆಯಿಂದ ನೀಡಲಾಗುತ್ತಿರುವ ೧೯೯೩/೯೪ ನೆಯ ವರ್ಷದ ಬೇಂದ್ರೆ-ಅಡಿಗ ಕಾವ್ಯ ಪ್ರಶಸ್ತಿಯನ್ನು ಶ್ರೀ ವೆಂಕಟರಮಣ ಗೌಡ ಅವರ "ಪಾಂಗು" ಮತ್ತು ಅರುಂಧತಿ ರಮೇಶ್ ಅವರ "ಮುಂಜಾವಿನ ಬೆಳದಿಂಗಳು" ಎಂಬ ಅಪ್ರಕಟಿತ ಕವನಸಂಕಲನಗಳಿಗೆ ಕೊಡಲಾಗಿದೆ. ಈ ಪ್ರಶಸ್ತಿಯು ಒಂದು ಸಾವಿರ ರೂ. ಮತ್ತು ಫಲಕವನ್ನು ಒಳಗೊಂಡಿದೆ

### ವಿಶ್ವೇಶ್ವರಯ್ಯ ಪ್ರಶಸ್ತಿ

ಬೆಂಗಳೂರಿನ ಎಂ. ವಿಶ್ವೇಶ್ವರಯ್ಯ ಪ್ರತಿಷ್ಠಾನ ಟ್ರಸ್ಟ್ ಆಶ್ರಯದಲ್ಲಿ, ರವೀಂದ್ರ ಕಲಾಕ್ಷೇತ್ರದಲ್ಲಿ ೧೫-೯-೯೫ ರಂದು ವಿಚಾರಸಂಕಿರಣ, ಸಾಹಿತ್ಯಪ್ರಶಸ್ತಿ ಮತ್ತು ಗಣ್ಯರಿಗೆ ಪುರಸ್ಕಾರ ಸಮಾರಂಭ ನಡೆಯಿತು. ಸಮೇತನಹಳ್ಳಿ ರಾಮರಾಯರಿಗೆ ಮತ್ತು ರೇಖಾ ಕಾಖಂಡಕಿ ಅವರಿಗೆ ೧೯೯೪ರ ವಿಶ್ವೇಶ್ವರಯ್ಯ ಸಾಹಿತ್ಯಪ್ರಶಸ್ತಿಯನ್ನು ನೀಡಲಾಯಿತು. ಇದರೊಂದಿಗೆ ಕೆಲಮಂದಿ ಗಣ್ಯವ್ಯಕ್ತಿಗಳನ್ನೂ ಪ್ರಶಸ್ತಿ ನೀಡಿ ಗೌರವಿಸಲಾಯಿತು.

### ರಾಜ್ಯೋತ್ಸವ ಪ್ರಶಸ್ತಿ

ಕರ್ನಾಟಕ ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿದ ನಲುವತ್ತು ಮಂದಿ ಗಣ್ಯರಿಗೆ ೧೯೯೫ನೆಯ ವರ್ಷದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಘೋಷಿಸಿ ನೀಡಲಾಗಿದೆ. ಆಯ್ಕೆ ಸಮಿತಿಯು ೨೨ ಮಂದಿಯನ್ನು ಮಾತ್ರ ಆಯ್ಕೆ ಮಾಡಿದ್ದರೂ ಭಾಷಾವಾರು ಪ್ರಾಂತರಚನೆಯಾಗಿ ನಲುವತ್ತನೆಯ ವರ್ಷ ಬಂದಿರುವುದರಿಂದ ಅಷ್ಟೇ ಸಂಖ್ಯೆಯ ಗಣ್ಯರಿಗೆ ರಾಜ್ಯ ಪ್ರಶಸ್ತಿ ನೀಡಲು ಸರಕಾರವು ಉದ್ದೇಶಿಸಿದ್ದಿತು. ಈ ಪ್ರಶಸ್ತಿ ಹತ್ತು ಸಾವಿರ ರೂ. ಬೆಲೆಯ ಚಿನ್ನದ ಪದಕ, ಶಾಲು, ಪ್ರಶಸ್ತಿ ಪತ್ರಗಳನ್ನು ಒಳಗೊಂಡಿದ್ದಿತು. ಪ್ರಶಸ್ತಿಗಳಲ್ಲಿ ಸಾಹಿತ್ಯಕ್ಕಾಗಿ ಆಯ್ಕೆಗೊಂಡವರಿವರು- ಸತ್ಯಕಾಮ, ಚಂದ್ರಶೇಖರ ಪಾಟೀಲ, ಸುಮತೀಂದ್ರನಾಡಿಗ್, ಇಬ್ರಾಹಿಮ್ ಸುತಾರ್, ಶ್ರೀಮತಿ ಸಾರಾ ಅಬೂಬಕರ್. ನ್ಯಾಯಾಂಗ. ಸರ್ವ ಧರ್ಮ ಸಮನ್ವಯ, ಭಾವೈಕತೆ, ಸಮಾಜ ಶಾಸ್ತ್ರ, ಪತ್ರಿಕೋದ್ಯಮ, ಆಡಳಿತ ಮತ್ತು ಸೇವೆ, ಕ್ರೀಡೆ, ವೈದ್ಯ ಸಂಗೀತ, ಜಾನಪದ, ಚಲನ ಚಿತ್ರ, ಸ್ವದೇಶಿ ಆಂದೋಲನ, ರಚನಾತ್ಮಕ ಕಾರ್ಯ, ಪರಿಸರ ರಕ್ಷಣೆ, ಲಲಿತಕಲೆ, ಚಿತ್ರಕಲೆ, ವಾಸ್ತುಶಿಲ್ಪ, ಕುಸ್ತಿ, ಶಿಕ್ಷಣ- ಎಂಬ ವಿಷಯಾನುಗುಣವಾಗಿ ಇತರ ಗಣ್ಯರಿಗೂ ಪ್ರಶಸ್ತಿ ನೀಡಲಾಗಿದೆ.

## ಮಹಿಳಾ ಪ್ರಶಸ್ತಿ

ಬೆಂಗಳೂರು ನಗರ ಮಹಿಳಾ ಸಂಘ ವಿವಿಧ ಕ್ಷೇತ್ರಗಳಲ್ಲಿ ಪ್ರಶಂಸಾರ್ಹ ಸೇವೆ ಸಲ್ಲಿಸುತ್ತಿರುವ ೧೯ ಮಂದಿ ಮಹಿಳೆಯರನ್ನು 'ವಿಶ್ವ ಮಹಿಳೆ-೯೫' ಪ್ರಶಸ್ತಿಗೆ ಆಯ್ಕೆ ಮಾಡಿದೆ. ಸಾಹಿತ್ಯ ಪ್ರಶಸ್ತಿ ಪಡೆದವರು ಕಾಕೋಳ್ ಸರೋಜಾರಾವ್, ಪತ್ರಿಕೋದ್ಯಮದಲ್ಲಿ ಶ್ರೀಮತಿ ನಾಗಮಣಿ ಎಸ್. ರಾವ್.

## ಜಾನಪದ ಶ್ರೀ ಪ್ರಶಸ್ತಿ

ಕನ್ನಡದ ವಯೋವೃದ್ಧ ಜನಪದ ಸಾಹಿತಿ, ಹಿರಿಯ ಸ್ವಾತಂತ್ರ್ಯ ಯೋಧ, ಜಾನಪದ ವಿದ್ವಾಂಸ, ಚಲನಚಿತ್ರಗೀತಕಾರ-ಇತ್ಯಾದಿ ವಿಶೇಷತೆಗಳನ್ನು ಪಡೆದಿರುವ ಡಾ|| ಎಸ್. ಕೆ. ಕರೀಂಖಾನರು ಈ ವರ್ಷದಿಂದ ರಾಜ್ಯ ಸರ್ಕಾರ ಕೊಡಮಾಡಲಿರುವ 'ಜಾನಪದ ಶ್ರೀ' ಪ್ರಶಸ್ತಿಗೆ ಆಯ್ಕೆಯಾಗಿರುತ್ತಾರೆ. ಈ ಪ್ರಶಸ್ತಿ ಒಂದು ಲಕ್ಷ ರೂ. ನಗದನ್ನೂ ಪ್ರಶಸ್ತಿ ಪತ್ರವನ್ನೂ ಒಳಗೊಂಡಿರುತ್ತದೆ.

ಡಾ|| ಕರೀಂಖಾನರಿಗೆ ಮಂಡ್ಯಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ೧೫-೧೧-೯೫ ರಲ್ಲಿ 'ಜೀಶಂಪ ಜಾನಪದ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ. ಇವರು ಕನ್ನಡಕ್ಕಾಗಿ ಅದರಲ್ಲಿಯೂ ಜಾನಪದ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅಪಾರವಾದುದು. ಜಾನಪದ-ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

## ಗೊರೂರು ಪ್ರಶಸ್ತಿ

ಗೊರೂರು ಪ್ರತಿಷ್ಠಾನದ ೧೯೯೫ನೆಯ ವರ್ಷದ ಗೊರೂರು ಪ್ರಶಸ್ತಿಗೆ ಕನ್ನಡದ ಶ್ರೇಷ್ಠ ಕವಿ ಮತ್ತು ಸಾಹಿತಿಯಾಗಿರುವ ಪ್ರೊ|| ಎಸ್. ವಿ. ಪರಮೇಶ್ವರ ಭಟ್ಟರನ್ನು ಆಯ್ಕೆ ಮಾಡಲಾಗಿದೆ. ಈ ಎಲ್ಲ ಮಾನ್ಯರಿಗೂ ಪ್ರತಿಷ್ಠಾನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತದೆ. *

# ಶ್ರದ್ಧಾಂಜಲಿ

---

**ಸು. ರಂ. ಎಕ್ಕುಂಡಿ**

ಸುಮಾರು ಐದು ದಶಕಗಳಿಗೂ ಹೆಚ್ಚು ಕಾಲ ಕಾವ್ಯಕೃಷಿಯನ್ನು ಮಾಡಿದ ಹಿರಿಯ ಕವಿ ಸು. ರಂ. ಎಕ್ಕುಂಡಿ ಅವರು ೩೦–೮–೯೫ರಂದು ದಿವಂಗತರಾದರು. ಅವರ 'ಬಕುಲದ ಹೂವುಗಳು' ಎಂಬ ಕವನ ಸಂಕಲನಕ್ಕೆ ೧೯೯೩ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿದ್ದಿತು. ೧೯೮೫ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ೧೯೭೦ರಲ್ಲಿ ಅವರ ಅನುವಾದ ಕೃತಿಗೆ ಸೋವಿಯಟ್ ಲ್ಯಾಂಡ್ ನೆಹರೂ ಶಾಂತಿ ಪ್ರಶಸ್ತಿ ಲಭಿಸಿದ್ದುವು. ೧೯೨೩ರಲ್ಲಿ ಜನಿಸಿದ ಅವರು ಸಾಂಗ್ಲಿಯ ವೆಲ್ಲಿಂಗ್‌ಟನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ ನಿವೃತ್ತರಾಗಿದ್ದರು. ವಾದಿರಾಜರ ಕೃತಿಗಳ ಸಂಶೋಧನೆಗಾಗಿ ಕೇಂದ್ರ ಸಾಹಿತ್ಯ ಫೆಲೋಶಿಪ್ ಪಡೆದಿದ್ದ ಅವರು ಸಂಶೋಧನೆ ಪೂರ್ಣವಾಗುವ ಮೊದಲೇ ದಿವಂಗತರಾದರು.

**ಡಿ. ಪದ್ಮನಾಭಶರ್ಮ**

ಕನ್ನಡ–ಸಂಸ್ಕೃತ ಉಭಯ ಭಾಷಾ ವಿದ್ವಾಂಸರಾದ ಭುವನಹಳ್ಳಿ ಡಿ. ಪದ್ಮನಾಭ ಶರ್ಮರು ದಿನಾಂಕ ೨೭–೭–೧೯೯೫ರಂದು ಬೆಂಗಳೂರಿನಲ್ಲಿ ಕಾಲವಶರಾದರು. ಅವರು ಅತ್ಯಂತ ಸರಳ ಸಜ್ಜನರಾಗಿದ್ದು ನಿಗರ್ವಿಯಾದ ಘನ ವಿದ್ವಾಂಸರು. ಕತೆ, ಕಾದಂಬರಿ, ಜೀವನ ಚರಿತ್ರೆ–ಮುಂತಾದುವನ್ನಲ್ಲದೆ, ಶಬ್ದಾನುಶಾಸನದಂತಹ ಪ್ರೌಢ ಕನ್ನಡ ವ್ಯಾಕರಣ ವ್ಯಾಖ್ಯಾನ ಗ್ರಂಥವನ್ನೂ ರಚಿಸಿರುತ್ತಾರೆ : ಸುಮಾರು ನೂರಹತ್ತು ಗ್ರಂಥಗಳನ್ನೂ, ನೂರಾರು ಲೇಖನಗಳನ್ನೂ ಬರೆದು ಜೈನ ಸಾಹಿತ್ಯವನ್ನು ವಿಶೇಷವಾಗಿ ಬೆಳಗಿಸಿದ್ದಾರೆ. ಶ್ರೀಮತಿ ರಾಧಾದೇವಿ ಎಂಬವರಿಂದ ರಚನಾ ಪ್ರಾರಂಭವಾದ, ವರ್ಧಮಾನ ಚರಿತೆ ಎಂಬ ಸಾಂಗತ್ಯ ಕಾವ್ಯವನ್ನು ಇವರು ಪೂರ್ಣಗೊಳಿಸಿದರಲ್ಲದೆ, ೧೯೯೩ರಲ್ಲಿ ಪ್ರಕಾಶಿತವಾದ ಈ ಗ್ರಂಥಕ್ಕೆ ದೇವೇಂದ್ರ ಕೀರ್ತಿ ಪ್ರಶಸ್ತಿ ದೊರಕಿದೆ. ಇವರಿಗೆ ಜೈನ ಸಾಹಿತ್ಯ ಭೂಷಣ, ಜೈನಸಿದ್ಧಾಂತ ವಾರಿಧಿ, ವಿದ್ಯಾವಿಭೂಷಣ, ಸಿದ್ಧಾಂತ ಶಿರೋಮಣಿ ಬಿರುದುಗಳಿದ್ದವು. ೩೩ ವರ್ಷ ಅಧ್ಯಾಪಕರಾಗಿದ್ದರು.

**ಹೆಚ್. ವಿ ಸಾವಿತ್ರಮ್ಮ**

ಕನ್ನಡದ ಸುಪ್ರಸಿದ್ಧ ಸಾಹಿತಿ, ಕಾದಂಬರಿಕಾರ್ತಿ, ಅನುವಾದಕಿ, ಸಣ್ಣ ಕತೆಗಾರ್ತಿಯಾಗಿ ನಾಡು ನುಡಿಗಳಿಗೆ ಅಪಾರ ಸೇವೆ ಸಲ್ಲಿಸಿದ ಶ್ರೀಮತಿ ಎಚ್. ವಿ ಸಾವಿತ್ರಮ್ಮ

ನವರು ೨೭-೧೨-೯೫ರ ಸಂಜೆ ದೈವಾಧೀನರಾದುದು ಕನ್ನಡಿಗರ ದುರ್ದೈವ ಹಾಗೂ ತುಂಬಲಾರದ ನಷ್ಟ. ಅವರ 'ಮದುವಣಗಿತ್ತಿ' ರಷ್ಯನ್ ಕಾದಂಬರಿಯ ಅನುವಾದಕ್ಕೆ ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ ಲಭಿಸಿತ್ತು. ೧೯೭೫ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದು ಗೌರವಕ್ಕೆ ಪಾತ್ರರಾಗಿದ್ದರು. ೧೯೯೨ರಲ್ಲಿ ಕರ್ನಾಟಕ ಲೇಖಕಿಯರ ಸಂಘದ 'ಅನುಪಮ' ಪ್ರಶಸ್ತಿಯನ್ನು ಗಳಿಸಿದ ಮೊದಲ ಲೇಖಕಿ ಇವರು.

ನಮ್ಮನ್ನಗಲಿದ ಇವರೆಲ್ಲರಿಗೂ ಬಿ.ಎಂ.ಶ್ರೀ ಪ್ರತಿಷ್ಠಾನ ಗೌರವ ಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.

—o—

## ಈ ಸಂಚಿಕೆಯ ಲೇಖಕರು

1. **ಬಿ. ಎಸ್. ಸಣ್ಣಯ್ಯ**
   33/1, 8ನೇ ಅಡ್ಡ ರಸ್ತೆ, ಜಯಲಕ್ಷ್ಮೀಪುರಂ
   ಮೈಸೂರು –12

2. **ಎಸ್. ಜಗನ್ನಾಥ್**
   'ಶಾಂಡಿಲ್ಯ' 2925, ಸರಸ್ವತೀಪುರ
   1ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಮೈಸೂರು - 570 009

3. **ಪ್ರೊ|| ಸಿ. ಮಹದೇವಪ್ಪ**
   ರಿಸರ್ಚ್ ಕಾರ್ನರ್, 197ನೇ ಮುಖ್ಯರಸ್ತೆ,
   ಬೆಂಗಳೂರು - 560 003

4. **ಡಾ. ಕೆಳದಿ ವೆಂಕಟೇಶ ಜೋಯಿಸ್**
   ಕೆಳದಿ ಮ್ಯೂಸಿಯಂ, ಕೆಳದಿ – 577 443

5. **ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ**
   68–ಬಿ, ಆಶ್ರಮದ ರಸ್ತೆ,
   ಜಯಲಕ್ಷ್ಮೀ ಪುರಂ, ಮೈಸೂರು

6. **ಡಾ. ಕೃಷ್ಣ ಪರಮೇಶ್ವರ ಭಟ್ಟ**
   ಕನ್ನಡ ಅಧ್ಯಯನ ಸಂಸ್ಥೆ,
   ಜ್ಞಾನ ಭಾರತಿ, ಬೆಂಗಳೂರು – 560 056

7. **ನಾ. ಗೀತಾಚಾರ್ಯ**
   ಬಿ. ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ,
   54, 3ನೇ ಕ್ರಾಸ್, ಗವಿಪುರ ವಿಸ್ತರಣ,
   ಬೆಂಗಳೂರು – 560 019

8. **ಕುಮಾರ ನಿಜಗುಣ ಸ್ವಾಮಿಗಳು**
   ನಿಜಗುಣ ನಿಲಯ, ಚಿಲಕವಾಡಿ,
   ಕೊಳ್ಳೆಗಾಲ ತಾಲ್ಲೂಕು – 571 442

9. **ಎಸ್. ಆರ್. ಮಳಗಿ**
   ನಿವೃತ್ತ ಕನ್ನಡ ಪ್ರಾಧ್ಯಾಪಕ,
   10 ಬಿ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 10

10. **ಟಿ. ಕೇಶವ ಭಟ್ಟ**
754, ಶ್ರೀ ವರ್ಧನ ; 15ನೇ ಮುಖ್ಯರಸ್ತೆ,
ಬನಶಂಕರಿ 2ನೇ ಹಂತ, ಬೆಂಗಳೂರು – 70.

11. **ಎಸ್. ಸೂರ್ಯನಾರಾಯಣ ರಾವ್**
ನಂ.1587/ಬಿ, 29ನೇ ಅಡ್ಡರಸ್ತೆ,
30ನೇ ಮುಖ್ಯರಸ್ತೆ, ಬನಶಂಕರಿ 3ನೇ ಹಂತ,
ಬೆಂಗಳೂರು – 70.

12. **ಡಾ. ಕೆ. ಸುಬ್ರಹ್ಮಣ್ಯ ಭಟ್ಟ**
ಕನ್ನಡ ಅಧ್ಯಯನ ವಿಭಾಗ,
ಜ್ಞಾನ ಭಾರತಿ, ಬೆಂಗಳೂರು - 560 056.

13. **ಪ್ರೊ. ಅ. ರಾ. ಮಿತ್ರ**
ನಂ. 51, ಮಂಜುನಾಥ ನಿಲಯ,
8ನೇ ಕ್ರಾಸ್, ಮಹಾಲಕ್ಷ್ಮೀ ಲೇಔಟ್,
ಫರ್ದರ್ ಎಕ್ಸ್ಟೆಂಷನ್,
ಬೆಂಗಳೂರು - 86.

14. **ಸೋಮಂಜೆ ಮಹಲಿಂಗ ಭಟ್ಟ**
ಅಂಚೆ. ಪೆರ್ಲ. 671552,
ಕಾಸರಗೋಡು ಜಿಲ್ಲೆ.

15. **ಅಶ್ವತ್ಥ ನಾರಾಯಣ ಜಿ.**
ಕನ್ನಡ ಅಧ್ಯಾಪಕ, ಬೆಂಗಳೂರು.

## ಪ್ರತಿಷ್ಠಾನದ ಗೌರವ ಸದಸ್ಯರು

1. ಪ್ರೊ|| ಎ. ಎನ್. ಮೂರ್ತಿರಾವ್ 2. ಡಾ|| ಪು. ತಿ. ನರಸಿಂಹಾಚಾರ್
3. ವಿದ್ವಾನ್ ಸೇಡಿಯಾಪು ಕೃಷ್ಣಭಟ್ಟ 4. ಪ್ರೊ|| ಎಸ್. ವಿ. ಪರಮೇಶ್ವರ ಭಟ್ಟ
5. ಪ್ರೊ|| ತ. ಸು. ಶಾಮರಾವ್ 6. ಡಾ|| ಜಿ. ಎಸ್. ದೀಕ್ಷಿತ್
7. ವಿದ್ವಾನ್ ಎನ್. ರಂಗನಾಥಶರ್ಮ 8. ಪ್ರೊ|| ಗರ್ಗೇಶ್ವರಿ ವೆಂಕಟಸುಬ್ಬಯ್ಯ
9. ಡಾ|| ಆರ್. ಸಿ. ಹಿರೇಮಠ

## ವಿಮರ್ಶೆಗಾಗಿ ಗ್ರಂಥಗಳ ಎರಡು ಪ್ರತಿಗಳನ್ನು ಕಳಿಸಬೇಕು

ಸೃಜನಾತ್ಮಕ ಗ್ರಂಥಗಳನ್ನು ಸಾಮಾನ್ಯವಾಗಿ ವಿಮರ್ಶೆ ಮಾಡಲಾಗುವುದಿಲ್ಲ. ಆದರೆ, ವೈಶಿಷ್ಟ್ಯವುಳ್ಳ ಅಂಥ ಗ್ರಂಥಗಳನ್ನು ಸಾಧ್ಯವಾದರೆ ಅವಲೋಕನ ಮಾಡಿಸಲಾಗುವುದು.

## ವಿನಿಮಯ ಪತ್ರಿಕೆಗಳು

1) ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ನಾಟಕ, ವಿಜ್ಞಾನ ಕರ್ನಾಟಕ, ಮೈಸೂರು 2) ಸಾಧನೆ, ಬೆಂಗಳೂರು 3) ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು. 4) ಮಿಥಿಕ್ ಸೊಸೈಟಿ ಜರ್ನಲ್, ಬೆಂಗಳೂರು. 5) ಬಸವ ಪಥ, ಬೆಂಗಳೂರು. 9) ಶಂಕರಭಾಸ್ಕರ, ಬೆಂಗಳೂರು. 7) ಧರ್ಮಪ್ರಭ, ಬೆಂಗಳೂರು. 8) ಜಾನಪದ ಜಗತ್ತು, ಬೆಂಗಳೂರು. 9) ಅಪರಂಜಿ, ಬೆಂಗಳೂರು 10) ಕರ್ನಾಟಕ ಭಾರತಿ, ಧಾರವಾಡ. 11) ಸುಗುಣಮಾಲಾ, ಉಡುಪಿ. 12) ಸತ್ಯಶುದ್ಧ ಕಾಯಕ, ಚಿತ್ರದುರ್ಗ 13) ತರಳಬಾಳು, ಸಿರಿಗೆರೆ. 14. J.L.A.S. Madras.

## ಕರ್ನಾಟಕ ಲೋಚನ : ಚಂದಾ ವಿವರ

| | | |
|---|---|---|
| ವಾರ್ಷಿಕ ಚಂದಾ | : | ವ್ಯಕ್ತಿಗಳಿಗೆ ರೂ. 15-00 |
| | | ಗ್ರಂಥಾಲಯ, ಸಂಘ-ಸಂಸ್ಥೆಗಳಿಗೆ ರೂ. 25-00 |
| ಆಜೀವ ಚಂದಾ : | | ರೂ. 150-00 |
| | | **ಪ್ರತಿಷ್ಠಾನದ ಸದಸ್ಯರಿಗೆ ಲೋಚನ ಉಚಿತ** |
| ಪ್ರತಿಷ್ಠಾನದ ಸದಸ್ಯತ್ವ | : | ವಾರ್ಷಿಕ ರೂ. 25-00 ಆಜೀವ ರೂ. 250-00 |
| ಬಿಡಿ ಪ್ರತಿ | : | ರೂ 10-00 |

KARNATAKA LOCHANA Half Yearly Journal, Published by B.M. Sri Smaraka Pratishthana, 54, M. V. Seetharamaiah Road, Masthi Nagara, (Gavipuram Extension), Bangalore-19. Printed by : Prabhu Mudrana, Bangalore-78 Ph : 6640976

Reg. No. 03260/23/2/ALTC/88 KARNATAKA LOCHANA

# ಪ್ರತಿಷ್ಠಾನದ ಈಚಿನ ಪ್ರಕಟನೆಗಳು

| | | ಉತ್ತಮ | ಸಾದಾ |
|---|---|---|---|
| 1. | ಸಂಗಮರ ಕಾಲದ ವಿಜಯನಗರ | | 75-00 |
| 2. | ಕುಮಾರವ್ಯಾಸ ಭಾರತ ಸಂಗ್ರಹ | 75-00 | 40-00 |
| 3. | ಕಾವ್ಯ-ಇತಿಹಾಸ (ದತ್ತಿ ಉಪನ್ಯಾಸಗಳು) | | 10-00 |
| 4. | ಶಂಬಾ ಕೃತಿಸಮೀಕ್ಷೆ | | 35-00 |
| 5. | ಎಂ. ವಿ. ಸೀ. ಸಂಸ್ಮರಣೆ | | 25-00 |
| 6. | ವೈಚಾರಿಕ ಜಾಗೃತಿ | | 15-00 |
| 7. | ಹಸ್ತಪ್ರತಿಶಾಸ್ತ್ರ ಪರಿಚಯ | | 15-00 |
| 8. | ಸಂವಿಧಾನ ಮತ್ತು ಕಾನೂನು | | 20-00 |
| 9. | ಮಾಸ್ತಿ ಕಥಾಸಮೀಕ್ಷೆ | | 20-00 |
| 10. | ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಜೀವನ ಚರಿತ್ರೆ) | | 15-00 |
| 11. | ಬಸವಪ್ಪ ಶಾಸ್ತ್ರಿಗಳು | | 25-00 |
| 12. | ನವ್ಯಸ್ಫೂರ್ತಿ (ಗೋಕಾಕ್ ಸಾಹಿತ್ಯ ಸಮೀಕ್ಷೆ) | | 35-00 |
| 13. | ಕದಂಬ (ಎಂ.ವಿ.ಸೀ. ಸಮಗ್ರ ಸಾಹಿತ್ಯ-1, ಸಮಗ್ರ ಸಂಶೋಧನಾ ಲೇಖನಗಳು ) | 100 | 80-00 |
| 14. | ಕವಿರಾಜಮಾರ್ಗ (ಎಂ.ವಿ.ಸೀ. ಸಮಗ್ರ ಸಾಹಿತ್ಯ-2) | 100-00 | 80-00 |
| 15. | ಕವಿರಾಜಮಾರ್ಗ ವಿವಕ್ಷೆ (ಸಮಗ್ರ ಸಾಹಿತ್ಯ- ; ಕವಿರಾಜಮಾರ್ಗವನ್ನು ಕುರಿತ ಲೇಖನಗಳು) | 100-00 | 80-00 |
| 16. | ಪದ್ಮಿನೀ ಕಲ್ಯಾಣ (ಸಂಪಾದಿತ) | | |

## ಸಿದ್ಧತೆಯಲ್ಲಿ

1. ತೌಲನಿಕ ಸಾಹಿತ್ಯ
2. ಸಾಹಿತ್ಯ ಮತ್ತು ಮನಶ್ಶಾಸ್ತ್ರ
3. ಶಾಸನ ಪದ್ಯ
4. ದತ್ತಿ ಉಪನ್ಯಾಸಗಳು
5. ತಿರುಕ್ಕುರಳ್ (ಕನ್ನಡಾನುವಾದ)
6. ಸಾಹಿತ್ಯೋಪಾಸಕರು ಲೇಖನಗಳು ಸಂಗ್ರಹ